Mr. DEPUTY SPEAKER.—The question is :

"That leave be granted to Sri H. N. Nanje Gowda to move the following motion :

"That this House resolves that Sri S. D. Kothavale be removed at once from the office of the Speaker of the Legislative Assembly.''

(36 Members stood up in favour of the motion)

According to rules not less than forty Members should stand up in favour of the motion. Since only 36 members stood up in favour of the motion, leave to move the motion is therefore *not granted*.

Sri H. SIDDAVEERAPPA.—If the rules permit the names of those who have supported the motion may kindly be recorded.

Mr. DEPUTY SPEAKER.—Rules do not provide for that. Next item, discussion on Motion of Thanks to the Governor's Address. Hon. Member Sri R. G. Wali to continue his speech.

Motion of thanks to the Governor's Address

(Debate Continued)

† ಶ್ರೀ ಆರ್. ಜಿ. ವಾಲಿ (ಹುಬ್ಬಳ್ಳಿ).—ಮಾನ್ಯ ಸಭಾಧ್ಯಕ್ಷರೇ, ನಾನು ನಿನ್ನೆಯ ದಿವಸ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ರೈತರ ಹಿತದ ಬಗ್ಗೆ ಕೆಲವೊಂದು ಸೂಚನೆಗಳನ್ನು ಈಗಾಗಲೇ ಮಾಡಿದ್ದೇನೆ. ಈಗ ಅದೇ ಭಾಷಣವನ್ನು ನಾನು ಮುಂದುವರಿಸುತ್ತೇನೆ. ನಮ್ಮ ರಾಜ್ಯದಲ್ಲಿ ರೈತರ ಹಿತಕ್ಕೆ ಸರ್ಕಾರದವರು ಎಷ್ಟೋ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂದು ರಾಜ್ಯಪಾಲರು ಹೇಳಿದ್ದಾರೆ. ಅದರಲ್ಲಿ ನಾನು ಕೆಲವೊಂದು ಸೂಚನೆಗಳನ್ನು ಮಾಡಬಯಸುತ್ತೇನೆ. ರೈತರಿಗೆ ಹಣವನ್ನು ಸಾಲವಾಗಿ ಕೊಡುವುದಕ್ಕಾಗಿ ಸರ್ಕಾರದವರು ಮೈಸೂರು ರಾಜ್ಯದ ಕೃಷಿ ಕೈಗಾರಿಕಾ ಕಾರ್ಪೋರೇಷನ್ ಅನ್ನು ಪ್ರಾರಂಭ ಮಾಡಿ ಅದರ ಮೂಲಕ ಸಾಲವಾಗಿ ಹಣವನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಂತಹ ಸಂಸ್ಥೆಗಳ ಮುಖಾಂತರ ರೈತರು ಹಣವನ್ನು ತೆಗೆದುಕೊಳ್ಳುವಾಗ ಆ ಹಣವನ್ನು ಪಡೆಯುವುದಕ್ಕೆ ಅವರು ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗುತ್ತದೆ. ಒಂದು ಟ್ರ್ಯಾಕ್ಟರ್ ಬೆಲೆಯನ್ನು ಕೊಡಬೇಕಾದರೆ ಸುಮಾರು 15 ಸಾವಿರ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಕೊಡಬೇಕು. ರೈತರ ಪರವಾಗಿ ಕೋ-ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗಳು ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗಿಲ್ಲ ಎಂದು ಸರಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೋ ಅದೇ ಕ್ರಮವನ್ನು ಅನುಸರಿಸಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮುಖಾಂತರ ಸಾಲವಾಗಿ ಸಿಕ್ಕುವ ಹಣದ ಮೇಲೆ ಸ್ಟ್ಯಾಂಪ್ ಡ್ಯೂಟಿ ಇರಬಾರದು. ಅದಕ್ಕಾಗಿ ಈ ಸೌಕರ್ಯವನ್ನು ರೈತರಿಗೆ ಮಾಡಿಕೊಡಬೇಕೆಂದು ಸರಕಾರದವರಿಗೆ ನಾನು ಸೂಚನೆ ಮಾಡುತ್ತೇನೆ.

ಇದೂ ಅಲ್ಲದೆ ನಮ್ಮ ರಾಜ್ಯದಲ್ಲಿ ನೀರಾವರಿ ಅಭಿವೃದ್ಧಿಗಾಗಿ ಎಷ್ಟೋ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ದೊಡ್ಡದೊಡ್ಡ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಮುಂದುವರಿಸಲು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಅದರಂತೆ ಅದಕ್ಕೆ ಬೇಕಾಗುವ ಹಣವನ್ನು ಒದಗಿಸಿ ಕೊಟ್ಟು ತೀವ್ರವಾಗಿ ದೊಡ್ಡ ನೀರಾವರಿ ಯೋಜನೆಗಳನ್ನು ಅದರಂತೆಯೇ ಚಿಕ್ಕ ನೀರಾವರಿ ಯೋಜನೆಗಳನ್ನು ಪೂರೈಸುತ್ತಾರೆ ಎಂದು ನಾನು ನಂಬಿದ್ದೇನೆ. ಕೃಷ್ಣ ಮತ್ತು ಕಾವೇರಿ ಬೇಸಿನ್‌ಗಳ ಕೆಲಸದ ಬಗ್ಗೆ ರಾಜ್ಯಪಾಲರು ಭಾಷಣದಲ್ಲಿ ಹೇಳಿದ್ದಾರೆ. ಆದರೆ ಮಲಪ್ರಭ ಪ್ರಾಜೆಕ್ಟ್ ಏನಿದೆ ಅದರ ಕೆಲಸ ಪ್ರಾರಂಭವಾಗಿದ್ದು ತೀವ್ರಗತಿಯಿಂದ ಸಾಗುತ್ತಾ ಇಲ್ಲ, ಸುಮಾರು ವರ್ಷ

(ಶ್ರೀ ಆರ್. ಜಿ. ವಾಲಿ)

ಗಳಿಂದ ನಡೆಯುತ್ತಾ ಇದೆ, 1970ಕ್ಕೆ ಇದರ ಸಂಪೂರ್ಣ ಸೌಕರ್ಯ ಆ ಭಾಗದ ಜನತೆಗೆ ದೊರಕುತ್ತದೆ ಎಂದು ಭಾವಿಸಿದ್ದೆವು. ಅದಕ್ಕಾಗಿ ಹಣದ ಸಹಾಯವನ್ನು ದೊರಕಿಸಿಕೊಡುತ್ತಾರೆಂದು ಭಾವಿಸುತ್ತೇನೆ.

ಇದೂ ಅಲ್ಲದೆ ನೀರಾವರಿ ಯೋಜನೆಗಳನ್ನು ಮುಗಿಸುವುದಕ್ಕೆ ಮೊದಲು ಕೆಲವೊಂದು ಕ್ರಮಗಳನ್ನು ಸರಕಾರದವರು ತೆಗೆದುಕೊಳ್ಳುತ್ತಾರೆಂದು ರಾಜ್ಯಪಾಲರ ಭಾಷಣದಲ್ಲಿ ನಮೂದಿಸಿದ್ದಾರೆ. ಅಂತಹ ಕ್ರಮಗಳು ತೀವ್ರ ಸಾಗಬೇಕಾದದ್ದು ಮುಖ್ಯ. ಅದರಲ್ಲಿ ಲ್ಯಾಂಡ್ ರೆಕ್ಲಮೇಷನ್ ಅಂಡ್ ಡೆವಲಪ್‌ಮೆಂಟ್ ಆಫ್ ಲ್ಯಾಂಡ್ ಅಂಡರ್ ಇರಿಗೇಷನ್ ಪ್ರಾಜೆಕ್ಟ್ ಆದಷ್ಟು ತ್ವರಿತವಾಗಿ ಕೈಕೊಳ್ಳಬೇಕಾಗುತ್ತದೆ. ಎಷ್ಟೋ ಸಾರಿ ನೀರಾವರಿ ಯೋಜನೆ ಪೂರೈಸಿದರೂ ಅದಕ್ಕೆ ಸಂಬಂಧಪಟ್ಟ ಭೂಮಿಯನ್ನು ಸರಿಯಾಗಿ ಅಭಿವೃದ್ಧಿಪಡಿಸಲು ಆಗುವುದಿಲ್ಲ. ಅದಕ್ಕಾಗಿ ಯಾವ ಭಾಗದಲ್ಲಿ ನೀರಾವರಿ ಯೋಜನೆಗಳು ತೀವ್ರವಾಗಿ ಬರುತ್ತದೆಯೋ ಅಂತಹ ಭಾಗದಲ್ಲಿ ಇಂದಿನಿಂದರೇ ಭೂಮಿಯನ್ನು ಒಳ್ಳೆಯ ರೀತಿಯಿಂದ ಹದ ಮಾಡುವುದಕ್ಕೆ ತೀವ್ರ ಕ್ರಮ ತೆಗೆದುಕೊಳ್ಳಬೇಕು. ಅದಕ್ಕಾಗಿ ಹಣವನ್ನು ರೈತರಿಗೆ ಒದಗಿಸಬೇಕು. ಭೂಮಿಯನ್ನು ಆ ರೀತಿ ತಯಾರು ಮಾಡಿದರೆ ನೀರಿನ ಸೌಕರ್ಯ ಒದಗಿಸಿದಾಗ ಫಸಲು ಬೆಳೆಸಿಕೊಳ್ಳಲು ರೈತರಿಗೆ ಸಹಾಯ ಮಾಡಿದಂತಾಗುತ್ತದೆ. ಆ ರೀತಿ ಮಾಡಬೇಕೆಂದು ಸೂಚನೆ ಕೊಡಬಯಸುತ್ತೇನೆ. ಇಂತಹ ನೀರಾವರಿ ಯೋಜನೆಗಳು ನಮ್ಮ ರಾಜ್ಯದಲ್ಲಿ ಎಷ್ಟೋ ಕಡೆ ಪ್ರಾರಂಭವಾಗಿ, ರೈತರು ಒಳ್ಳೆಯ ಬೆಳೆಯನ್ನು ತೆಗೆದುಕೊಳ್ಳುತ್ತಾ ಇರುವಾಗ, ಕೆಲವೊಂದು ಭಾಗದಲ್ಲಿ ವಿವಂಚನೆಯಾಗಿದೆ. ಒಳ್ಳೆ ಬೆಳೆ ಬಂದು ಅದನ್ನು ಯಾವ ರೀತಿ ಮಾರಬೇಕು ಎಂದು ಯೋಚನೆ ಬಂದಿದೆ. ಈಗಲೇ ಮಾರಿದರೆ ಒಳ್ಳೆಯ ಬೆಲೆ ಬಾರದೇ ಇರಬಹುದು. ಸರಕಾರದ ಲೆವಿ ಪ್ರಕಾರ ಆ ಮಾಲನ್ನು ಅವರಿಗೆ ಕೊಡಬೇಕಾಗುತ್ತದೆ. ಉಳಿದ ಬೆಳೆಯನ್ನು ರೈತರು ವ್ಯವಸ್ಥಿತ ರೀತಿಯಲ್ಲಿ ಸ್ಟೋರೇಜ್ ಮಾಡುವ ಹಾಗೆ ಸೌಕರ್ಯ ಕಲ್ಪಿಸಿಕೊಡಬೇಕು. ವಿದೇಶಗಳಲ್ಲಿ ಇದಕ್ಕಾಗಿ ಸೈಲೋಸ್ ಎಂದು ಇರುತ್ತದೆ. ಭತ್ತ, ಗೋಧಿ ಇವುಗಳನ್ನು ವೈಜ್ಞಾನಿಕ ರೀತಿಯಿಂದ ಒಂದು ವರ್ಷದ ವರೆಗೆ ಇಡುವ ಯೋಗ್ಯ ಕ್ರಮ ಮಾಡಿದರೆ ರೈತರಿಗೆ ಸಹಾಯವಾಗುತ್ತದೆ. ರೈತರು ಸಿಕ್ಕ ಬೆಲೆಗೆ ಮಾರುವುದಕ್ಕಿಂತ ಫಸಲನ್ನು ತಮ್ಮಲ್ಲಿ ಇಟ್ಟುಕೊಂಡು ಯೋಗ್ಯ ಬೆಲೆ ಬಂದಾಗ ಮಾರಲಿಕ್ಕೆ ಆಸ್ಪದ ಮಾಡಿಕೊಟ್ಟು, ಸ್ಟೋರೇಜ್ ಮಾಡಿದ ಮಾಲಿನ ಮೇಲೆ ಹಣ ಬೇಕಾದರೆ, ಹಣ ಒದಗಿಸುವ ಅವಕಾಶ ಮಾಡಿಕೊಟ್ಟರೆ ರೈತರು ಸಂತೋಷಪಡುತ್ತಾರೆ. ಈ ರೀತಿ ಸರಕಾರದವರು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಾನು ನಂಬುತ್ತೇನೆ. ಅದೂ ಅಲ್ಲದೆ ಆಹಾರ ದವಸಗಳನ್ನು ಬೆಳೆದದ್ದನ್ನು ಎಲ್ಲಾ ಕಡೆಗೂ ಕಳುಹಿಸಬೇಕಾದರೆ ಲೆವಿ ಕ್ರಮ ಏನಿದೆ ಅದರಿಂದ ಬಹಳ ಅಡ್ಡಿ ಬರುತ್ತಾ ಇದೆ. ಲೆವಿ ಇರುವುದರಿಂದ ಆಹಾರ ದವಸಗಳನ್ನು ಸಾಗಾಟ ಮಾಡಬೇಕಾದರೆ ಎಷ್ಟೋ ತೊಂದರೆ ಬರುತ್ತದೆ. ಪೋಲೀಸಿನವರು ತೊಂದರೆ ಕೊಡುತ್ತಿದ್ದಾರೆ. ಇದು ಮುಖ್ಯವಾಗಿ ಭತ್ತಕ್ಕೆ ಅನ್ವಯಿಸುತ್ತದೆ. ಈ ಪದ್ಧತಿಯು ಹೋಗಿ ಯಾವ ತೊಂದರೆಯೂ ಇಲ್ಲದೆ ಆಹಾರ ಧಾನ್ಯದ ಸಾಗಾಟ ನಡೆಯುವ ವ್ಯವಸ್ಥೆ ಆಗುತ್ತದೆ ಎಂದು ನಂಬುತ್ತೇನೆ. ಈ ರೀತಿ ತೀವ್ರ ಕ್ರಮ ತೆಗೆದುಕೊಂಡಲ್ಲಿ ರೈತರಿಗೆ ಬಹಳ ಸಹಾಯವಾಗುತ್ತದೆ.

ಇದರಂತೆ ರೈತರ ಸಹಾಯಕ್ಕಾಗಿ ಯೂನಿವರ್ಸಿಟಿಯಲ್ಲಿ ಸಾಯಿಲ್ ಟೆಸ್ಟಿಂಗ್ ಮತ್ತು ರಿಸರ್ಚ್‌ಗಳನ್ನು ಕೈಗೊಳ್ಳುತ್ತಿದ್ದಾರೆ. ರಿಸರ್ಚ್ ಮಾಡಿದಂಥ ಯೋಜನೆಗಳು ಏನಿವೆ ಅದು ರೈತರಿಗೆ ಸಕಾಲದಲ್ಲಿ ಮುಟ್ಟುತ್ತಾ ಇಲ್ಲ. ಆದಷ್ಟು ಯೂನಿವರ್ಸಿಟಿಯಲ್ಲಿ ಆಗುವ ಕೆಲಸ ರೈತರಿಗೆ ಮುಟ್ಟುವ ಹಾಗೆ ಯೋಗ್ಯ ಕ್ರಮ ಮಾಡಬೇಕಾಗುತ್ತದೆ. ನಮ್ಮ ಧಾರವಾಡ ಭಾಗದಲ್ಲಿ ಹೊಸ ರೋಗ ಉದ್ಭವಿಸಿದಾಗ ಅದನ್ನು ತಡೆಗಟ್ಟಲು ತೀವ್ರ ಕ್ರಮ ಕೈಗೊಂಡಿದ್ದರೆ, ಅದನ್ನು ತಪ್ಪಿಸಬಹುದಾಗಿತ್ತು. ಹೋದ ಸಾರಿ ಆ ರೀತಿ ರೋಗ ಬಂದಾಗ ಹೆಚ್ಚಿನ ಪ್ರಮಾಣದಲ್ಲಿ ವಿಚಾರ ಮಾಡದೆ ಬಿಟ್ಟುಕೊಂಡಿದ್ದರಿಂದ ಈ ಸಾರಿ ಅದರಿಂದ ಬಹಳ ಹಾನಿ ಆಗಿದೆ. ಆದುದರಿಂದ ರಿಸರ್ಚ್ ಪ್ರೋಗ್ರಾಂ ತೀವ್ರವಾಗಿ ನಡೆಯಬೇಕಾದ್ದು ಬಹಳ ಅವಶ್ಯಕ. ಆ ರೀತಿ ರಿಸರ್ಚ್ ಯೋಜನೆಯ ಲಾಭ ರೈತರಿಗೆ ದೊರೆಯುವಂಥಾದ್ದು ಬಹಳ ಮಹತ್ವದ್ದು. ಅದಕ್ಕೆ ಸರಕಾರದವರು ರಿಸರ್ಚ್ ಸೆಂಟರ್ ಏನಿದೆ ಅದರಲ್ಲಿ ಆದಂತಹ ಕಾರ್ಯಕ್ರಮವನ್ನು ತೀವ್ರವಾಗಿ ರೈತರಿಗೆ ಮುಟ್ಟುವ ಹಾಗೆ ಕ್ರಮ ತೆಗೆದುಕೊಳ್ಳಬೇಕು. ಹೆಬ್ಬಾಳದಲ್ಲಿ ಒಂದು ಕಡೆ ರಿಸರ್ಚ್ ನಡೆಯುತ್ತಾ ಇದೆ. ಧಾರವಾಡದಲ್ಲಿ ಯೂನಿವರ್ಸಿಟಿ ಭಾಗ ಇರುವುದರಿಂದ, ಅಲ್ಲಿಯೂ ಕೂಡ ರಿಸರ್ಚ್ ಕ್ರಮ ನಡೆಸಬೇಕು. ಎಲ್ಲಾ ಊರುಗಳಲ್ಲಿಯೂ ರಿಸರ್ಚ್ ನಡೆಯಬೇಕು. ಗೋಧಿ ಬೀಜದ ರಿಸರ್ಚ್ ಧಾರವಾಡದ ಕಾಲೇಜಿನಲ್ಲಿ ನಡೆಸುತ್ತಿದ್ದರೂ ಅದಕ್ಕೆ ಒಳ್ಳೆಯ ಬೀಜ ಬೇಕಾದರೆ ಹೆಬ್ಬಾಳದ ಕಾಲೇಜಿನಿಂದ ತರಿಸಿಕೊಳ್ಳಬೇಕಾಗಿದೆ. ಯಾವ ಭಾಗದಲ್ಲಿ ಪೀಕು ಬರುತ್ತದೋ ಅಲ್ಲಿಯೇ ರಿಸರ್ಚ್ ಸೆಂಟರ್ ಇದ್ದರೆ

ಒಳ್ಳೆಯದಾಗುತ್ತದೆ. ಆ ರೀತಿ ಸರಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ನಂಬುತ್ತೇನೆ.

ಇನ್ನು ಸಾಯಿಲ್ ಟೆಸ್ಟಿಂಗ್ ಲಾಬರೇಟರಿ ಐದಾರು ಇದೆ ಎಂದು ಹೇಳಿದ್ದಾರೆ. ಅಷ್ಟು ಸಾಕಾಗದು. ಸಾಯಿಲ್ ಟೆಸ್ಟಿಂಗ್ ಬಹಳ ಮಹತ್ವವಾದುದ್ದು ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲ ಹೇಳಿದ್ದಾರೆ. ರೈತರಿಗೆ ಇದರ ಲಾಭ ಮುಟ್ಟಬೇಕಾದರೆ ಹೆಚ್ಚು ಹೆಚ್ಚಾಗಿ ಸಾಯಿಲ್ ಟೆಸ್ಟಿಂಗ್ ಬಗ್ಗೆ ವ್ಯವಸ್ಥೆ ಆಗಬೇಕಾದುದ್ದು ಮಹತ್ವದ ವಿಷಯ. ಆದಕ್ಕಾಗಿ ನನ್ನ ಸೂಚನೆ ಏನೆಂದರೆ ಎಷ್ಟೋ ಕಡೆ ತಾಲ್ಲೂಕು ಕಡೆಗಳಲ್ಲಿ ಸಯನ್ಸ್ ಲ್ಯಾಬರೇಟರಿಗಳು ಇವೆ. ಒಂದು ಯೋಜನೆಯನ್ನು ಮಾಡಿ ಅಲ್ಲಿಯೂ ಕೂಡ ಸಾಯಿಲ್ ಟೆಸ್ಟಿಂಗ್ ಮಾಡುವ ಕೆಲಸ ಪ್ರಾರಂಭವಾಗುವ ಹಾಗೆ ಮಾಡಿಕೊಟ್ಟರೆ ರೈತರಿಗೆ ಸಹಾಯವಾಗುತ್ತದೆ. ಇಂತಹ ಅವಕಾಶ ದೊರಕುವುದರಿಂದ ರೈತರಿಗೆ ಲಾಭ ದೊರಕುತ್ತದೆ. ಆ ರೀತಿ ಸರಕಾರದವರು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇದರಂತೆ ಅರಣ್ಯ ಅಭಿವೃದ್ಧಿಗಾಗಿ ಬಹಳಷ್ಟು ಪ್ರಯತ್ನಮಾಡಬೇಕಾಗಿದೆ. ಅರಣ್ಯ ಅಭಿವೃದ್ಧಿ ಬಗ್ಗೆ ಸಾಕಷ್ಟು ಆಸ್ತೆ ವಹಿಸುತ್ತಾ ಇಲ್ಲ. ದಾಂಡೇಲಿ ಭಾಗದಲ್ಲಿ ಒಳ್ಳೆಯ ಟೀಕ್ ಬೆಳೆಯುತ್ತಾ ಇದ್ದರು ಅದನ್ನು ರಫ್ತು ಕೂಡ ಮಾಡುತ್ತಾ ಇದ್ದರು. ಅಂಥಾ ಟೀಕ್ ಬೆಳೆಯುವುದು ಕಡಿಮೆಯಾಗಿದೆ. ಅದನ್ನು ಹೆಚ್ಚು ಬೆಳೆಸಬೇಕಾಗಿದೆ. ಬಂಬೂ ಬೆಳೆಯುವುದು ಕಡಿಮೆಯಾಗಿದೆ. ಪೇಪರ್ ಉತ್ಪಾದನೆಗೆ ಬಹಳಷ್ಟು ತೊಂದರೆ ಆಗಿದೆ, ಎಷ್ಟೋ ಗಿಡಗಳನ್ನು ತೆಗೆದುಹಾಕಿ ಬರುಬರುತ್ತಾ ಅಡವಿ ಇಲ್ಲದ ಹಾಗೆ ಕಾಣುತ್ತಾ ಇದೆ. ಆದುದರಿಂದ ಅಡವಿಯನ್ನು ಕಾಯ್ದು ಇಟ್ಟುಕೊಳ್ಳಬೇಕಾದುದ್ದು ಮಹತ್ವದ್ದು. ನಮ್ಮ ಸಂಸ್ಥಾನದಲ್ಲಿ ಆಡವಿ ಬೇಕಾದಷ್ಟು ಇದೆ. ಅದನ್ನು ಬೆಳಸಬೇಕಾಗಿದೆ ಮತ್ತು ಆದನ್ನು ಕಾಯ್ದು ಇಟ್ಟುಕೊಳ್ಳಬೇಕಾಗಿದೆ. ಅದನ್ನು ಮಾಡುವುದು ಮುಖ್ಯ. ಆದಕ್ಕಾಗಿ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಇನ್ನು ನಮ್ಮ ಭಾಗದಲ್ಲಿ ಮನೆ ಕಟ್ಟುವ ಯೋಜನೆ ಏನಿದೆಯೋ ಅದು ಎಲ್ಲಾ ಕಡೆಯೂ ಇನ್ನೂ ಅನುಷ್ಠಾನಕ್ಕೆಬಂದಿಲ್ಲ. ಅದರಲ್ಲಿಯೂ ಮುಖ್ಯವಾಗಿ ಪಟ್ಟಣಗಳಲ್ಲಿಯೂ ಕೂಡ ಇವತ್ತಿನವರೆಗೂ ಮನೆಗಳ ತೊಂದರೆ ಬಹಳವಾಗಿದೆ. ಇಂಡಸ್ಟ್ರಿಯಲ್ ಲೇಬರರ್ಸ್‌ಗೆ, ಬೇರೆಬೇರೆ ಕೈಗಾರಿಕೋದ್ಯಮಗಳಲ್ಲಿ ಕೆಲಸಮಾಡುವ ಜನರಿಗೆ ಸರಿಯಾದ ಮನೆಗಳ ಸೌಕರ್ಯಗಳಿಲ್ಲ. ಬೆಂಗಳೂರಿನಂತಹ ಮಹಾ ನಗರದಲ್ಲಿ ಮನೆಗಳು ಹೆಚ್ಚುಹೆಚ್ಚಾಗಿ ಬರುತ್ತಿವೆ. ಉಳಿದ ಕಡೆಗಳಲ್ಲಿ ಅಂತಹ ಮಹತ್ವವಾದಂಥ ಯೋಜನೆಗಳನ್ನು ಹಾಕಿಕೊಂಡು ಇಂಡಸ್ಟ್ರಿಗಳಲ್ಲಿ ಕೆಲಸಮಾಡುವವರಿಗೆ, ಎಂ. ಎಸ್. ಆರ್. ಟಿ. ಸಿ.ಯಲ್ಲಿ ಕೆಲಸಮಾಡುವಂತಹವರಿಗೆ, ಬೇರೆಬೇರೆ ಇಲಾಖೆಗಳಲ್ಲಿ ಕೆಲಸಮಾಡುವವರಿಗೆ ಮನೆಗಳ ಸೌಕರ್ಯಗಳನ್ನು ಮಾಡಿಕೊಟ್ಟರೆ ಸರ್ಕಾರದವರನ್ನು ಅವರು ತುಂಬಾ ನೆನಸುತ್ತಾರೆ. ಆದ್ದರಿಂದ ಇತ್ತೀಚೆಗೆ ಇನ್ನೂ ಹೆಚ್ಚುಹೆಚ್ಚಾಗಿ ಮನೆಗಳನ್ನು ಕಟ್ಟಬೇಕಾದ ಅವಶ್ಯಕತೆ ಇದೆ. ಈ ವಿಚಾರದಲ್ಲ ಸರ್ಕಾರದವರು ಈಗಾಗಲೇ ಬೇಕಾದಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾವು ಅವರಿಗೆ ಉಪಕೃತರಾಗಿದ್ದೇವೆ. ಎಲ್ಲ ಜನರಿಗೂ ಮನೆಗಳ ಸೌಕರ್ಯ ಸಿಗಬೇಕು. ಬೇರೆಬೇರೆ ಭಾಗಗಳಲ್ಲಿ ಮನೆಕಟ್ಟುವ ಯೋಜನೆಯ ಬಗ್ಗೆ ಕೆಲವೊಂದು ಸೌಲಭ್ಯಗಳನ್ನು ಕೊಟ್ಟು ಹೆಚ್ಚಿನ ರೀತಿಯಿಂದ ಅವರಿಗೆ ಮನೆ ದೊರೆಯುವ ಹಾಗೆ ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಹರಿಜನರಿಗೆ ವಸತಿಸೌಕರ್ಯಗಳನ್ನು ಮತ್ತು ಹಿಂದುಳಿದ ಜನಗಳಿಗಾಗಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕಾಗಿ ಆದಷ್ಟು ತೀವ್ರವಾಗಿ ಪ್ರಯತ್ನಗಳು ನಡೆಯಬೇಕು. ಸರ್ಕಾರದವರು ಆದರ ಬಗ್ಗೆ ತಕ್ಕ ಕ್ರಮವನ್ನು ಆದಷ್ಟು ಜಾಗ್ರತೆಯಾಗಿ ಕೈಗೊಳ್ಳಬೇಕಾಗುತ್ತದೆ. ಆ ಕೆಲಸಕಾರ್ಯಗಳು ಒಳ್ಳೆಯರೀತಿಯಿಂದ ಹಾಗೂ ತ್ವರಿತ ಗತಿಯಿಂದ ನಡೆಯುತ್ತಾಯಿಲ್ಲ. ಹರಿಜನರಿಗೆ ಒಂದು ಕಾಲೋನಿಯನ್ನು ಮಾಡಿ ತಮ್ಮ ವಿಚಾರಗಳನ್ನು ತಾವೇ ವಿಚಾರಮಾಡುವ ಹಾಗೆ ತಕ್ಕ ವಿದ್ಯಾಭ್ಯಾಸ ಆವರಿಗೆ ದೊರಕುವ ಹಾಗೆ ವ್ಯವಸ್ಥೆಮಾಡದರೆ ಆಗ ಆವರಿಗೆ ತಾವು ಹರಿಜನರು ಎಂಬ ಭಾವನೆ ದೂರವಾಗುತ್ತದೆ. ಅವರಿಗೆ ಹೆಚ್ಚುಹೆಚ್ಚಾಗಿ ವಸತಿ ಸೌಕರ್ಯಗಳನ್ನು ಏರ್ಪಾಡು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯಾ ಖಾತೆಯಲ್ಲಿ ರಾಜ್ಯಪಾಲರು ಬಹಳ ಮಹತ್ವರವಾದಂಥ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಆದಕ್ಕೆ ರಾಜ್ಯಪಾಲರು ಅಭಿನಂದನಾರ್ಹರು. ಈ ಇಲಾಖೆಯಲ್ಲಿ ಬಹಳ ಮಟ್ಟಿಗೆ ವೇಸ್ಟೇಜ್ ಇದೆ. ಬಹಳ ಮಟ್ಟಿಗೆ ಈಗಿನ ವಿದ್ಯಾಭ್ಯಾಸ ಕ್ರಮದಿಂದ ಮುಂದೆ ಈಗಿನ ವಿದ್ಯಾರ್ಥಿಗಳು ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ನಮ್ಮ ವಿದ್ಯಾಭ್ಯಾಸಕ್ರಮದಿಂದ ಬಹಳವಾಗಿ ಹಾನಿಯಾಗುತ್ತದೆಂದು ತೋರಿಸಿಕೊಟ್ಟಿದ್ದಾರೆ. ಅದಕ್ಕಾಗಿ ಸರ್ಕಾರದವರು ಒಂದು ಹೊಸ ಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ವಿದ್ಯಾರ್ಥಿ

(ಶ್ರೀ ಆರ್. ಜಿ. ವಾಲಿ)

ಗಳು ಶಾಲೆಗಳಲ್ಲಿ ಕಲಿಯುವಾಗ ಎಸ್. ಎಸ್. ಎಲ್. ಸಿ. ಪಠ್ಯ ಪುಸ್ತಕಗಳನ್ನು ಓದುವುದರ ಜೊತೆಗೆ ಪ್ರಾಕ್ಟಿಕಲ್ ಟ್ರೈನಿಂಗ್ ಸಿಗುವ ಹಾಗೆ ವ್ಯವಸ್ಥೆಮಾಡಬೇಕು. ಆದ್ದರಿಂದ ಈಗಿನ ಪಾಠಪ್ರವಚನ ಕ್ರಮಗಳಲ್ಲಿ ತೀವ್ರ ಬದಲಾವಣೆಯಾಗಬೇಕು.

ಇನ್ನು ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪನ್ನ ತೀವ್ರವಾಗಿ ಜಾಸ್ತಿಮಾಡುತ್ತೇವೆಂದು ರಾಜ್ಯಪಾಲರು ಹೇಳಿದ್ದಾರೆ. 1972-73ರಲ್ಲಿ ನಮ್ಮ ರಾಜ್ಯದಲ್ಲಿ ಸಿಗುವ ವಿದ್ಯುಚ್ಛಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸುತ್ತೇವೆಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗತಕ್ಕ ವಿದ್ಯುಚ್ಛಕ್ತಿಯನ್ನು ನಮ ರಾಜ್ಯದ ಎಲ್ಲ ಜನರೂ ಸದುಪಯೋಗ ಮಾಡಬೇಕು. ಇನ್ನೊಂದು ಸಂಗತಿ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕಾಳಿ ನದಿಯ ಯೋಜನೆಯ ವಿಷಯವಾಗಿ ಹೇಳಿದ್ದಾರೆ. ಅದು ಜಾಗ್ರತೆಯಾಗಿ ಆಗಬೇಕು. ನಮ್ಮಲ್ಲಿ ಪವರ್ ರಿಸೋರ್ಸಸ್ ಏನಿದೆಯೋ ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡರೆ ಅದರ ಲಾಭ ಪಡೆಯಬಹುದು. 1972—73ರಲ್ಲಿ ವಿದ್ಯುಚ್ಛಕ್ತಿಗೆ ನಮಗೆ ಬಹಳ ತೊಂದರೆ ಬರುತ್ತದೆ. ಅದನ್ನು ತಪ್ಪಿಸುವುದಕ್ಕೆ ಈಗಲೇ ಕ್ರಮವನ್ನು ತೆಗೆದುಕೊಳ್ಳಬೇಕು. ಕಾಳೀ ನದಿಯಂತಹ ದೊಡ್ಡದೊಡ್ಡ ಪ್ರಾಜೆಕ್ಟ್‌ಗಳು ಏನಿವೆ ಅದನ್ನು ಕಟ್ಟುವುದಕ್ಕೆ ನಮ್ಮ ರಾಜ್ಯ ಸರ್ಕಾರದಿಂದ ಹಣವನ್ನು ಉಪಯೋಗವಾಡುವುದಕ್ಕಾಗುವುದಿಲ್ಲ. ಏಕೆಂದರೆ ನಮ್ಮ ನೆರ ಹೊರೆಯ ರಾಜ್ಯಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಕೊಡಬೇಕು. ಅದಕ್ಕಾಗಿ ಕೇಂದ್ರ ಸರ್ಕಾರದವರು ಇಂತಹ ದೊಡ್ಡದೊಡ್ಡ ಯೋಜನಗಳಿಗೆ ಯಥೇಚ್ಛವಾಗಿ ಹಣ ಕೊಟ್ಟು ಸಹಾಯ ದವರು ಮಾಡಿದರೆ ನಮ್ಮ ರಾಜ್ಯಕ್ಕೆ ಲಾಭವಾಗುತ್ತದೆ. ಆ ರೀತಿಯಾಗಿ ನಮ್ಮ ಸರ್ಕಾರದವರು ಪ್ರಯತ್ನಮಾಡಬೇಕು. ಇಂತಹ ದೊಡ್ಡದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳುವಾಗ ಕೇಂದ್ರಸರ್ಕಾರದವರು ಹಣ ಸಹಾಯ ಮಾಡುತ್ತಾರೆಯೋ ಎಂದು ಯೋಚನೆಯಾಗಿದೆ. ಇದರಲ್ಲಿ ಯಾವ ಒಂದು ಶಂಕೆಗೂ ಅನುಮಾನವಿಲ್ಲವೆಂದು ನಮ್ಮ ಪ್ರಧಾನಮಂತ್ರಿಗಳೇ ಹೇಳಿದ್ದಾರೆ. ಯಾವುದೇ ಬೆಳವಣಿಗೆಯಾಗಬೇಕಾದರೆ ಯಾವ ರೀತಿಯಲ್ಲಿಯೂ ಯಾವ ರಾಜ್ಯಕ್ಕೂ ಅನ್ಯಾಯ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಇಂತಹ ದೊಡ್ಡ ದೊಡ್ಡ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಹೆಚ್ಚುಹೆಚ್ಚಾಗಿ ಧನಸಹಾಯಮಾಡಬೇಕು ಇದರಿಂದ ನಾವು ನಮ್ಮ ನೆರೆಹೊರೆಯ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಯಥೇಚ್ಛವಾಗಿ ಕೊಡಬಹುದು. ಅಷ್ಟೂ ಅಲ್ಲದೆ ಕೇಂದ್ರಸರ್ಕಾರ ದವರು ಹಾಗೂ ರಾಜ್ಯ ಸರ್ಕಾರದವರು ನಮ್ಮ ರಾಜ್ಯದಲ್ಲಿ ಉದ್ಯಮಗಳು ಬೆಳೆಯುವುದಕ್ಕೆ ಪ್ರಯತ್ನಮಾಡಬೇಕು. ದುರ್ದೈವದಿಂದ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡುವುದು ಏನಿದೆಯೋ ಅದನ್ನು ಇಷ್ಟು ವರ್ಷಗಳಿಂದ ಕೇಳುತ್ತಿದ್ದರೂ ಇಂತಹ ಯೋಜನೆಗಳನ್ನು ಮುಂದೆ ಹಾಕುತ್ತಿದ್ದಾರೆ. ಅದಕ್ಕೆ ತಗುಲುವ ವೆಚ್ಚ ಇವತ್ತು 100 ಕೋಟಿ ರೂಪಾಯಿಗಳಾಗುತ್ತವೆ. ನಾಳೆ 150–160 ಕೋಟಿ ರೂಪಾಯಿಗಳು ಆಗುತ್ತದೆ. ಆದ್ದರಿಂದ ಕೇಂದ್ರಸರ್ಕಾರದ ವರು ತೀವ್ರ ಕ್ರಮವನ್ನು ಈ ಬಗ್ಗೆ ಈಗಲೇ ತೆಗೆದುಕೊಳ್ಳದಿದ್ದರೆ ನಮ್ಮ ರಾಜ್ಯದಲ್ಲಿ ಅಷ್ಟು ಅಭಿವೃದ್ಧಿ ಕಾರ್ಯಗಳು ಆಗುವುದಿಲ್ಲ. ಅದು ಹಿಂದುಳಿಯುತ್ತದೆ. ನಮ್ಮ ರಾಜ್ಯದ ಆರ್ಥಿಕ ಅಭಿವೃದ್ಧಿಗೂ ತಡೆಯಾಗುತ್ತದೆ. ಆದ್ದರಿಂದ ಹೊಸಪೇಟೆಯಲ್ಲಿ ಸ್ಟೀಲ್ ಪ್ಲಾಂಟ್ ಯೋಜನೆಯನ್ನು ಜಾಗ್ರತೆಯಾಗಿ ಕಾರ್ಯಗತವಾಗಬೇಕು. ಕೇಂದ್ರಸರ್ಕಾರದವರು ಇದರ ಬಗ್ಗೆ ಕೂಡಲೇ ತಕ್ಕ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಇದರಿಂದ ನಮ್ಮ ರಾಜ್ಯಕ್ಕೆ ಮಾತ್ರ ಸಹಾಯವಾಗುತ್ತಾ ಇಲ್ಲ, ಇತರ ಪ್ರಾಂತಗಳಿಗೂ ಸಹಾಯವಾಗುತ್ತದೆ ಇದರಿಂದ ವಿದೇಶಿ ವಿನಿಮಯ ಕೂಡ ಬರುತ್ತದೆ. ಇಂತಹ ಯೋಜನೆಗಳು ನಮ್ಮಲ್ಲಿ ಬಂದು ಕಟ್ಟಣದ ಅದುರನ್ನು ಇಲ್ಲಿ ಹೆಚ್ಚಿಗೆ ಉಪಯೋಗಮಾಡಿದರೆ ಒಳ್ಳೆಯದು. ಕೇಂದ್ರ ಸರ್ಕಾರದವರು ಇಂತಹ ಯೋಜನೆಗಳನ್ನು ಹಾಗೆಯೇ ಬಿಟ್ಟುಬಿಟ್ಟು ಮುಂದುವರಿಸುತ್ತಿದ್ದಾರೆ. ಇದರಿಂದ ನಮ್ಮ ರಾಜ್ಯಾಭಿವೃದ್ಧಿಯಾಗಬೇಕೆಂದು ಕೇಂದ್ರಸರ್ಕಾರದವರು ಯೋಚನೆಮಾಡುತ್ತಾ ಇಲ್ಲವೆಂದು ನಮಗೆ ಕಾಣುತ್ತದೆ. ಆದ್ದರಿಂದ ನಮ್ಮ ಜನತೆಗೂ ಇದರಿಂದ ಲಾಭ ಸಿಗುವ ಹಾಗೆ ತಕ್ಕ ಕ್ರಮಗಳನ್ನು ನಮ್ಮ ಸರ್ಕಾರದವರೂ ಸಹ ತೆಗೆದುಕೊಳ್ಳುತ್ತಾರೆಂದು ಆಶಿಸುತ್ತೇನೆ. ನಮ್ಮ ಸರ್ಕಾರದವರು ಇದಕ್ಕಾಗಿ ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕು.

ನಮ್ಮ ರಾಜ್ಯದಲ್ಲಿ ಕಾರುಗಳನ್ನು ತಯಾರುಮಾಡತಕ್ಕ ಕಾರ್ಖಾನೆಯನ್ನು ಸ್ಥಾಪಿಸುವ ಯೋಜನೆಯನ್ನು ಸುಮಾರು 3 ವರ್ಷಗಳಿಂದಲೂ ಕಾರ್ಯಗತಗೊಳಿಸಲು ನಮ್ಮ ಸರ್ಕಾರದವರು ಪ್ರಯತ್ನಮಾಡುತ್ತಿದ್ದಾರೆ. ಅದಿನ್ನೂ ಕಾರ್ಯಗತವಾಗಲಿಲ್ಲ. 23 ಅಥವಾ 24 ಸಾವಿರ ರೂಪಾಯಿಗಳಿಗೆ ಅಂಬಾಸಡರ್ ಕಾರುಗಳನ್ನು ತೆಗೆದುಕೊಂಡರೆ, ಕೇವಲ 4 ವರ್ಷಗಳಲ್ಲಿ ಅದು ಹಳೆಯ

ಧಾಗಿ ಕಡಿಮೆ ಬೆಲೆಗೆ ಕೊಡಬೇಕಾದ ಪರಿಸ್ಥಿತಿ ಇದೆ. ಆದರೆ ಹೊಸ ಕಾರ್‌ಗಳನ್ನೇ ತಯಾರುಮಾಡಿ ಕಡಿಮೆ ಬೆಲೆಗೆ ಕೊಡುತ್ತೇವೆಂದೂ ಅದಕ್ಕಾಗಿ ಒಂದು ಯೋಜನೆಯನ್ನು ಹಾಕುತ್ತೇವೆಂದು ಹೇಳಿ ದರೂ ಅದು ಸುಮಾರು 4 ವರ್ಷಗಳಿಂದಲೂ ಮುಂದೂಡುತ್ತಿದ್ದಾರೆ. ಇದು ಆಶ್ಚರ್ಯಕರವಾದ ವಿಷಯ. ಇಂತಹ ಯೋಜನೆಗಳಿಂದ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ, ಆ ಯೋಜನೆಗಳನ್ನು ತೀವ್ರವಾಗಿ ಕಾರ್ಯಗತಮಾಡುವುದು ಬಹಳ ಮಹತ್ವದ್ದಾಗಿದೆ. ಕೇಂದ್ರಸರ್ಕಾರದವರು ಈ ಕಾರು ಯೋಜನಯನ್ನು ಇಲ್ಲಿ ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಜಾಗ್ರತೆಯಾಗಿ ಕೊಡಬೇಕು. ಅದಕ್ಕಾಗಿ ನಮ್ಮ ಸರ್ಕಾರದವರು ಆದಷ್ಟು ತೀವ್ರವಾಗಿ ಕೇಂದ್ರಸರ್ಕಾರವನ್ನು ಒತ್ತಾಯಪಡಿಸಿ ಈ ಕಾರ್ಖಾನೆಯನ್ನು ನಮ್ಮ ರಾಜ್ಯದಲ್ಲಿ ಪ್ರಾರಂಭಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕಮ್ಯೂನಿಕೇಷನ್ಸ್ ವಿಷಯ. ಈ ವಿಚಾರದಲ್ಲಿ ಒಂದು ಒಳ್ಳೆಯ ಸಂಗತಿಯನ್ನು ಹೇಳಿದ್ದಾರೆ, ಅದೇನೆಂದರೆ, ಕೇಂದ್ರ ಸರ್ಕಾರದವರು ಈ ಬಾಬಿಗೆ ಹಣವನ್ನು ಕೊಡುತ್ತಿದ್ದಾರೆಂದು. ಇದರಿಂದ ನಿಜವಾಗಿ ನಮಗೆ ಸಂತೋಷವಾಗಿದೆ. ಇದು ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿದೆ. ಅಥಣಿ ಹತ್ತಿರವಿರುವ ಕೃಷ್ಣಾ ನದಿಗೆ ಒಂದು ಸೇತುವೆ ಕಟ್ಟುವ ವಿಚಾರವೇನಿತ್ತು ಅದನ್ನು ಈಗ ಅಥಣಿಯಿಂದ ಬೇರೆ ಕಡೆಗೆ ಹಾಕಿದ್ದಾರೆಂದು ನನಗೆ ತಿಳಿದು ಬಂದಿದೆ. ಅದು ಸರಿಯಲ್ಲ. ಈ ವಿಚಾರವಾಗಿ ನಾನು ಎಷ್ಟೋ ವರ್ಷಗಳಿಂದ ಪ್ರಸ್ತಾಪಮಾಡಿದ್ದರೂ ಇಂತಹ ಜರೂರು ಪ್ರಾಜೆಕ್ಟನ್ನು ಕಟ್ಟದೇ ಇರುವುದರಿಂದ ಅಲ್ಲಿನ ಜನಗಳಿಗೆ ಏನೂ ಅನುಕೂಲವಾಗಿಲ್ಲ. ಇದನ್ನು ಕಟ್ಟಿದರೆ ಅಲ್ಲಿನ ಜನರಿಗೆ ಬಹಳ ಸೌಕರ್ಯವಾಗುತ್ತದೆ. ಆದ್ದರಿಂದ ಸರ್ಕಾರದವರು ಅದನ್ನು ತೀವ್ರವಾಗಿ ಕೈಗೊಳ್ಳಬೇಕು. ಅದರ ಬಗ್ಗೆ ಆದಷ್ಟು ತೀವ್ರ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅದಲ್ಲದೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಎಷ್ಟೋ ಪ್ರಗತಿಪರವಾದಂತಹ ವಿಚಾರಗಳು ಅಡಕವಾಗಿದೆ. ಈ ವಿಚಾರಗಳು ಕಾರ್ಯಗತವಾಗಬೇಕಾದುದು ಬಹಳ ಮಹತ್ವದ್ದು. ಅವರು ನಮ್ಮ ರಾಜ್ಯದ ಆಡಳಿತದ ಹಿತದೃಷ್ಟಿಯಿಂದ, ಆರ್ಥಿಕ ಸುಧಾರಣೆಯಾಗುವ ದೃಷ್ಟಿಯಿಂದ ಇದನ್ನು ಪ್ರಸ್ತಾಪ ಮಾಡಿದ್ದಾರೆ, ಅವುಗಳನ್ನೆಲ್ಲಾ ಆದಷ್ಟು ಜಾಗ್ರತೆಯಾಗಿ ಕಾರ್ಯರೂಪಕ್ಕೆ ನಮ್ಮ ಸರ್ಕಾರದವರು ತರಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

3-30 P.M.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಸನ್ಮಾನ್ಯ ಉಪಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕಾದರೆ, ಒಂದೊಂದು ಸಾರಿ, ಇದರಿಂದ ಏನಾದರೂ ಪ್ರಯೋಜನವಿದೆಯೇ, ಮಾತನಾಡತಕ್ಕ ಅವಶ್ಯಕತೆ ಇದೆಯೇ ಎಂದು ಮನಸ್ಸಿಗೆ ಬಹಳ ಜಿಗುಪ್ಸೆಯಾಗುತ್ತದೆ. ಕಾರಣ ಏನೆಂದರೆ ರಾಜ್ಯಾಂಗದ ಪ್ರಕಾರ ಇಂತದ್ದು ಒಂದು ಭಾಷಣ ಇಡಬೇಕು, ಅದಕ್ಕೋಸ್ಕರ ಈ ಭಾಷಣವನ್ನು ಮಾಡಿದ್ದಾರೆ. ನಮ್ಮ ಮಾನ್ಯ ಸ್ಪೀಕರ್ ಸಾಹೇಬರು ಅನೇಕ ಸಾರಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇಂಥ ಸಂಪ್ರದಾಯ ಇದೆ, ಆ ಸಂಪ್ರದಾಯದ ಪ್ರಕಾರ ನಾವು ಇಲ್ಲ ಮಾಡುತ್ತಿದ್ದೇವೆ. ಆ ಸಂಪ್ರದಾಯವನ್ನು ಬಿಟ್ಟು ಏನೂ ಮಾಡುವುದಿಲ್ಲವೆಂದು ಹೇಳುತ್ತಾರೆ. ನಾನು ಮಾನ್ಯ ಸ್ಪೀಕರ್‌ರವರಲ್ಲಿ ಕೇಳುವುದೇನೆಂದರೆ, ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಎಲ್ಲಿಯಾದರೂ ಸುಮಾರು 700 ವರ್ಷಗಳ ಚರಿತ್ರೆಯಲ್ಲಿ ಕಿಂಗ್ ಸ್ಪೀಚ್, ಅಥವಾ ಕ್ವೀನ್ ಸ್ಪೀಚ್‌ಗಳಲ್ಲಿ ಇಂಥ ಒಂದು ಭಾಷಣವಾದರೂ ತೋರಿಸಿದರೆ ಸರವಾಗಿಲ್ಲ, ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹೋಗಿ ಅಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನೋಡಿಕೊಂಡು ಬಂದ ಮೇಲೆ ಅದನ್ನು ಸರಿಯಾಗಿ ಪಾಲಿಸುತ್ತಾರೆಂಬುದನ್ನು ತಿಳಿದುಕೊಂಡಿದ್ದೇವು. ಇದು ರಾಜ್ಯಪಾಲರ ಭಾಷಣವಲ್ಲ, ಇದು ಒಂದು ಆಡ್ಮಿನಿಸ್ಟ್ರೇಷನ್ ರಿಪೋರ್ಟ್. ನೀವು ಏನು ನಾನಾ ಇಲಾಖೆಯಲ್ಲಿ, ಆಡಳಿತದಲ್ಲಿ ಏನೇನು ಮಾಡುತ್ತಿದ್ದೀರಿ ಎಂಬುದನ್ನು ಈ 60 ಪುಟದಲ್ಲಿ ತುಂಬಿ, ಪಾಪ ರಾಜ್ಯಪಾಲರು ನೀರು ಕುಡಿದು, ಅವರು ಬೀಳುತ್ತಾರೆ ಎನ್ನುವಷ್ಟು ಆಯಾಸ ಮಾಡಿಸಿ ಓದಿಸಿದ್ದೀರಿ. ನಿಮ್ಮ ಹತ್ತಿರ ಹೇಳುವುದಕ್ಕೆ ಏನೂ ಇಲ್ಲ. ಪಾಲಿಸಿ ಇಲ್ಲದಾಗ ನೀವು ಒಂದು ಆಡ್ಮಿನಿಸ್ಟ್ರೇಷನ್ ರಿಪೋರ್ಟ್ ಇಡುತ್ತೀರಿ. ಹಿಂದಿನ ಜವಾಬ್ದಾರಿ ಸರ್ಕಾರ ಇದ್ದಾಗ ಸಹಾ ಭಾಷಣ 8-10 ಪುಟ ಇರುತ್ತಾ ಇರಲಿಲ್ಲ. ಆ ಕೂಡಲೇ ಪ್ರತಿಯೊಂದು ಇಲಾಖೆಯ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಕೊಡುತ್ತಿದ್ದರು. ಈ ಒಂದು ರಾಜ್ಯಪಾಲರ ಭಾಷಣವನ್ನು ಬರೆಯಲಿಕ್ಕೆ ಬರದಿರತಕ್ಕ ಸರ್ಕಾರ ಇದು. ಇದನ್ನು ಯಾವುದೋ ಸೆಕ್ರಟರಿಯವರಿಂದ ಬರೆಸಿ ರಾಜ್ಯಪಾಲರ ಭಾಷಣ ಎಂದು ಹೇಳಿದ್ದೀರಿ. ಇದು ನೋಡಲಿಕ್ಕೆ ಲಾಯಕ್ಕಿಲ್ಲ. ಇದರಲ್ಲಿ ಅಷ್ಟು ಮಾಡಿದ್ದೇವೆ ಇಷ್ಟು ಮಾಡಿದ್ದೇವೆ ಎಂದು ಭಾಷಣದಲ್ಲಿ ಹೇಳಿದ್ದಾರೆ. ನಿಮಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ನಾಳೆ ಬಜೆಟ್ ಭಾಷಣ ಬರುತ್ತದೆ. ನೀವು ಏನು ಮಾಡಬೇಕೆಂದರೆ, ನಿಮ್ಮ

(ಶ್ರೀ ಎಚ್. ಸಿದ್ಧವೀರಪ್ಪ)

ರೂಪಾಯಿ ಆಣಿಗಿಂತ, ನೀವು ಪರ್ಫಾರ್ಮೆನ್ಸ್ ಬಜೆಟ್ ಅಂದರೆ—69-70ನೇ ಸಾಲಿನಲ್ಲಿ ಏನೇನು ಸಾಧನೆ ಮಾಡಿದ್ದೀರಿ, ಯಾವುದರಲ್ಲಿ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ, ಎಷ್ಟೆಷ್ಟು ಸಾಧನೆ ಮಾಡಿದ್ದೀರಿ ಎಂಬುದನ್ನು ತೋರಿಸಿದರೆ, ಆವಾಗ ಪರವಾಗಿಲ್ಲ ಎಂದು ಹೇಳಬಹುದು. ನಿಮ್ಮದು ಏನಾಗಿದೆ ಅಂದರೆ, ಬರೇ ಭಾಷಣ, ಭಾಷಣ. ನಿಮ್ಮ ಆಡಳಿತದಲ್ಲಿ ಇದೆ. ಅದು ಕೃತಿಯಲ್ಲಿ ಇಲ್ಲ, ಕಾರ್ಯದಲ್ಲಿ ಕಾಣುತ್ತಿಲ್ಲ. ನಾನು ಅನುಭವದಿಂದ ಇದನ್ನು ಹೇಳುತ್ತಿದ್ದೇನೆ, ಅಷ್ಟು ಮಟ್ಟಿಗೆ ಹೇಳಿ, ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಶ್ರೀಮಾನ್ ಮುಖ್ಯಮಂತ್ರಿಯವರು ಆಗಲೇ ಹೇಳಿದರು—ಕೆಲವರು ಹೊಸ ಪಾರ್ಟಿಗೆ ಸೇರಿದ್ದಾರೆ, ಬೇರೆ ಒಂದು ಪಾರ್ಟಿಯನ್ನು ಮಾಡಿದ್ದಾರೆ, ಎಂದು. ಅವರು ಬಹುಶಃ ಈಗ ಇದ್ದಿದ್ದರೆ ಚೆನ್ನಾಗಿತ್ತು ಏಕೆಂದರೆ ಅವರು ಇಲ್ಲದಿದ್ದಾಗ ಅವರ ವಿಚಾರದಲ್ಲಿ ನಾನು ಹೇಳಬೇಕಾಗುತ್ತದಲ್ಲಾ ಎಂದು ವ್ಯಸನವಾಗುತ್ತದೆ. ನಾವು ಕಳೆದ ಮೂರು ನಾಲ್ಕು ವರ್ಷಗಳಿಂದಲೂ ರಾಜಕೀಯದಲ್ಲಿ ಎಷ್ಟೆಷ್ಟು ಬದಲಾವಣೆಗಳನ್ನು ನೋಡಿದ್ದೇವೆ. ನಮ್ಮ ಹಿರಿಯರಾದ ಮಾನ್ಯ ಚನ್ನಯ್ಯನವರು ಮತ್ತಿತರ ಸ್ನೇಹಿತರು ಮೊದಲು ಕಾಂಗ್ರೆಸ್ಸಿನಲ್ಲಿದ್ದವರು ಜನತಾ ಪಕ್ಷ ಆದಾಗ ನಾನು ಒಂದು ವಿಷಯವನ್ನು ಹೇಳಿದ್ದೇನೆ. ಅವತ್ತಿನ ದಿವಸ ಹೇಳಿರುವ ವಿಚಾರವನ್ನು ನಾನು ಇಲ್ಲಿ ಈ ಸಭೆಯ ಮುಂದೆ ಪ್ರಸ್ತಾಪಮಾಡಬಯಸುತ್ತೇನೆ. ಅದು ತಾರೀಕು 20-3-67ರಲ್ಲಿ ಬಜೆಟ್ ಭಾಷಣ ಮಾಡಬೇಕಾದರೆ, ಹೇಳಿದಂತಹ ವಿಚಾರ. ಅದಕ್ಕೆ ಸಂಬಂಧಪಟ್ಟಂತೆ ಹೇಳುತ್ತೇನೆ :

> "...... I do remember what he said when some of us were throwu out of the Congress. ... ...
>
> We did not resign from the Congress; we were thrown out because we had the courage to tell them when we were in the ruling party that what they were doing was to the detriment of the country. One fine morning they said, 'these people have been removed from the Congress.' Remember what he said on that occasion. He said, 'It is good riddance of bad rubbish and I would not touch them with a bank pole.' These are the words which I will never forget in my life time. When he said 'it was a good riddance of bad rubbish', when that is the feeling he has to some of the members of this House, how on earth would it be possible to expect that he would think of co-operation from this side ?"

ಇದು ಅವತ್ತಿನ ದಿವಸ ಹೇಳಿದ್ದು. ಅವತ್ತಿನ ಮಿತಿಯಲ್ಲಿ ನಮಗೆ ಬಹಳ ವ್ಯಥೆಯಾಗುತ್ತಿತ್ತು. ನಿಷ್ಕಾರಣವಾಗಿ ಒಬ್ಬ ಮನುಷ್ಯ ಒಬ್ಬನ ಸ್ವಪ್ರತಿಷ್ಠೆಯನ್ನು ಬೆಳೆಸುವುದಕ್ಕಾಗಿ, ತನಗೆ ಯಾರು ವಿರೋಧವಾಗಿದ್ದಾರ, ಅವರ ಮೇಲೆ ಚಾರ್ಜಸ್ ಮಾಡಿ ತೆಗೆದುಹಾಕಿದ ಕಾಲವಿತ್ತು. ಯಾವ ಮನುಷ್ಯ ಹಾಗೆ ಮಾಡಿದ್ದಾನೋ ಅವರನ್ನೇ ಇವತ್ತು ಕಾಂಗ್ರೆಸ್ಸಿನಿಂದ ತೆಗೆದುಹಾಕಿದ್ದಾರೆ. That epithet "good riddance of bad rubbish" has been transferred to the shoulders of the gentlemen who uttered them against the founder of the Mysore Congress who sacrificed his all for the building up of the Party and others. ನಮಗೆ ಪುನಃ ಕಾಂಗ್ರೆಸ್ಸಿಗೆ ಬರಲು ಅವಕಾಶ ಸಿಕ್ಕಿದ್ದು ಬಹಳ ಹೆಮ್ಮೆಯಾಗಿದೆ. ಇವತ್ತು ನಾವು ಸ್ಥಿರ ಮನಸ್ಸಿನಿಂದ ಈ ಸಂಸ್ಥೆಯನ್ನು ಸೇರಿಕೊಂಡಿದ್ದೇವೆ. ಇವತ್ತು ರಾಜ್ಯದಲ್ಲಿ ಏನು ನಡೆಯುತ್ತಿದೆ? ಕನ್ನಡ ನಾಡಿನ ಒಬ್ಬ ವ್ಯಕ್ತಿ ದುರ್ದೈವದಿಂದ ಹಿಂದೂಸ್ಥಾನದ ಪ್ರಧಾನ ಮಂತ್ರಿಯವರನ್ನು ಅವಾಚ್ಯ ಶಬ್ದಗಳಿಂದ ಬಾಯಿಗೆ ಬಂದ ಹಾಗೆ ಬಯ್ಯುವುದು ತೀರಾ ದುಃಖಕರವಾದ ಸಂಗತಿ. ಅವರು ಮಾತನಾಡತಕ್ಕದನ್ನು ನೋಡಿದಲೆ ಕನ್ನಡ ನಾಡಿನ ಜನ ಹಿಂದೂಸ್ಥಾನದ ಪ್ರಧಾನ ಮಂತ್ರಿಯವರನ್ನು ಈ ರೀತಿ ಹೇಳುವ ಮಟ್ಟಕ್ಕೆ ಬಂತೇ ಎಂದು ಅನೇಕರು ದುಃಖಪಡುತ್ತಿದ್ದಾರೆ. ಅನೇಕರು ಈ ಮಾತನ್ನು ಇವತ್ತು ಹೇಳುತ್ತಿದ್ದಾರೆ.

ವಿರೋಧ ಇರಬಹುದು. ನಾನು ಮಾಡಿದೆ, ನಾನು ಮಾಡಿದೆ, ನಾನು ಮಾಡಿದೆ ಎಂಬ ಅಹಂ ಇದೆಯಲ್ಲಾ, ನಾನು ಈ ಪ್ರಧಾನಿಯನ್ನು ಮಾಡಿದ್ದು ಈ ಪ್ರಧಾನಿ ನಾನು ಹೇಳಿದ ಹಾಗೆ ಕೇಳಬೇಕು. ವೀರೇಂದ್ರ ಪಾಟೀಲ್‌ರವರು ದತ್ತು ಪುತ್ರರ ಹಾಗೆ ಅವರು ಹೇಳಿದ ಹಾಗೆ ನಡೆಯಬೇಕು, ಎಡಗೈ ಹೆಬ್ಬೆಟ್ಟು ಹಾಕಬೇಕು. ತಮಗೆ ಇಂತಹ ಒಂದು ಕೆಲಸ ಇಲ್ಲವಲ್ಲಾ ಎಂಬ ಸಂಕಟದಿಂದ ಪ್ರಧಾನ ಮಂತ್ರಿಯನ್ನು ತೆಗೆಯುವವರೆಗೂ ನನಗೆ ನಿದ್ರೆ ಬರುವುದಿಲ್ಲ, ಊಟ ಸೇರುವುದಿಲ್ಲ, ಈ ಪ್ರಧಾನ ಮಂತ್ರಿಯನ್ನು ತೆಗೆಯುವುದಕ್ಕೆ ಹಟ ತೊಟ್ಟಿದ್ದೇನೆ ಎಂಬ ಈ ವಾದ ಇದೆಯಲ್ಲಾ ಇದು ಕನ್ನಡ ನಾಡಿನ ಜನತೆಯ ತಲೆ ತಗ್ಗಿಸಿದೆ. ಕನ್ನಡ ನಾಡಿನ ಜನತೆಯಲ್ಲಿ ಇಂತಹ ಒಬ್ಬ ಪುತ್ರ ಇದ್ದಾರೆಯಲ್ಲಾ ಎಂಬುದು ಎಲ್ಲರಲ್ಲೂ ಶೋಚನೀಯವಾದ ವಿಚಾರವಾಗಿದೆ.

ಶ್ರೀ ಬೋಳ ರಘುರಾಮ ಶೆಟ್ಟಿ.—ನಿಜಲಿಂಗಪ್ಪನವರನ್ನು ನಮ್ಮ ಕನ್ನಡ ರಾಜ್ಯದ ಪ್ರತಿನಿಧಿ ಎಂದು ಏಕೆ ಒಪ್ಪಿಕೊಳ್ಳಬೇಕು ?

ಶ್ರೀ ಎಚ್. ಸಿದ್ಧವೀರಪ್ಪ.—ಕನ್ನಡ ನಾಡಿನಲ್ಲಿ ಅವರು ಹುಟ್ಟಿದವರಾಗಿರುವುದರಿಂದ ಕನ್ನಡ ನಾಡಿನ ಪ್ರಜೆ ಎಂದು ಹೇಳಿದೆನೇ ಹೊರತು ಬೇರೆ ರೀತಿಯಲ್ಲಿ ಅಲ್ಲ. ಈ ಒಂದು ಮಾತನ್ನು ಮಾತ್ರ ಅವರ ಗಮನಕ್ಕೆ ತರುತ್ತೇನೆ, ಮಹಾಲಿಂಗರಂಗ ಕವಿ ಕ್ರಿ. ಶ 1675ನೆ ಇಸವಿಯಲ್ಲಿ ಬರೆದದ್ದನ್ನು ಈಗ ನಮ್ಮ ಕನ್ನಡ ನಾಡಿನ ಜನ ಬಾಕಿ ಭಾಷೆಗಳಲ್ಲೂ ಸಹ ಭಾಷಾಂತರ ಮಾಡಿಸಿ ಓದುತ್ತಾ ಇದ್ದಾರೆ. ಈ ಮಹನೀಯ ಮನುಷ್ಯ ಸ್ವಭಾವದ ವಿಚಾರದಲ್ಲಿ ಬಹಳ ಚೆನ್ನಾಗಿ ಬರೆದಿದ್ದಾನೆ. ನಮ್ಮ ಮುಖ್ಯ ಮಂತ್ರಿಗಳು, ಶ್ರೀಮಾನ್ ರಾಚಯ್ಯನವರು ಇದನ್ನು ಕೇಳಬೇಕು, ಇದರಲ್ಲಿ ಕೆಲವನ್ನು ಓದುತ್ತೇನೆ :

ಎತ್ತು ತೆಂಗಿನ ಕಾಯ ಬಲ್ಲುದೆ ? । ಕತ್ತೆಯರಿವುದೆ ಕತ್ತುರಿಯ ? ನೆರೆ ।
ಬುತ್ತಿಗಳ್ಳರಿಗೇಕೆ ಸತ್ಯವ್ರತ, ಸದಾಚಾರ ॥

ದತ್ತಪುತ್ರನಿಗೇತಕ್ಕೆ ಪಿತೃ । ಭಕ್ತಿ ? ವಾಲ್ಯಸುಂಗಧವನಿತಾ ।
ಸಕ್ತರಿಗೆ ಪರತತ್ತ್ವಚಿಂತೆಯದೇಕೆ ? ಹೇಳೆಂದ

ಎತ್ತಿಗುತ್ತಮಲಿಂಗಮುದ್ರೆಯ । ನೊತ್ತಲಾಗದ ಬಸವನೆಂಬರು ; ।
ಕತ್ತೆಯನು ಹಿಡಿತಂದು ಮುದ್ರೆಯನೊತ್ತಲಾ ಕತ್ತೆ ॥

ಕತ್ತೆಯಲ್ಲದೆ ಬಸವನಪ್ಪುದೆ ? । ಸತ್ಯಸಂಧಗೆ ಯೋಗ್ಯವಲ್ಲದೆ
ತೊತ್ತುಬಡಿಕಂಗೇಕೆ ತತ್ವವಿಚಾರ ? ಹೇಳೆಂದ

ಈ ಎರಡು ಪದ್ಯಗಳನ್ನು ಅವರು ಬಾಯಿಪಾಠ ಮಾಡಿ, ಮೆಲುಕು ಹಾಕಿ ಅದರಲ್ಲಿ ಅರ್ಥವೇನಿದೆ ಎಂಬುದನ್ನು ತಿಳಿದುಕೊಳ್ಳಬೇಕು. ನಾವು ಏನು ತಿಳಿದಿದ್ದೆವು ಎಂದರೆ ನಿಜಲಿಂಗಪ್ಪನವರು ಸದ್ಯ ಹೊರಟು ಹೋದರು ಈ ದೇಶಕ್ಕೆ ಒಂದು ಒಳ್ಳೆಯದೇ ಆಯಿತಪ್ಪಾ ಅಂತ ಇದ್ದೆವು. ಮಂತ್ರಿ ಪದವಿಯಿಂದ ಹೋದ ಮೇಲೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಬರುತ್ತಾರೆ, ಅವರು ತರುಣರು ಇದ್ದಾರೆ—ನಮಗೆ ಅವರೇ ಬರಬೇಕೆಂತಲೂ ಇರಲಿಲ್ಲ—ನಾನು ಹೇಳಿದೆ ಹೆಗ್ಗಡೆಯವರನ್ನಾದರೂ ಮಾಡಿ, ರಾಚಯ್ಯನವರನ್ನಾದರೂ ಮಾಡಿ, ಮತ್ತೊಬ್ಬರನ್ನಾದರೂ ಮಾಡಿ, ಇಲ್ಲ ವೀರೇಂದ್ರ ಪಾಟೀಲರೇ ನಮಗೆ ಬೇಕು ಅಂತ ಅನ್ನುವುದಾದರೆ ಅವರನ್ನಾದರೂ ಮಾಡಿ, ಅವರು ತರುಣರಿದ್ದಾರೆ ಎಂಬ ದೃಷ್ಟಿಯಿಂದ ಹೇಳಿದೆ. ಅವರು ಮುಖ್ಯ ಮಂತ್ರಿಯಾದ ಮೇಲೆ ನಾನು ಒಂದೇ ಒಂದು ಸಾರಿ ಅವರ ಮನೆಗೆ ಹೋಗಿ ಹೇಳಿದೆ-ಅವರ ಸಹೋದ್ಯೋಗಿಗಳು ಇನ್ನೊಬ್ಬರು ಅಲ್ಲಿ ಇದ್ದರು-ಈ 6 ವರ್ಷಗಳಿಂದ ಶ್ರೀಮಾನ್ ನಿಜಲಿಂಗಪ್ಪನವರ ಅದಕ್ಷತೆಯ ಆಡಳಿತದಿಂದ, ಶ್ರೀಮಾನ್ ನಿಜಲಿಂಗಪ್ಪನವರ ಜಾತೀಯತೆಯ ಆಡಳಿತದಿಂದ ಈ ದೇಶದಲ್ಲಿ ಆಗಬಾರದ ಅನ್ಯಾಯಗಳು ಆಗಿವೆ, ನೀವು ಬಹಳ ತರುಣರು, ಇನ್ನೂ ಅನೇಕ ವರ್ಷಗಳ ಕಾಲ ಈ ದೇಶದಲ್ಲಿ ಇರಬೇಕು, ರಾಜಕೀಯದಲ್ಲಿ ಇರಬೇಕು ಅನ್ನುವುದಾದರೆ ದಯಮಾಡಿ ನೀವು ಏನು ನಿಜಲಿಂಗಪ್ಪನವರು ತುಳಿಯುತ್ತಾ ಇದ್ದರೋ ಆ ಹಾದಿಯನ್ನು ತೊರೆಯಬೇಕು. ನಾನು ಯಾವ ಅಶೋತ್ತರಗಳಿಗೂ ಬೀಳುವವನಲ್ಲ, ಒಂದು ದಿವಸದ ಊಟಕ್ಕೆ ನೂರು, ನೂರ ಐವತ್ತು ರೂಪಾಯಿ ಖರ್ಚು ಮಾಡುತ್ತಾರೆಯಲ್ಲಾ ಇದು ಬೇಡ. ಇಲ್ಲಿರತಕ್ಕ ಜನ ನಿಮ್ಮಿಂದ ಏನೂ ಅಪೇಕ್ಷೆ ಮಾಡುವುದಿಲ್ಲ. ರೂಲ್ ಆಫ್ ಲಾ ಕೊಡಿ, ಸರ್ಕಾರ ನಿಷ್ಪಕ್ಷಪಾತವಾಗಿ ಎಲ್ಲರಿಗೂ ಒಂದೇ ದೃಷ್ಟಿಯಿಂದ ಆಡಳಿತ ಮಾಡುತ್ತದೆ ಎಂಬ ಭಾವನೆ ಮೂಡು

(ಶ್ರೀ ಎಚ್. ಸಿದ್ಧವೀರಪ್ಪ)

ವಂತೆ ನೀವು ಕೆಲಸ ಮಾಡಬೇಕು. ಇಷ್ಟೇ ನಿಮ್ಮಿಂದ ನಿರೀಕ್ಷೆ ಮಾಡುವುದು ಅಂತ ಹೇಳಿ ಅದನ್ನು ಬಹಳ ಕಾಲ ಪರೀಕ್ಷೆ ಮಾಡಿದೆ, ಆ ರೀತಿ ಅವರು ಏನಾದರೂ ಮಾಡುತ್ತಾರೆಯೇ ಅಂತ. ಅಂದರೆ ಅದು ಏನಾಗಿದೆ ! ಶ್ರೀಮಾನ್ ನಿಜಲಿಂಗಪ್ಪನವರೇ ಬರಬೇಕು, ಬಂದು ಇಲ್ಲಿ ಕುಳಿತುಕೊಂಡು ಐಸೇ ಬ್ರಿಂಗ್ ದಟ್ ಫೈಲ್ ಅಂತ ಅಪ್ಪಣೆ ಮಾಡಬೇಕು, ಬೆಳಿಗ್ಗಿನಿಂದ ಅವರ ಹತ್ತಿರ ಇವರು ಕುಳಿತುಕೊಂಡು ಕುಮಾರ ಕೃಪದಲ್ಲಿ ಅವರು ಹೇಳಿದ್ದೆಲ್ಲಾ ಒಂದು ಸಣ್ಣ ವಿಚಾರವಾದರೂ ಡೆಲ್ಲಿಯಿಂದ ಟೆಲಿಫೋನ್ ಮೂಲಕ ತರಿಸಿ ಅವರು ಹೇಳಿದ ಹಾಗೆ ಆಡಳಿತ ಮಾಡುತ್ತಾರೆಯೇ ಹೊರತು ತಮ್ಮ ಸ್ವಶಕ್ತಿಯಿಂದ ಹೋಗಲಿಲ್ಲ. ಅವರು ತಮ್ಮ ಸ್ವಶಕ್ತಿಯಿಂದ ತಪ್ಪು ಮಾಡಿದ್ದರೆ ಅದು ತಪ್ಪಲ್ಲ ಎಂದು ಭಾವಿಸುತ್ತೇನೆ. ಇದನ್ನು ನೋಡಬೇಕಾದರೆ ಚಿತ್ರದುರ್ಗ ಜಿಲ್ಲೆಗೆ ಬರಬೇಕು. ಅಲ್ಲಿ ನಡೆಯುತ್ತಾ ಇರತಕ್ಕ ಆಡಳಿತ ವೈಖರಿಯನ್ನು ನೋಡಬೇಕು, ಒಬ್ಬ ಫಿಲಾಸಫರ್ ಹೇಳುತ್ತಾನೆ :

"Tyranny of the majority can be much more powerful than the tyranny of an individual."

ಶ್ರೀಮಾನ್ ನಿಜಲಿಂಗಪ್ಪನವರು ಇರುವವರೆಗೂ ಟಿರನಿ ಆಫ್ ದಿ ಇಂಡಿವಿಜ್ಯುಯಲ್ ಇತ್ತು. ಈಗ ಕ್ರೋಢೀಕರಿಸಿ ಟಿರನಿ ಆಫ್ ದಿ ಮೆಜ್ಯಾರಿಟಿ ಮಾಡಿರುವುದರಿಂದ ಎಲ್ಲಿ ನೋಡಿದರೂ ಸಣ್ಣವರಿಂದ ಹಿಡಿದು ದೊಡ್ಡವರವರೆಗೂ ಆಡಳಿತದಲ್ಲಿ ಪಕ್ಷಪಾತ, ಆಡಳಿತದಲ್ಲಿ ಆಗಬಾರದ ಅನ್ಯಾಯ ಆಗುತ್ತಾ ಇದೆ. ಇವತ್ತಿನ ದಿವಸ ಒಬ್ಬ ಕಾನ್‌ಸ್ಟೇಬಲ್‌ನ ಮೊದಲು ಮಾಡಿಕೊಂಡು, ಅವರು ಮಾಡತಕ್ಕ ಅನ್ಯಾಯವನ್ನು ನೋಡಿದರೆ ನನಗಾದರೂ ಅನಿಸುತ್ತದೆ ಇನ್ನೊಂದು ದೇಶದಲ್ಲಿ ಆಗಿದ್ದರೆ ಅವರನ್ನು ಜೀವದೊರ್ಸೆ ಬಿಡುತ್ತಾ ಇರಲಿಲ್ಲ. ನಾನು ಅನೇಕ ಕಾಗದಗಳನ್ನು ಮುಖ್ಯ ಮಂತ್ರಿಗಳಿಗೆ ಬರೆದಿದ್ದೇನೆ. 400-500 ಕಾಗದಗಳು ಬರೆದದ್ದನ್ನು ಇಟ್ಟುಕೊಂಡಿದ್ದೇನೆ. ಮೊದ ಮೊದಲು ಉತ್ತರ ಕೊಟ್ಟರು. ಈಚಿನದಕ್ಕೆ ಯಾವುದಕ್ಕೆ ಉತ್ತರ ಕೊಟ್ಟರೋ, ಯಾವುದಕ್ಕೆ ಬಿಟ್ಟರೋ ಗೊತ್ತಿಲ್ಲ. ಒಂದು ಸಾರಿ ಶ್ರೀಮಾನ್ ಲಕ್ಕಪ್ಪನವರು ಕೊಟ್ಟ ಜವಾಬು ನನ್ನ ಹತ್ತಿರ ಇದೆ. ಏಪ್ರಿಲ್‌ನಲ್ಲಿ ಬರೆದದ್ದಕ್ಕೆ ಅವರಿಂದ ಜವಾಬು ಬಂದಿರುವುದು ಡಿಸೆಂಬರ್‌ನಲ್ಲಿ, 8 ತಿಂಗಳು ಆಗಿದೆ. ನಿಜಲಿಂಗಪ್ಪನವರ ಕರೀಛಾಯೆ ಮಾರೆಯುದಷ್ಟು ಇನ್ನೂ ಆಡಳಿತದಲ್ಲಿ ಇದೆ. ಇಂಟರ್‌ನಲ್ ಅಡ್ಮಿನ್‌ಸ್ಟ್ರೇಷನ್‌ನಲ್ಲಿ ಯಾರು ಮೇಲೆ ನಿಂತುಕೊಂಡಿದ್ದಾರೋ ಅವರಿಗಾದರೂ ರಕ್ಷಣೆ ಇದೆಯೋ ಇಲ್ಲವೋ, ಫಸ್ಟ್ ಗ್ರೇಡ್ ಸೆಕಂಡ್ ಗ್ರೇಡ್ ಅಂತ ಇದೆಯೋ ಏನೋ ಗೊತ್ತಿಲ್ಲ. ಈ ಪ್ರಕಾರ ನಡೆಯುತ್ತಾ ಇರುವುದರಿಂದ ದೇಶದಲ್ಲಿ ಅಶಾಂತಿ ತುಂಬಿದೆ, ಜನಗಳ ಮನಸ್ಸಿನಲ್ಲಿ ಕಳವಳ ಇದೆ, ಜನಗಳು ನಮ್ಮ ನಮ್ಮ ರಕ್ಷಣೆಯನ್ನು ಮಾಡಿಕೊಳ್ಳಲಿಕ್ಕೆ ಪೋಲೀಸರನ್ನು ನಂಬದೆ ನಮ್ಮ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ಆಗಲೇ ವಿಚಾರ ಮಾಡುತ್ತಾ ಇದ್ದಾರೆ. ಇದುವರೆಗೂ ಪೋಲೀಸ್‌ನವರು ಎಂದರೆ ಒಂದು ಭಯ ಇತ್ತು. ವೀರೇಂದ್ರ ಪಾಟೀಲ್‌ರವರು ಒಂದು ಮಾತು ಹೇಳುತ್ತಾ ಇದ್ದರು ಈ ಸರ್ಕಾರ 'ಕಲ್ಲು ಬಂಡೆ' ಇದ್ದ ಹಾಗೆ ಇದೆ ಅಂತ. ಇದು ಕಲ್ಲು ಬಂಡೆ ಅಲ್ಲ ಬೆಣ್ಣೆ ಉಂಡೆಯಂತೆ ಆಗಿದೆ. ಈ ತಿಂಗಳ 9ನೇ ತಾರೀಖು ಶ್ರೀಮಾನ್ ನಿಜಲಿಂಗಪ್ಪನವರು ಚಿತ್ರದುರ್ಗಕ್ಕೆ ಬಂದರು, ಒಂದು ಹಳ್ಳಿಯಲ್ಲಿ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಅಯೋಗ್ಯ ರೀತಿಯಿಂದ ವರ್ತಿಸಿ ಸ್ಥಳೀಯಜನರ ಮಾತು ಕೇಳಿಕೊಂಡು ಅನ್ಯಾಯ ಮಾಡುತ್ತಾ ಇದ್ದ ಅದು ಆ ಡಿಸ್ಟ್ರಿಕ್ಟ್‌ನಲ್ಲಿರತಕ್ಕ ಪೋಲೀಸ್ ಸೂಪರಿಂಟೆಂಡೆಂಟ್‌ಗೆ—ಈಗ ನಿಷ್ಪಕ್ಷಪಾತವಾಗಿ ಅವರು ಇರುವುದೇ ಕಷ್ಟ—ಗೊತ್ತಾದ ಮೇಲೆ ಆ ಪೋಲೀಸ್ ಕಾನ್‌ಸ್ಟೇಬಲ್‌ನ್ನು ಅಲ್ಲಿಂದ ವರ್ಗಾವಣೆ ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರು ಆತನನ್ನು ಕರೆಸಿ ಕೇಳುತ್ತಾರೆ: "ಯಾಕ್ರಿ ಅವನನ್ನು ಅಲ್ಲಿಂದ ವರ್ಗ ಮಾಡಿದ್ರೀ ? ನೀವು ಅವನನ್ನು ವರ್ಗ ಮಾಡಲಿಕ್ಕೆ ಕಾರಣವೇನು" ಎಂದು ಕೇಳಿದ್ದಕ್ಕೆ ಅವರು ಹೇಳಿದರು "ಅವನು ಈ ಹಳ್ಳಿಯಲ್ಲಿ ಕೆಲಸ ಮಾಡುತ್ತಾ ಇದ್ದ. ಇದು ನಮಗೆ ಸೇರಿದ್ದು, ಲಾ ಅಂಡ್ ಆರ್ಡರ್ ಮೇನ್‌ಟೇನ್ ಮಾಡಲಿಕ್ಕೆ ಮಾಡಿದೆ" ಎಂದು ಹೇಳಿದಾಗ ಮತ್ತೆ ಪುನಃ ಅವನನ್ನು ಅಲ್ಲೇ ಇರುವಂತೆ ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರು ಇನ್ನೂ ಮುಖ್ಯ ಮಂತ್ರಿಗಳು ಎಂಬ ದೃಷ್ಟಿಯಿಂದ ಈ ಮಂತ್ರಿಗಳು ಆಗಿಂದಾಗ್ಗೆ ಜಿಲ್ಲೆಯಲ್ಲಿ ಕೆಲವು ಪ್ರೋಗ್ರಾಂಗಳನ್ನು ಹಾಕಿಕೊಳ್ಳುತ್ತಾರೆ ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಹೀಗೆ ಆಗುತ್ತಾ ಇದೆ.

Sri ALLAM KARIBASAPPA.—Is it a speech or personal attack ?

Sri H. SIDDAVEERAPPA.—Whatever it is, take it. This is a speech. I am saying what is happening in the administration. I am

speaking against a person who is still a member of this House. Let him come and reply. It is not Sri Allam Karibasappa who has to reply.

ಮಂತ್ರಿಗಳಾಗಿ ಈಗ ಇರುವವರು ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳು ಎಂದು ತೋರಿಸಲು ಏನು ಮಾಡುತ್ತಿದ್ದಾರೆಂದರೆ ಚಿತ್ರದುರ್ಗ ಭಾಗಕ್ಕೆ ಪ್ರೋಗ್ರಾಂ ಹಾಕಿಕೊಳ್ಳುತ್ತಾರೆ. ಹಳ್ಳಿಗಾಡಿನಲ್ಲಿ ದೇವರನ್ನು ಹೊರಡಿಸಬೇಕಾದರೆ ದೊಡ್ಡ ದೇವರನ್ನು ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಹೋಗುತ್ತಾರೆ. ಸಣ್ಣ ದೇವರುಗಳಿವೆಯಲ್ಲ, ಬುಳ್ಳ ದೇವರು ಎಂದು ಕರೆಯುತ್ತಾರೆ, ಆ ದೇವರನ್ನು ತಲೆ ಮೇಲೆ ಹೊತ್ತುಕೊಂಡು ಕುಣಿಯುತ್ತಾರೆ. ಹಾಗೆ ನಮ್ಮ ಮಂತ್ರಿಗಳು ದೊಡ್ಡ ದೇವರನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಇವರು ಬುಳ್ಳದೇವರಾಗಿ ಅವರ ಜೊತೆಯಲ್ಲಿ ಬರುತ್ತಾರೆ. ಅವರ ಪ್ರಾಮುಖ್ಯತೆ ಇದೆ ಎಂದು ತೋರಿಸಬೇಕಲ್ಲ, ಅದಕ್ಕಾಗಿ. ಈ ಬಗ್ಗೆ ನಾನು ಒಂದು ಇಂಟರ್‌ಪಲೇಷನ್ ಕಳುಹಿಸಿದ್ದೇನೆ. ಜನವರಿ ತಿಂಗಳಿನಲ್ಲಿ ದಾವಣಗೆರೆಯಲ್ಲಿ ಒಂದು ಸಮಾರಂಭವಾಯಿತು. ಒಂದು ಸಮಾರಂಭವಾದರೂ ಕೂಡ ಇನ್‌ವಿಟೇಷನ್‌ನಲ್ಲಿ ವಸ್ತುತಃ ಏಳು ಸಮಾರಂಭಗಳು ಆ ಹೊತ್ತು ಬೆಳಗ್ಗೆ 8 ಗಂಟೆಯಿಂದ 11 ಗಂಟೆ ಒಳಗೆ ನಡೆದುವು. ಸಾಮಾನ್ಯವಾಗಿ ಸಮಾರಂಭಗಳಲ್ಲಿ ಮಂತ್ರಿಗಳು ಹೋದಾಗ ಅವರು ಜವಾಬು ಕೊಡುವುದು ಪದ್ಧತಿ. ಆದರೆ ಮಂತ್ರಿಗಳು ಜವಾಬು ಏನೂ ಕೊಡಬೇಕಾಗಿಲ್ಲ, ನಿಮ್ಮ ಪರವಾಗಿ ನಾನು ಜವಾಬು ಕೊಡುತ್ತೇನೆ ಎಂದು ದೊಡ್ಡ ದೇವರಾಗಿದ್ದವರು ಹೇಳಿದರು. ಅಲ್ಲಿ ಇದ್ದ ಮಂತ್ರಿಗಳೆಲ್ಲ ಈಗ ಇಲ್ಲದ್ದಾರೆ. ವಿದ್ಯಾ ಮಂತ್ರಿಯಾದವರು ನನಗೆ ಒಂದು ನಿಮಿಷ ಕೊಟ್ಟಿದ್ದಾರೆ, ನಾನು ಏನು ಹೇಳಲಿ ಎಂದು ಹೇಳಿದರು. ಮಂತ್ರಿಗಳ ಪರವಾಗಿ, ಸರ್ಕಾರದ ಪರವಾಗಿ, ಸರ್ಕಾರದ ಉತ್ತರವನ್ನು ಸರ್ಕಾರದಲ್ಲಿ ಇಲ್ಲದೇ ಇರತಕ್ಕ ಶ್ರೀಮಾನ್ ನಿಜಲಿಂಗಪ್ಪನವರು ಕೊಟ್ಟರು ಎಂದರೆ ಅಲ್ಲಿರತಕ್ಕ ಜನ ಏನು ಅರ್ಥ ಮಾಡಿಕೊಳ್ಳಬೇಕು ? ಇದಕ್ಕೆ ಕಾರಣವಿಷ್ಟೆ. ಅವರು ಮೊದಲು ಹೇಳಿದರು, ರಾಜ್ಯಾಂಗದ ಪ್ರಕಾರ ಮಂತ್ರಿ ಮಂಡಲ ರಚನೆಯಾದ ಮೇಲೆ ಪೋರ್ಟ್‌ಫೋಲಿಯೋಗಳನ್ನು ಹಂಚತಕ್ಕ ಅಧಿಕಾರ ಮುಖ್ಯ ಮಂತ್ರಿಗಳಿಗೆ ಸೇರಿದ್ದು. ಆದರೆ ಶ್ರೀಮಾನ್ ನಿಜಲಿಂಗಪ್ಪನವರು ರಾಜೀನಾಮೆ ಕೊಟ್ಟಮೇಲೆ ಈ ಮಂತ್ರಿ ಮಂಡಲದ ರಚನೆಯಾಯಿತಲ್ಲ, ಆಗ ಮಂತ್ರಿಗಳಿಗೆ ಇಂಥ ಪೋರ್ಟ್‌ಫೋಲಿಯೋ ಇರಬೇಕು ಎಂದು ನಾನೇ ಹೇಳಿದ್ದೇನೆ ಎನ್ನುವ ಮಾತನ್ನು ಅವರು ಗುಟ್ಟಾಗಿ ಇಡಲಿಲ್ಲ, ದೇಶದ ಮುಂದೆ ಹೇಳಿದರು. ನಾನು ಇಂಥದನ್ನು ಮಾಡಿದ್ದೇನೆ, ಈ ರೀತಿ ಮಾಡಿದ್ದೇನೆ ಎನ್ನುವುದನ್ನೆಲ್ಲ ಈ ದೇಶದ ಮುಂದೆ ಜಾಹಿರಾತು ಮಾಡಿದರು. ಇದು ಸರಿಯೇ ಎಂದು ನಾನು ಕೇಳುತ್ತೇನೆ. ಹೀಗಿದ್ದಾಗ್ಯೂ ನೀವು ಸುಮ್ಮನೆ ಅಧಿಕಾರಕ್ಕೆ ಅಂಟಿಕೊಂಡು ಕುಳಿತಿದ್ದೀರಾ ?

ಸರ್ಕಾರದ ವಾಹನಗಳನ್ನು ಉಪಯೋಗಿಸಬೇಕಾದರೂ ಕೂಡ ಒಂದು ನೀತಿ ನಿಯಮ ಇದೆ. ಸರ್ಕಾರದ ವಾಹನಗಳನ್ನು ಇವರ ಕಾಂಗ್ರೆಸ್ ಅಧ್ಯಕ್ಷರು ಇವರ ಜೊತೆಗೆ ಟೂರ್ ಹೋದಾಗ ಉಪಯೋಗಿಸಿಕೊಂಡು ಇನ್ನೂ ಮಂತ್ರಿಗಳಾಗಿಯೇ ಇದ್ದಾರೆ ಎಂದು ಹೇಳುವಂತೆ ಅವರ ಜೊತೆಯಲ್ಲಿ ಹೋಗಿರತಕ್ಕ ಮಂತ್ರಿಗಳು ಬಚ್ಚಾಗಳಂತೆ ಅವರು ಹೇಳಿದುದನ್ನು ಕೇಳಿಕೊಂಡಿರತಕ್ಕ ವಾತಾವರಣವನ್ನು ಹುಟ್ಟಿಸಿದರೆ ದೇಶದ ಜನ ಏನು ತಿಳಿದುಕೊಳ್ಳುತ್ತಾರೆ ? ಇದರಿಂದ ಏನು ಒಳ್ಳೆಯದಾಗುತ್ತದೆ ?

ಶ್ರೀ ಕೆ. ಲಕ್ಕಪ್ಪ.—ನೀವು ಹಾಗೆ ತಿಳಿದುಕೊಂಡಿದ್ದೀರಿ, ಜನ ಏನೂ ಹೇಳುತ್ತಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಬನ್ನಿ ತೋರಿಸುತ್ತೇನೆ. ಚಿತ್ರದುರ್ಗ ಜಿಲ್ಲೆಯ ಯಾವ ಊರಿನಲ್ಲಿ ಬೇಕಾದರೂ ಹೋಗಿ ಕೇಳೋಣ.

ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಇದರಲ್ಲಿ ಒಂದು ಉದ್ದೇಶವಿದೆ. ಅವರ ಕರಿಯ ಛಾಯೆಯನ್ನು ಈ ಮಂತ್ರಿ ಮಂಡಲದ ಮೇಲೆ ಬೀರಿ, ಅದರಿಂದ ಆಗಬಾರದ ಅನಾಹುತ ಈ ದೇಶಕ್ಕೆ ಆಗುತ್ತಿದೆ. ಇದನ್ನು ನಾವು ನಮ್ಮ ಮಕ್ಕಳು ಮತ್ತು ನಮ್ಮ ಮುಂದಿನ ಪೀಳಿಗೆ ಎಲ್ಲ ಅನುಭವಿಸಬೇಕಾಗುತ್ತದೆ. ಇವರು ಬೇಕಾದ ಹಾಗೆ ಲಡಾಯಿ ಮಾಡಿಕೊಳ್ಳಲಿ. ಮೈಸೂರು ರಾಜ್ಯದ ಮಂತ್ರಿಮಂಡಲ ಅವರು ಹೇಳಿದ್ದಕ್ಕೆಲ್ಲ ರಾಗ ಹಾಡುತ್ತಹೋದರೆ, ಈ ದೇಶದ ಬೆಳವಣಿಗೆ ಕಾರ್ಯ ಮತ್ತು ರಿಲೇಷನ್‌ಷಿಫ್ ಎಂದು ಏನು ಹೇಳುತ್ತಾರೆ, ಸಾಮಾನ್ಯವಾದ ರಿಲೇಷನ್‌ಷಿಪ್ ಹ್ಯೂಮನ್ ರಿಲೇಷನ್‌ಷಿಪ್‌ಗೆ ತೊಂದರೆ ತಂದುಕೊಂಡರೆ ಅದರಿಂದ ನಮ್ಮ ಪ್ರಗತಿ ಏನಾಗುತ್ತದೆ ಎನ್ನುವುದನ್ನು ಈ ಮಂತ್ರಿಮಂಡಲ ಯೋಚನೆ ಮಾಡಿದರೆ ಅದರಿಂದ ಒಳ್ಳೆಯದಾಗುತ್ತದೆ ಎಂದು ಇಷ್ಟರಮಟ್ಟಿಗೆ ಮಾತ್ರ ನಾನು ಹೇಳುತ್ತೇನೆ.

(ಶ್ರೀ ಎಚ್. ಸಿದ್ಧವೀರಪ್ಪ)

ಇನ್ನು ನೀವು ಸಾಧಿಸಿರುವುದು ಏನು ಎನ್ನುವುದನ್ನು ನೋಡೋಣ. 1967ನೇ ಇಸವಿಯಿಂದ ನಾನು ಈ ಸಭೆಯ ಸದಸ್ಯನಾದ ಲಾಗಾಯಿತು ಶ್ರೀಮಾನ್ ನಿಜಲಿಂಗಪ್ಪನವರಿಗೆ ಒಂದು ಪ್ರಾರ್ಥನೆ ಸಲ್ಲಿಸುತ್ತಿದ್ದೆ. ಸ್ವಾಮಿ, ಈ ದೇಶದಲ್ಲಿ ಏನಾಗಿದೆ ಎಂದರೆ ಎಂ.ಎಲ್.ಎ. ಆದರೆ ಹೆಚ್ಚಾಗಿ ಸ್ವತಃ ಉಪಯೋಗಕ್ಕೆ ಅನುಕೂಲವಾಗುತ್ತದೆ ಮತ್ತು ಮಂತ್ರಿಯಾದರೆ ದೇಶದ ಖಜಾನೆ ಲೂಟಿ ಮಾಡುವುದಕ್ಕೆ ಬರುತ್ತದೆ ಎನ್ನುವ ವಿಷಯ ಜನಜನಿತವಾಗಿ, ಜನರಲ್ಲಿ ಒಂದು ಭಾವನೆ ಬರುವುದಕ್ಕೆ ಕಾರಣವಾಗಿದೆ. ಮಂತ್ರಿಯಾಗುವುದಕ್ಕೆ ಮುಂಚೆ ಏನು ಆಸ್ತಿಪಾಸ್ತಿಗಳಿದ್ದುವು, ಮಂತ್ರಿಯಾದ ಮೇಲೆ ಏನೇನಿದೆ ಎನ್ನುವುದನ್ನು ತಿಳಿದುಕೊಳ್ಳುವ ವ್ಯವಸ್ಥೆಯಾಗಬೇಕು ಎಂದು ಹೇಳಿದೆವು. ಇವರು ಶ್ರೀಮಾನ್ ಹನುಮಂತಯ್ಯನವರ ಮಂತ್ರಿಮಂಡಲದ ಮೇಲೆ ಅಪಾದನೆಗಳನ್ನು ಮಾಡಿದರು. ಇದೇ ವಿಧಾನ ಸೌಧವನ್ನು ಕಟ್ಟಿದಾಗ—ಮೊನ್ನೆ ಲಾಟರಿ ಸೌಧ ಎಂದು ಮಾಡಿದಿರಲ್ಲ—ಶ್ರೀಮಾನ್ ಹನುಮಂತಯ್ಯನವರು ದುಡ್ಡು ತಿಂದಿದ್ದಾರೆ ಎನ್ನುವ ಅಪಾದನೆಯನ್ನು ಮಾಡಿದರು. ವಿಚಾರಣೆ ಮಾಡಿಸಿರಿ, ಒಂದು ವೇಳೆ ಹನುಮಂತಯ್ಯನವರೇನಾದರೂ ದುಡ್ಡು ತಿಂದಿದ್ದಾರೆಂದು ಗೊತ್ತಾದರೆ ಅವರಿಗೆ ಶಿಕ್ಷೆ ವಿಧಿಸಬೇಕಾದ್ದು ನಿಜ ಎನ್ನತಕ್ಕ ವಿಚಾರವನ್ನು ಹೇಳಿದೆವು. ಈ ವಿಚಾರವನ್ನು ಮುಂದೆ ತೆಗೆದುಕೊಂಡು ದುರ್ದೈವದಿಂದಲೋ ಏನೋ ನಾವೂ ಸಹ ಆ ಮಂತ್ರಿ ಮಂಡಲದಲ್ಲಿದ್ದು ಕೆಲಸವನ್ನು ಮಾಡಿದ್ದರಿಂದ, ಮುಂದೆ ಯಾರೇ ಬರಲಿ ಅಪಾದನೆಗಳು ಯಾರ ಮೇಲೂ ಇರಬಾರದು, ನಾವು ಸಾಯುವುದಕ್ಕೆ ಮುಂಚೆ ವಿಚಾರಣೆ ಮಾಡಿಸಿಕೊಳ್ಳೋಣ, ಬಹಳ ದಿವಸ ಚಿರಂಜೀವಿಗಳಾಗಿ ಇರುವ ಹಾಗಿಲ್ಲ, ಎಲ್ಲರಿಗೂ ವಿಚಾರಣೆಯಾಗಿ ಸಾರ್ವತ್ರಿಕವಾಗಿ ಇಷ್ಟು ಜನ ಮಂತ್ರಿಗಳು ಆಗಿ ಹೋದರು, ಯಾರ ಮೇಲೂ ಲಂಚ ತಿಂದಿದ್ದಾರೆ, ದುಡ್ಡು ತಿಂದಿದ್ದಾರೆ ಎನ್ನುವ ವಿಚಾರದಲ್ಲಿ ಅನುಮಾನವಿಲ್ಲದೆ ಇರಲಿ ಎಂದು ಅಂಥ ಸಂದರ್ಭಗಳಲ್ಲಿ ವಿಚಾರಣೆ ಮಾಡುವುದಕ್ಕೆ ಅವಕಾಶವಾಗುವಂತೆ ಒಂದು ಕಾನೂನು ಮಾಡೋಣ, ಅದರ ಪ್ರಕಾರ ಯಾರ ಮೇಲಾದರೂ ಅಪಾದನೆಗಳಿದ್ದರೆ ಅವರ ಮೇಲೆ ವಿಚಾರಣೆ ಮಾಡಿ, ತಪ್ಪಿತಸ್ಥರಿದ್ದರೆ ಸರಿಯಾದ ಶಿಕ್ಷೆ ಕೊಡಬಹುದು, ಮತ್ತು ನಿಷ್ಕಾರಣವಾಗಿ ಯಾರಾದರೂ ಅಪಾದನೆ ಮಾಡಿದ್ದರೆ ಅಂಥವರ ಮೇಲೂ ಶಿಕ್ಷೆಯನ್ನು ವಿಧಿಸಬಹುದು ಎನ್ನುವ ವಿಚಾರವನ್ನು ಪದೇ ಪದೇ ಹೇಳುತ್ತ ಬಂದೆವು. ಶ್ರೀಮಾನ್ ಶಿವಪ್ಪನವರು ಆವಾಗ ಒಂದು ನಿರ್ಣಯವನ್ನು ಸಹ ತಂದರು. ರಾಜ್ಯಪಾಲರ ಭಾಷಣದ ವಿಚಾರದಲ್ಲಿ ಒಂದು ತಿದ್ದುಪಡಿಯನ್ನು ಸೂಚಿಸುತ್ತ ಹೀಗೆ ಹೇಳಿದ್ದಾರೆ. ಇದು 16-3-1967ರ ಪ್ರೊಸೀಡಿಂಗ್ಸ್‌ನಲ್ಲಿರತಕ್ಕ ವಿಚಾರ.

The following words shall be added an the end :

"About instituting immediate enquiries to assess the ill-gotten wealth of Ministers, ex-Ministers and public men holding office since 1947."

ಅದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು ಜವಾಬು ಕೊಟ್ಟರು. ಅವರು ಜವಾಬು ಕೊಟ್ಟ ವೈಖರಿಯನ್ನು ನೋಡಿದರೆ ಪರವಾ ಇಲ್ಲ, ನಮ್ಮನ್ನು ಋಣಮುಕ್ತರನ್ನಾಗಿ ಮಾಡುತ್ತಾರೆ, ಈ ವಿಚಾರದಲ್ಲಿ ಮುಂದುವರಿಯುತ್ತಾರೆ ಎಂದು ನಾನಾದರೂ ತಿಳಿದಿದ್ದೆ. ಅವರು ಏನು ಹೇಳುತ್ತಾರೆಂದರೆ ಅದನ್ನು ಕೂಡ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಎಷ್ಟರಮಟ್ಟಿಗೆ ಜನಗಳನ್ನು ಮೋಸ ಮಾಡುತ್ತಾ ಬಂದರು ಎನ್ನುವುದು ಇದರಿಂದ ಬಹಳ ಸ್ಪಷ್ಟವಾಗಿ ನಮಗೆ ಕಾಣುತ್ತದೆ. ನಾನು ಎಲ್ಲರಿಗೂ ನೋಟೀಸ್ ಕೊಡುತ್ತೇನೆ, ನೋಟೀಸ್ ಕೊಟ್ಟು ಎಲ್ಲರನ್ನೂ ಕರೆಸುತ್ತೇನೆ, ಕೇಳುತ್ತೇನೆ, ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ ಎನ್ನುವುದನ್ನು 17-4-1968ರಲ್ಲಿ ಅವರು ಹೇಳಿದರು. ಅವರು ಹಾಗೆ ಹೇಳಿದ ಮೇಲೆ ನಾನು ಕೇಳಿದೆ ಮಾರಲ್ ಆಬ್ಲಿಗೇಷನ್ ಇದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಮನುಷ್ಯನಿಗೆ ಮಾರಲ್ ಆಬ್ಲಿಗೇಷನ್ ಇರಬೇಕಾದ್ದು ಒಳ್ಳೆಯದು. ಇಲ್ಲದೆ ಇದ್ದರೆ ಆಗುವುದಿಲ್ಲ. ಶ್ರೀಮಾನ್ ಶಿವಪ್ಪನವರು ಹೇಳಿದಂತೆ ಯಾರು ವಿವರಗಳನ್ನು ಕೊಡದೆ ಇದ್ದರೆ ಏನು ಮಾಡುತ್ತೀರಿ? ವಾಟ್ ಈಸ್ ದಿ ಲೀಗಲ್ ಸ್ಯಾಂಕ್ಷನ್? ತಾವು ಇನ್ನು ಸ್ವಲ್ಪ ದಿವಸ ಇರುತ್ತೀರಿ, ಆಮೇಲೆ ಹೊರಟು ಹೋಗುತ್ತೀರಿ. ಮುಂದೆ ಬರತಕ್ಕಂಥ ಮುಖ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ? ಈ ಬಗ್ಗೆ ಏನಾದರೂ ಗವರ್ನ್‌ಮೆಂಟ್ ಆರ್ಡರ್ ಮಾಡಿದ್ದೀರಾ? 75 ಜನರಿಗೆ ನೋಟೀಸ್ ಕೊಡಲಾಗಿದೆ ಎಂದು ಹೇಳಿದಿರಿ. ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ? ನನಗೂ ಸಹ ನೋಟೀಸ್ ಕಳಿಸಿದ್ದೀರಿ.

ನಾನು ಈಗಲೂ ಕೊಡುವುದಕ್ಕೆ ತಯಾರಿದ್ದೇನೆ. ನನ್ನದು ಕೊಡುತ್ತೇನೆ. ಬೇರೆಯವರು ಏನೋ ಒಂದು ನೆಪದಲ್ಲಿ ಸುಮ್ಮನೆ ಇರುತ್ತಾರೆ. ನಿಮ್ಮ ಮಂತ್ರಿಗಳಿಗೆ ಯಾವ ಆಧಾರದ ಮೇಲೆ ಕೇಳು ತ್ತೀರಿ ? ಅವರು ಯಾವ ಆಧಾರದ ಮೇಲೆ ಕೊಡುತ್ತಾರೆ ಎಂದು ನಾನು ಕೇಳಿದ್ದಕ್ಕೆ ಆಗ ಗೃಹ ಮಂತ್ರಿಗಳಾಗಿದ್ದವರು ನೀವು ಯಾವ ಆಧಾರದ ಮೇಲೆ ಕೊಡುತ್ತೀರೋ ಅದೇ ರೀತಿ ನಾವೂ ಕೊಡುತ್ತೇವೆ ಎಂದು ಹೇಳಿದರು. ಆಗ ನಾನು ಕೇಳಿದೆ ಮುಂದೆ ಬರತಕ್ಕ ಮುಖ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಕೇಳಬೇಕು ! ಸುಮ್ಮನೆ ನಮಗೆ ಆಕಾಶಲಿಂಗ ತೋರಿಸುತ್ತೀರಾ ! ಎಂದು ಅದಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು ನಿಜಲಿಂಗವನ್ನೇ ತೋರಿಸುತ್ತೇನೆ. ಶ್ರೀ ಸಿದ್ದವೀರಪ್ಪ ನವರು ಹೇಳಿದ ಮಾತು ನ್ಯಾಯವಾಗಿದೆ. ನನ್ನದು ಕೊಡುತ್ತೇನೆ ಎಂದು ಅವರು ಹೇಳಿದ್ದು ಬಹಳ ಸಂತೋಷ. ಕಮಿಷನ್ ನೇಮಕ ಮಾಡಬೇಕಾದರೆ ಏನು ಅಂಶಗಳಿವೆ ಎಂಬುದನ್ನು ತಿಳಿದು ಕೊಳ್ಳಬೇಕು. ಈ ವಿಚಾರದಲ್ಲಿ ಮುಂದೆ ಬರತಕ್ಕಂಥ ಮುಖ್ಯ ಮಂತ್ರಿಗಳಿಗೂ ಬೈಂಡಿಂಗ್ ಆಗಿರುತ್ತದೆ, ಇದರಲ್ಲಿ ಏನೂ ವ್ಯತ್ಯಾಸವಿಲ್ಲ. ಆದ್ದರಿಂದ ಈ ನಿರ್ಣಯ ತೆಗೆದುಕೊಳ್ಳುವುದಕ್ಕಾಗುವು ದಿಲ್ಲ. ಮುಂದೆ ಏನು ಅಂಶಗಳು ಬರುತ್ತವೆಯೋ ಅದರ ಆಧಾರದ ಮೇಲೆ ಕಮಿಷನ್ ನೇಮಕ ಮಾಡುವುದು ಅಥವಾ ಬಿಲ್ ತರುವುದು ಯೋಚನೆ ಮಾಡಬೇಕಾಗುತ್ತದೆ. ಇದು ಅವಸರವಾಗಿ ಹೇಳುವ ಮಾತಲ್ಲ. ಆಲೋಚನೆ ಮಾಡತಕ್ಕ ವಿಷಯ ಎಂದು ಹೇಳಿದರು. ಆ ಮೇಲೆ ಇದು ಪುನಃ 3-9-1968 ರಲ್ಲಿ ಈ ಸಭೆಯ ಮುಂದೆ ಬಂದಾಗ್ಗೆ ಶ್ರೀ ಶಿವಪ್ಪನವರು ಈ ರೀತಿ ಕೇಳಿದರು :

4-00 P. M.

"ಈ ವಿವರಗಳ ಆಧಾರದ ಮೇಲೆ ಇವೊತ್ತು ಈ ಶಾಸನ ಸಭೆಯಲ್ಲಿ ಮಂತ್ರಿಗಳಾಗಿ ಆರೂಢರಾಗಿರುವವರ ಚರಿತ್ರೆಯನ್ನು ದೇಶಕ್ಕೆ ಹೇಳಬೇಕು. ಶ್ರೀಮಾನ್ ನಿಜಲಿಂಗಪ್ಪ ನವರು ಬರೀ ಮಾತಿನಲ್ಲಿ ಹೇಳುತ್ತಿದ್ದರು. ಈಗಿನ ಮಾನ್ಯ ಮುಖ್ಯ ಮಂತ್ರಿಗಳಾದರೂ ಅವರು ಹೇಳಿರುವಂತೆ ಎಲ್ಲ ಮಂತ್ರಿಗಳ ಆಸ್ತಿಪಾಸ್ತಿಗಳ ವಿವರವನ್ನು ಸಭೆಯ ಮುಂದೆ ಮಂಡಿಸುತ್ತಾರೆ, ನಾವು ಇಲ್ಲಿಗೆ ಬರುವ ವೇಳೆಗೆ ಅದು ಸಭೆಯ ಮುಂದೆ ಇರುತ್ತದೆ ಎಂದು ಭಾವಿಸಿದ್ದೆ. ಅದು ಇನ್ನೂ ಬರಲಿಲ್ಲ. ಇವರಾದರೂ ಕೂಡ ಈ ಶಾಸನ ಸಭೆ ಮುಗಿಯುವುದರೊಳಗಾಗಿ ಮಂತ್ರಿ ಮಂಡಲದಲ್ಲಿರುವವರ ಎಲ್ಲರ ಆಸ್ತಿಪಾಸ್ತಿ 1947ನೇ ಇಸವಿಯಲ್ಲಿ ಏನಿತ್ತು, ಇವತ್ತು ಏನಿದೆ ಎನ್ನುವ ವಿವರಗಳನ್ನು ಕೊಟ್ಟರೆ ದೇಶ ಇವರ ಮಾತನ್ನು ನಂಬುತ್ತದೆ, ಎಂದು ಹೇಳುತ್ತೇನೆ."

ಇದಕ್ಕೆ ಉತ್ತರ ಈ ರೀತಿ ಇದೆ :

"ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೊಂದು ಪ್ರಶ್ನೆಯನ್ನು ಎತ್ತಿದ್ದಾರೆ. ಮೊದಲೇ ಕೇಳಿದ್ದರೆ ಅದಕ್ಕೂ ಉತ್ತರ ಕೊಡಬಹು ದಾಗಿತ್ತು. ಪ್ರತಿಯೊಂದು ಮಾತಿಗೂ ಒರೆಗಲ್ಲನ್ನು ಹಚ್ಚುವುದರಲ್ಲಿ ಅರ್ಥವಿಲ್ಲ. ಆಸ್ತಿ ಪಾಸ್ತಿ ವಿವರಗಳ ವಿಚಾರದಲ್ಲಿ ಮುಚ್ಚುಮರೆ ಮಾಡಬೇಕು ಎನ್ನುವ ಅಭಿಪ್ರಾಯವಿಲ್ಲ. ಮುಂದೆ ಇದ್ದ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಎಲ್ಲರಿಗೂ ಪತ್ರಗಳನ್ನು ಬರೆ ದಿದ್ದಾರೆ. ಕೆಲವರು ವಿವರಗಳನ್ನು ಸಲ್ಲಿಸಿದ್ದಾರೆ. ಕೆಲವರು ಸಲ್ಲಿಸಿರಲಿಲ್ಲ. ನಾನು ಬಂದ ಮೇಲೆ ಯಾರು ಯಾರು ವಿವರಗಳನ್ನು ಸಲ್ಲಿಸಿರಲಿಲ್ಲ ಅವರಿಗೆಲ್ಲ ರಿಮೈಂಡರ್ ಕಳಿಸಿದ್ದೇನೆ. ನಮ್ಮ ಮಂತ್ರಿಮಂಡಲದಲ್ಲಿ ಯಾರು ಯಾರು ಮಂತ್ರಿಗಳಾಗಿದ್ದಾರೆ ಅವರಿಗೆಲ್ಲ ಆಸ್ತಿಪಾಸ್ತಿಗಳ ಬಗ್ಗೆ ಡಿಕ್ಲರೇಷನ್ ಕೊಡಬೇಕು, ಸ್ಟೇಟ್‌ಮೆಂಟ್ ಕೊಡ ಬೇಕು ಎಂದು ಕೇಳಿದ್ದೇನೆ. ಅವರು ಕೊಟ್ಟಿದ್ದಾರೆ. ಕೆಲವರು ನಿಮಗೆ ಈ ರೀತಿ ಕೇಳುವುದಕ್ಕೆ ಏನು ಅಧಿಕಾರವಿದೆ, ಏಕೆ ಕೇಳುತ್ತೀರಿ ಎಂದು ಬರೆದಿದ್ದಾರೆ. ಸಭೆಯ ಟೇಬಲ್ ಮೇಲೆ ಬೇಕಾದರೆ ಎಲ್ಲ ಪೇಪರುಗಳನ್ನೂ ಹರಡುತ್ತೇನೆ."

ತದನಂತರ 1968 ಸೆಪ್ಟೆಂಬರ್ 17 ರಲ್ಲಿ ಈ ವಿಷಯ ಮತ್ತೆ ಪ್ರಸ್ತಾಪಕ್ಕೆ ಬಂತು. ಆವಾಗ ನಾನು ಕೇಳಿದೆ :

"Sri H. SIDDAVEERAPPA.—......I want to make it clear that I am not opposing this Bill. The Leader of the House has issued a notice to Ministers and Ex-Ministers requesting them

(SRI H. SIDDAVEERAPPA)

to make disclosures of their assets. Some have given their statements. I would like him not only to place it on the Table of the House but publish it. As a first measure of instalment I would request him to see this is made public property. I would also like to know who have refused and whether they have assigned any reasons for it. May be, there are valid reasons why they have refused to make any disclosures. I am also making another request in this regard. The names of a large number of people who have amassed lakhs and lakhs of rupees do not find a place. If he wants some names, we are prepared to give. Let us not stop at that. Let the people know what it is they were called upon to disclose and what is they have disclosed. I personally feel that in the interest of public morality this matter should be examined by the Chief Minister and if he agrees, he might take the earliest opportunity to do it."

ಇದು ಆದ ಮೇಲೆ ಪುನಃ ಈ ವಿಷಯ 19-9-1968ರಂದು ಸಭೆಯ ಮುಂದೆ ಬಂತು. ಆಗ್ಗೆ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಈ ರೀತಿ ಹೇಳಿದ್ದಾರೆ :

"ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಈ ಸಭೆಯಲ್ಲ ಮಾನ್ಯ ಸದಸ್ಯರು ನಮ್ಮ ಕೆಲವು ಮಿತ್ರರಿಂದ ಅವರ ಅಸೆಟ್ಸ್ ಮತ್ತು ಲೈಯಬಿಲಿಟೀಸ್ ಸ್ಟೇಟ್‌ಮೆಂಟನ್ನು ನನಗಿಂತಲೂ ಪೂರ್ವದಲ್ಲೂ ಇದ್ದಂತಹ ಮುಖ್ಯ ಮಂತ್ರಿಗಳು ಕೇಳಬೇಕೆಂದು ಹೇಳಿದರು. ಆ ರೀತಿ ಏನೊಂದು ನಿರ್ಣಯವಾಗಿತ್ತು ಅದರ ಪ್ರಕಾರ ಮಾಜಿ ಮಂತ್ರಿಗಳು ಮತ್ತು ಯಾವುದೇ ಅಧಿಕಾರದಲ್ಲಿ 1947ರಿಂದ ಈಚೆಗೆ ಇದ್ದವರು ಎಲ್ಲರಿಂದ ಸ್ಟೇಟ್‌ಮೆಂಟ್ ಆಫ್ ಅಸೆಟ್ಸ್ ಆಂಡ್ ಲೈಯಬಲಿಟೀಜ ಕೇಳಿದ್ದೆವು. ಆ ಪ್ರಕಾರ, ಯಾರು ಒಪ್ಪಿಸಿದ್ದಾರೆ, ಯಾರು ಇನ್ನೂ ವರೆಗೂ ಒಪ್ಪಿಸಿಲ್ಲ, ಯಾರು ಒಪ್ಪಿಸುವುದಕ್ಕೆ ನಿರಾಕರಿಸಿದ್ದಾರೆ ಎಂಬ ಒಂದು ಸ್ಟೇಟ್‌ಮೆಂಟನ್ನು ಈ ಸಭೆಯ ಮುಂದೆ ಇಡುತ್ತೇನೆ ಎಂದು ಹೇಳಿದ್ದೆ. ಸ್ಟೇಟ್‌ಮೆಂಟನ್ನು ತಯಾರು ಮಾಡಿದ್ದೇನೆ, ಅದನ್ನು ಸಭೆಯ ಮುಂದೆ ಇಟ್ಟಿದ್ದೇನೆ."

ಆಸ್ತಿಪಾಸ್ತಿ ಲಿಸ್ಟ್ ಸಭೆಯ ಮುಂದೆ ಇಟ್ಟಿದ್ದಾರೆ, ಇದನ್ನು ಹೆಚ್ಚಾಗಿ ಪತ್ತೆ ಹಚ್ಚುವುದಕ್ಕೆ ಕಷ್ಟವಾಯಿತು. ಏನು ಲಿಸ್ಟ್ ಇಟ್ಟಿದ್ದಾರೆ ನೋಡೋಣ ಅಂದರೆ ಯಾರು ಯಾರಿಗೆ ನೋಟೀಸ್ ಕೊಟ್ಟಿತ್ತು ಅವರ ಹೆಸರುಗಳು, ಎಷ್ಟು ಜನ ಆಸ್ತಿ ಪಾಸ್ತಿ ವಿವರ ಡಿಸ್‌ಕ್ಲೋಜ್ ಮಾಡಿದ್ದಾರೆ ಅವರ ಹೆಸರುಗಳು, ಯಾರು ಡಿಸ್‌ಕ್ಲೋಜ್ ಮಾಡಿಲ್ಲ ಅವರ ಹೆಸರುಗಳು, ಅಷ್ಟನ್ನು ಮಾತ್ರ ಈ ಲಿಸ್ಟ್‌ನಲ್ಲಿ ಕೊಟ್ಟಿದ್ದಾರೆ. ಯಾರ ಯಾರದು ಆಸ್ತಿಪಾಸ್ತಿ ಎಷ್ಟೆಷ್ಟಿದೆ ಇದರ ವಿವರ ಕೇಳಿದ್ದು. ಆದರೆ ಸಭೆಯ ಮುಂದೆ ಲಿಸ್ಟ್ ಇಟ್ಟಿದ್ದರಲ್ಲಿ ಬರೀ ಅವರ ಹೆಸರುಗಳು ಮಾತ್ರ ಇವೆ. ಆಸ್ತಿಪಾಸ್ತಿ ವಿವರದ ಬಗ್ಗೆ ಜವಾಬು ಇಲ್ಲ. ಇದು 24-2-1969ರಂದು ಮತ್ತೆ ಬಂತು. On 24th February 1969 the Hon. Speaker says like this in answer to Sri S. Sivappa :

"Mr. SPEAKER.—That information is already given. The statement is placed on the Table of the House on 19th September 1968. Therefore that question does not arise.

Sri S. SIVAPPA.—Was it not to a fact that the House required the Chief Minister to place the statement before the

House ? Will the Government think of the feasibility of placing on the Table of the House the statements made by some of the Ministers and ex-Ministers regarding their assets and liabilities ?

Sri VEERENDRA PATIL.—I do not propose to do so.

Sri H. N. NANJE GOWDA.—I want to know whether Sri K. Hanumanthaiya threw a challenge to the Government whether the former Chief Minister and the present Chief Minister were prepared to face a commission of enquiry.

* * * *

Sri H. SIDDAVEERAPPA.—The Hon. Chief Ministers was pleased to state that he is not prepared to place the statement on the Table. In that case may I bring to his notice that the] revious Chief Minister had stated that after collecting all the materials, he would use the entire force of the machinery to see that if there are any allegations, enquiries will be made ? Is the Hon. Chief Minister aware that the whole purpose of collecting information was to have it as a nucleus for further probe into the matter ?

Sri VEERENDRA PATIL.—I am not aware whether my predecessor has held out any assurance to this House. I am not aware that statement he has made because I do not have copy of that statem nt before me. It is very difficult for me to say whether he had made such a statement. The Hon. member stated t' at the very purpose of calling the information would be defeated. I may submit humbly that that purpose has not been fulfilled because some of the members who are the members of this House also have questioned the propriety, legal sanction, constitutionality and all those things of the Chief Minister for having asked for the statement. So I have decided to drop the whole issue. I do not wish to pursue this matter further.

Sri H. SIDDAVEERAPPA.—If that is the stand the Hon. Chief Minister has taken, may I request him to return all the copies given by the Ex-Ministers because no purpose will be served in keeping them in his Office. I request him to see that whatever replies are given, are returned."

* * * *

ಇನ್‌ಕ್ವಾಯರಿ ಕಮಿಷನ್ ಬರುವುದಿಲ್ಲ ಯಾವುದೂ ಆಗುವುದಿಲ್ಲ ಎಂದು ಅವರು ಹೇಳಿದ ಮೇಲೆ ಶ್ರೀ ಶಿವಪ್ಪನವರು ಹೀಗೆ ಕೇಳುತ್ತಾರೆ:

"Sri S. SIVAPPA.—May I know whether the Government is serious about it or they want to stage-manage the whole affair? Why did they enact this drama? How do they implement their intention?"

ಇದು ಏನು ತೋರಿಸುತ್ತದೆ ಅಂದರೆ ಇವರು ಒಂದು ಡ್ರಾಮಾನೂ ಆಡಿದರು. ಡ್ರಾಮ ಆಡುವ ಶಕ್ತಿ ಇವರಿಗೆ ಇದೆ. 1947 ರಿಂದ ಈಚೆಗೆ ಯಾರು ಯಾರು ಅಧಿಕಾರದಲ್ಲಿ ಇದ್ದರೋ ಅಂಥವರೆಲ್ಲರ ಆಸ್ತಿ ಪಾಸ್ತಿ ವಿವರ ಬಯಲಿಗೆ ಹಾಕಬೇಕು ಎಂದು ಕೇಳಿದ್ದಕ್ಕೆ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ನಿಮ್ಮಲ್ಲಿ ನಂಬಿಕೆ ಹೇಗೆ ಬರಬೇಕು? ನಿಮ್ಮಲ್ಲಿ ನಂಬಿಕೆ ಇಟ್ಟದ್ದು ಸುಳ್ಳು ಆಯಿತು. ಇದು ನಿಮ್ಮ ಅದಕ್ಷತೆಯನ್ನು ತೋರಿಸುತ್ತದೆ. ಅಲ್ಲದೆ ಕರ್ತವ್ಯ ಲೋಪವಾಗಿದೆ. ಎನ್‌ಕ್ವಾಯರಿ ಕಮಿಷನ್ ನೇಮಕ ಮಾಡಿದರೆ ಎಲ್ಲವೂ ಬಯಲಿಗೆ ಬಂದು ಬಿಡುತ್ತದೆ, ಬಚ್ಚಿಟ್ಟರೆ ಯಾವುದೂ ಗೊತ್ತಾಗುವುದಿಲ್ಲ ಎಂದು ಹೀಗೆ ಮಾಡಿದ್ದೀರಿ. ಆದರೆ ನಾವು ಇದನ್ನು ಬಿಡುವುದಿಲ್ಲ. ನೀವು ಭೂಮಿ ಹೊಕ್ಕರೂ ಬಿಡುವುದಿಲ್ಲ. ಆಕಾಶಕ್ಕೆ ಹಾರಿದರೂ ಬಿಡುವುದಿಲ್ಲ. ಚಂದ್ರನ ಹತ್ತಿರ ಹೋದರೂ ಬಿಡುವುದಿಲ್ಲ. ದುರ್ಯೋಧನನು ಜಲದಲ್ಲಿ ಹೊಕ್ಕು ಕುಳಿತುಕೊಂಡರೂ ಅವನನ್ನು ಬಿಡದೆ ಹೊರಗೆ ತೆಗೆದು ಹೇಗೆ ತೊಡೆ ಮುರಿಸಿಕೊಂಡನೋ ಹಾಗೇ ಇದನ್ನು ಹೊರಗೆ ತೆಗೆಯುತ್ತೇವೆ. ಈಗಲಾದರೂ ಮನಸ್ಸು ಮಾಡಿ ಕಮಿಷನ್ ಆಫ್ ಎನ್‌ಕ್ವಾಯರಿ ನೇಮಕ ಮಾಡಿ, ಅದನ್ನು ಮಾಡುವುದಕ್ಕೆ ಕಾನೂನು ತೆಗೆದುಕೊಂಡು ಬನ್ನಿ ಎಂದು ನಾನು ಹೇಳುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರು ಸೊಗಸಾದ ಆರು ಚಾರ್ಜುಗಳನ್ನು ನಿಮ್ಮ ಮೇಲೆ ಮಾಡಿದರು. ಅವು ಸ್ಪೆಸಿಫಿಕ್ ಆದ ಚಾರ್ಜುಗಳಿವೆ. ಅದರಲ್ಲಿಯ ಶರಾವತಿ ವಿಚಾರದಲ್ಲಿ ಮೊದಲನೆಯ ಒಂದು ಚಾರ್ಜು ಸಾಕು. ಅರ್ಬಿಟ್ರೇಷನ್ ಕ್ಲಾಜ ಬಗ್ಗೆ ಆಜ್ಞೆ ಹೊರಡಿಸಿದ್ದು ಶ್ರೀಮಾನ್ ಚನ್ನಬಸಪ್ಪನವರು ಇದ್ದಾಗೋ, ಅಥವಾ ಅವರು ಹೊರಟು ಹೋದ ಮೇಲೆ ಆಯಿತೋ ಎಂದು ಕೇಳಿದ್ದಕ್ಕೆ ಅದಕ್ಕೆ ಕೊನೆಗೂ ಜವಾಬು ಕೊಡಲಿಲ್ಲ. ಇದು ಏನು ತೋರಿಸುತ್ತದೆ ಅಂದರೆ ಮೂರು ಒಲೆ ಗುಂಡು ಇಟ್ಟುಕೊಂಡು ಇವರು ಆಡಳಿತ ಮಾಡುವುದಕ್ಕೆ ಹೊರಟಿದ್ದಾರೆ. ಮೊದಲನೆಯದು ಜಾತಿ, ಎರಡನೇಯದು ದುಡ್ಡು, ಮೂರನೇಯದು ಹೆಂಡ ಎನ್ನುವ ಈ ಮೂರು ಒಲೆ ಗುಂಡು ಭದ್ರವಾಗಿ ಹಿಡಿದುಕೊಂಡು ಆಡಳಿತ ಮಾಡಲು ಹೊರಟಿದ್ದಾರೆ. ಪತಕ್ಕೋಸ್ಕರ ಎಷ್ಟು ವರ್ಷ ಯಾರನ್ನಾದರೂ ಹಿಡಿದುಕೊಂಡು ಮುಖ್ಯ ಮಂತ್ರಿಗಳು ಹೇಗೆ ಇರುತ್ತಾರೆ? ನೀವು ಕೆಲವರನ್ನು ಪಡೆದಿದ್ದೀರಿ. ನಿಮ್ಮ ಏಜೆಂಟ್ಸು ಇದ್ದಾರೆ. ಏಜೆಂಟ್ಸನ್ನು ಹೇಗೆ ಹಿಡಿದಿದ್ದೀರಿ ಅಂದರೆ ಏನಪ್ಪಾ ಜಮೀನು ಪಡೆಯಲು ಅರ್ಜಿ ಹಾಕಿದ್ದಿಯೇನು? ಜಮೀನಿಗೆ ಅರ್ಜಿ ಹಾಕು, ಕಂದಾಯ ಮಂತ್ರಿಗಳಿಗೆ ಹೇಳಿ ನಿನಗೆ ಜಮೀನು ಕೊಡಿಸುತ್ತೇವೆ ಎಂದು ಹೇಳುತ್ತಾರೆ. ದುಡ್ಡನ್ನೆ ಪ್ರಧಾನವಾಗಿ ಇಟ್ಟುಕೊಂಡು ದುಡ್ಡಿನ ಪ್ರಭಾವವನ್ನು ಸದಸ್ಯರ ಮೇಲೆ ಬೀರಿ ಕಾರ್ಯಭಾರ ಮಾಡುತ್ತಿದ್ದೀರಿ.

ಈವೊತ್ತು ನೀವು ಮುಖ್ಯಮಂತ್ರಿಗಳಾಗಿರಬಹುದು. ಈ ರೀತಿಯಾದ ಆಡಳಿತ ಎಷ್ಟು ದಿವಸ ಮಾಡುವುದಕ್ಕೆ ಸಾಧ್ಯ? ನೀವು ದುಡ್ಡು ಕೊಟ್ಟು ಜಾತೀಯ ಪ್ರಾಮುಖ್ಯತೆ ಬಿಟ್ಟುಕೊಟ್ಟಿಲ್ಲ. ಬಿಟ್ಟುಕೊಟ್ಟಿಲ್ಲ. ನಾನು ಯಾವ ಮೆಂಬರ್ ಮೇಲೂ ಹೇಳುತ್ತಾ ಇಲ್ಲ. ಎಲ್ಲಾ ಪ್ರಭಾವವನ್ನೂ ಸದಸ್ಯರ ಮೇಲೆ ಬೀರಿ ಈ ರೀತಿ ಮಾಡುತ್ತಾ ಇದ್ದೀರಿ. ಅವರ ಪರವಾಗಿರುವವರು ಒಬ್ಬರು ದೇಶದ ಆಸ್ತಿಯನ್ನು ಹೊಡೆದುಕೊಂಡು ತಿನ್ನುತ್ತಿದ್ದಾರೆಂದು ಹೇಳುತ್ತಿದ್ದಾರೆ. ಹೀಗೆ ಮಾಡಿದರೆ ಇದು ಸರಿಹೋಗುತ್ತದೆಯೇ? ಈ ರೀತಿ ಮಾಡಿ ನಿಮ್ಮ ಕೈಯಲ್ಲಿ ಅವರನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದು ಎಷ್ಟು ದಿವಸದವರೆಗೆ ನಡೆಯುತ್ತದೆ? ಈ ರೀತಿ ಆಡಳಿತ 4 ದಿವಸ ನಡೆದು ಅನಂತರ ಬಿಟ್ಟು ಹೋದಮೇಲೆ ಈ ಆಡಳಿತ ಸರಿಹೋಗುತ್ತದೆ ಎಂದರೆ ಪರವಾಯಿಲ್ಲ.

ಇನ್ನು ಸಹಕಾರಸಂಘಗಳಲ್ಲಿ ಯಾವರೀತಿ ಮಾಡಿದ್ದೀರಿ ಎಂದರೆ ಅಲ್ಲೂ ಕೂಡ ಜಾತೀಯ ಪ್ರಾಮುಖ್ಯತೆಯನ್ನು ಬಿಟ್ಟುಕೊಟ್ಟಿಲ್ಲ. ಹಾಳು ಮಾಡಿದ್ದೀರಿ. ಹೀಗೆ ಮಾಡಿದರೆ ಕೊನೆಯವರೆಗೂ ಇದು ಬರುತ್ತದೆ. ದುರ್ದೈವ ವಶಾತ್ ಶ್ರೀಮಾನ್ ವೀರೇಂದ್ರಪಾಟೀಲ್‌ರೇ ಈ ಒಂದು ಜನ್ಮವನ್ನು ಹುಟ್ಟಿಸಿದ್ದಾರೆ ಎಂದು ಕೊನೆಯವರೆಗೂ ಬರುತ್ತದೆ. ಈ ದೇಶದಲ್ಲಿ ಜನ ಏನು ತಿಳಿದುಕೊಂಡಿದ್ದಾರೆ ಎಂದರೆ ಇದು ಎಲ್ಲಾ ಕಲ್ಲು ಕಟ್ಟಿದ ಲಿಂಗಾಯಿತರ ರಾಜ್ಯ ಎಂದು ಹರಡುತ್ತಿದ್ದಾರೆ. ಇದರಲ್ಲಿ ಪ್ರಾಮಾಣಿಕರಿಲ್ಲ. ಈವೊತ್ತು ಈ ಲಿಂಗಾಯಿತರಲ್ಲಿ ಕಂಡು ಬಂದಿರತಕ್ಕಂಥ ಕೆಟ್ಟ ಹೆಸರಿನಿಂದ ಈ ಸಮಾಜಕ್ಕೆ ಬಂದಿರತಕ್ಕಂಥ ಕೆಟ್ಟ ಹೆಸರು ಇನ್ನಾವ ಸಮಾಜಕ್ಕೂ ಬಂದಿಲ್ಲ. ಇದು ನಿಜವಾದ ಮಾತು. ಇದರಲ್ಲಿ ಕೆಲವರು ಇರಬಹುದು. ಲಿಂಗಾಯಿತರ ಹೆಸರಿನಲ್ಲಿ ದೇಶದಲ್ಲಿ ಕೆಲವೇ ಜನ ದೇಶದ ಸಂಪತ್ತನ್ನು ಗುತ್ತಿಗೆಗೆ ತೆಗೆದುಕೊಂಡಿದ್ದಾರೆ. ಈ ರೀತಿ ಗುತ್ತಿಗೆಗೆ ತೆಗೆದುಕೊಂಡು ಈ

ಒಂದು ಆಸ್ತಿ ಮೇಲೆ ಮಾಡಿರತಕ್ಕಂಥ ಪ್ರಚೋದನೆಯಿಂದ ದೇಶದ ಎಲ್ಲಾ ಪಂಗಡಗಳಲ್ಲೂ ಈ ಸಮಾಜದ ಒಂದು ಕೆಟ್ಟ ಭಾವನೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಜಾತಿಯ ವಾದ ಹೇಳುವುದಕ್ಕೆ ತಯಾರಾಗಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಕೇಳುವ ಉದ್ದೇಶ ಲಿಂಗಾಯಿತರ ಹೆಸರಿಗೆ ಕೆಟ್ಟ ಹೆಸರು ತಂದಿದ್ದಾರೆ ಎನ್ನುವ ವಿಚಾರದ ಬಗ್ಗೆ ಒಂದೆರಡು ಉದಾಹರಣೆಗಳನ್ನು ಕೊಟ್ಟರೆ ನಾನೂ ಉತ್ತರ ಹೇಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಒಂದೇ ಜಾತಿಯ ಮಂತ್ರಿಗಳನ್ನು 12 ಜನರನ್ನು ಮಾಡಿರುವುದು ಜಾತೀಯತೆ ತೋರಿಸುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಯಾವ ಇಲಾಖೆಯಲ್ಲಿ ಏನು ಆರ್ಡರ್ ಮಾಡಿದ್ದೀರಿ ? ಒಂದೇ ಜಾತಿಯವರಿಗೆ ಮೊದಲು ಕೊಡಬೇಕು ಎಂದು ಏನು ಮಾಡಿದ್ದೀರಿ ಅದು ನನಗೂ ಗೊತ್ತಾಗಿದೆ. ಇದನ್ನು ತೋರಿಸಬೇಕಾದರೆ ಒಂದು ಎನ್‌ಕ್ವೈರಿ ಕಮಿಟಿ ಮಾಡಿ.

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಹೇಳಬೇಕಾದರೆ ಒಂದೆರಡು ಇಕ್ಸಾಂಪಲ್ಸ್ ಕೊಟ್ಟು ಹೇಳಿ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಹೇಳಬೇಕಾದರೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟು ಜನರನ್ನು ಇಟ್ಟಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಬೇರೆಯವರು ಹೇಳಿದಂಥ ಮಾತುಗಳನ್ನು ಹೇಳಬಹುದು. ಅದಕ್ಕಾಗಿ ನಂಬರ್ , 2, 3, 4, 5, ಈ ರೀತಿ ಕೊಟೇಷನ್ ಕೊಟ್ಟು, ಕಾಂಕ್ರೀಟ್ ಇನ್‌ಸ್ಟೆನ್ಸ್ ಕೊಟ್ಟು ಹೇಳಿದರೆ ಉತ್ತರ ಕೊಡುತ್ತೇನೆ. ಅದಲ್ಲದೆ ಲಿಂಗಾಯಿತರ ಹೆಸರಿನಲ್ಲಿ ಬೇರೆ ಒಬ್ಬರು ಹೊಡೆದುಕೊಂಡು ತಿನ್ನುತ್ತಿದ್ದಾರೆ ಎಂದರೆ ಕಾಂಕ್ರೀಟ್ ಇನ್‌ಸ್ಟೆನ್ಸ್ ಕೊಟ್ಟು ಹೇಳಲಿ. ನಾನೂ ಉತ್ತರ ಕೊಡಬಲ್ಲೆ. ಇವೆಲ್ಲವನ್ನೂ ವಿಚಾರ ಮಾಡಿ ಈ ಮಾನ್ಯಸಭೆಗೆ ತಿಳಿಸುವುದಕ್ಕೆ ಅನುಕೂಲ ವಾಗುತ್ತದೆ.

Sri S. R. BOMMAI.—Sir, I rise to a Point of Order. Under the Constitution, we are wedded to a secular State. Under the rules and regulations, can we discuss caste-wise and communal-wise problems in this House? In my opinion, we cannot mention names of the communities and discuss them, because the representatives of communities have no representation in this House—I mean the religious heads and social leaders are not at all elected on that basis. Therefore, no names of the caste can be mentioned.

Mr. CHAIRMAN.—Any charge of communal imbalances can be raised and the Chief Minister is equally within his powers to ask for illustrations and details so that the charge can be met. There is no Point of Order.

ಶ್ರೀ ಹೆಚ್. ಸಿದ್ದವೀರಪ್ಪ.—ನಾನು ಹೇಳಬೇಕಾದರೆ ನೊಂದ ಮನಸ್ಸಿನಿಂದ ಹೇಳುತ್ತೇನೆ. ಈ ಒಂದು ಸಂಸ್ಕೃತಿಯಿಂದ ನಾನೂ ಈ ಜನಾಂಗಕ್ಕೆ ಸೇರಿದವನಾಗಿರುವುದರಿಂದ ತಾವು ಇಂತಹ ಕೆಟ್ಟ ಹೆಸರು ತಂದರಲ್ಲಾ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇಷ್ಟೇ ಅಲ್ಲದೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರು ನಿಮ್ಮ ವಿಚಾರದಲ್ಲಿ 10-9-1969 ರಲ್ಲಿ ಚೆನ್ನಾಗಿ ಹೇಳಿದ್ದಾರೆ. ಅದು ಈ ರೀತಿ ಇದೆ :

> "The Chief Minister is an expert in side-tracking of issues, suppressing inconvenient facts, making make-believe statements, stage managing and making generous assurances"

ನನ್ನ ಹತ್ತಿರವೂ ಒಂದು ಕಾಗದ ಇದೆ. ಅದನ್ನೂ ನಿಮಗೆ ಕಳುಹಿಸುತ್ತೇನೆ. ಅದು ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು. ಈ ವಿಚಾರ ಚೆನ್ನಾಗಿ ತಿಳಿದುಕೊಂಡು ಬಿಡಿ. ಅದರಲ್ಲಿ ಏನು ಇದೆ ಎಂದರೆ ಇದರಲ್ಲಿ ಕೆಲವರಿಗೆ ಸೀನಿಯಾರಿಟಿ ಹಳೆಯ ಮೈಸೂರಿನ ಲಿಸ್ಟ್‌ನಲ್ಲಿ ಇದೆ. ಆದರೆ ಇದು ನಿಮ್ಮವರಿಗೇ ಅನುಕೂಲವಾಗಲಿ ಎಂದು ತಿಳಿದು ರೀಜನಲ್ ಸೀನಿಯಾರಿಟಿ ಲಿಸ್ಟ್ ಆಗಿ ಮಾಡುವುದಕ್ಕೆ

(ಶ್ರೀ ಎಚ್. ಸಿದ್ದವೀರಪ್ಪ)

ಹೊರಟಿದ್ದೀರಿ, ಈ ರೀಜನರ್‌ವೈಸ್ ಆಗಿ ಲಿಸ್ಟ್ ಮಾಡಿದರೆ ನಿಮ್ಮವರೇ ಬರಬಹುದು ; ಎನ್ನುವ ದೃಷ್ಟಿಯಿಂದ ಮಾಡುತ್ತಾ ಇದ್ದೀರಿ.

ಇನ್ನು ನೀವು ಅಧಿಕಾರಕ್ಕೆ ಬಂದಮೇಲೆ ಸರ್ಕಾರದ ಇಲಾಖೆಗಳಲ್ಲಿ ಯಾವ ಯಾವ ಜಾತಿಯುವರಿಗೆ ಪ್ರಾಮುಖ್ಯತೆ ಕೊಟ್ಟಿದ್ದೀರಿ ? ಇಂಡಸ್ಟ್ರಿಯಲ್ ಲೈಸೆನ್ಸ್‌ನ್ನು ಎಷ್ಟು ಜನಕ್ಕೆ ಕೊಟಿದ್ದೀರಿ, ಕೋಆಪರೇಟೀವ್ ಷುಗರ್ ಫ್ಯಾಕ್ಟರಿ ಮುಂತಾದವನ್ನು ಎಷ್ಟು ಜನಕ್ಕೆ ಕೊಟ್ಟಿದ್ದೀರಿ ? ಅದರಲ್ಲಿ ಯಾವ ಯಾವ ಜಾತಿಯವರಿಗೆ ಕೊಟ್ಟಿದ್ದೀರಿ. ಬ್ಲಾಕ್‌ಮಾರ್ಕೆಟ್ ದುಡ್ಡನ್ನು ನೀವು ಚಲಾವಣೆ ಮಾಡುವುದಕ್ಕೆ ಎಷ್ಟು ಜನರನ್ನು ಇಟ್ಟಿದ್ದೀರಿ ? ಎಲ್ಲವನ್ನೂ ಈ ಒಂದು ಜನಾಂಗಕ್ಕೇ ಮಾಡಿದ್ದಾರೆಂದು ಜನ ತಿಳಿದುಕೊಂಡಿದ್ದಾರೆ. ಲಿಂಗಾಯಿತರು ಎಂದರೆ ಎಲ್ಲರೂ ಒಂದೇ ಕಸಬು ಮಾಡುತ್ತಾ ಇಲ್ಲ. ಹೊಲ ಉಳುವವರೂ ಇದ್ದಾರೆ. 100ಕ್ಕೆ 80 ರಷ್ಟು ಜನ ಲಿಂಗಾಯಿತರು ಹೊಲ ಉಳುವವರು ಇದ್ದಾರೆ. ಅವರಿಗೆ ಯಾವ ವಿಧವಾದ ಸಹಾಯ ಮಾಡಿದ್ದೀರಿ ? ವ್ಯವಸಾಯಗಾರರಿಗೆ ರೈತರಿಗೆ ಮಾಡಿರತಕ್ಕಂಥ ಸೌಲಭ್ಯವಾದರೂ ಏನು? ಅವರಿಗೆ ಕೊಡತಕ್ಕಂಥ ಸಹಾಯದಲ್ಲಿ ಅವರ ಕೈಗೆ ಎಷ್ಟು ಸಿಕ್ಕುತ್ತದೆ ಎಂದು ಕಾಣುತ್ತಿದ್ದೇವೆ. ಇದರ ಮೇಲೆ ನಿಮಗೆ ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಬೇಕು ಎಂದರೆ ನನ್ನ ಹತ್ತಿರ ಇದೆ ಕೊಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.— ನಾನು ಹೇಳಿದ್ದು ಕಾಂಕ್ರೀಟ್ ಇನ್‌ಸ್ಟನ್ಸ್ ಹೇಳಿ ಮತ್ತು ಸ್ಪೆಸಿಫಿಕ್ ಇನ್‌ಸ್ಟನ್ಸ್ ಹೇಳಬೇಕು ಎಂದು. ಇಲ್ಲದೇಹೋದರೆ ಅದನ್ನು ಬರೆದು ಕಳುಹಿಸಿ. ಈ ಮಾನ್ಯ ಸಭೆಯಲ್ಲಿ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಈಗ ಹೇಳಿದ್ದೀರಾ ಒಂದೇ ಜಾತಿಯವರಿಗೆ ಸಾಲ ಸಿಕ್ಕುತ್ತಿದೆ ಎಂದು. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಲಿಂಗಾಯಿತರಿಗೆ, ಒಕ್ಕಲಿಗರಿಗೆ ಎಷ್ಟು ಸಾಲ ಸಿಕ್ಕಿದೆ ಎನ್ನುವ ಇನ್‌ಫರ್ಮೇಷನ್ ನಮ್ಮ ಹತ್ತಿರ ಇದೆ. ಅಪೆಕ್ಸ್ ಬ್ಯಾಂಕಿನಲ್ಲಿ ಎಷ್ಟು ಜನಕ್ಕೆ, ಯಾವ ಜಾತಿಯವರಿಗೆ ಎಷ್ಟು ಸಹಾಯ ಮಾಡಿದ್ದಾರೆ ಮತ್ತು ಇಂಡಸ್ಟ್ರಿಯಲ್ ಲೈಸನ್ಸ್‌ನ್ನು ಯಾವ ಜಾತಿಯವರಿಗೆ ಕೊಟ್ಟಿದ್ದಾರೆ ಇದಕ್ಕೆಲ್ಲಾ ಸ್ಪೆಸಿಫಿಕ್ ಇನ್‌ಸ್ಟನ್ಸ್ ಕೊಡಬೇಕು ಎಂದು ಕೇಳುತ್ತೇನೆ.

[MR. DEPUTY SPEAKER in the Chair]

Sri K. H. PATIL.—I request hon. Member Sri Siddaveerappa not to disclose the facts at this stage.

ಶ್ರೀ ಹೆಚ್. ಸಿದ್ದವೀರಪ್ಪ.—ಈಗ ಇನ್ನೊಂದು ವಿಚಾರ ತೆಗೆದುಕೊಳ್ಳೋಣ. ಮೈಸೂರು ಕಟ್ಟಿಣದ ಹಾಗೂ ಉಕ್ಕಿನ ಕಾರ್ಖಾನೆಯ ವಿಚಾರದಲ್ಲಿ ನಿನ್ನೆಯ ದಿನ ಶ್ರೀಮಾನ್ ಶಿವಪ್ಪನವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಇವೊತ್ತಿನ ದಿವಸ ಏನಾಗಿದೆ ಎಂದರೆ ಇದರ ವಿಸ್ತರಣಾ ಯೋಜನೆಗಳೆಂದು ಮಾಡಿಕೊಂಡು ಯೋಜನೆಗಾಗಿ ಕೊಟ್ಟಿರುವ ಹಣ ಯಾವ ರೀತಿ ದುರುಪಯೋಗವಾಗುತ್ತಿದೆ ಇದರಲ್ಲಿ ಮಂತ್ರಿಗಳ ಪೈಕಿ ಬೇಕಾದ ಜನರಿಗೆ ಹೇಗೆ ಅನುಕೂಲವಾಗುತ್ತಿದೆ ಎನ್ನುವ ಅನುಮಾನ ನಮಗೆ ಬಂದಿದೆ. ಇವೊತ್ತು ಹೊರಗಿನಿಂದ ಕೆಲವು ಜನ ಇಲ್ಲಿ ಇಂಡಸ್ಟ್ರಿ ಮಾಡುತ್ತೇವೆ ಎಂದು ಬರುತ್ತಾರೆ. ಹಾಗೆ ಕಲ್ಕತ್ತಾದಿಂದ ಒಬ್ಬರು Karnataka Exporters ಎನ್ನುವವರು ಬಂದು ಬೆಂಗಳೂರಿಗೆ ಸುಮಾರು 8-9 ಮೈಲಿ ದೂರದಲ್ಲಿ ಇವರು ಒಂದು ಕೈಗಾರಿಕೆ ತೆರೆದಿದ್ದಾರೆ. ಇದನ್ನು ಹೇಗೆ ಬುದ್ಧಿವಂತಿಕೆಯಿಂದ ಮಾಡುತ್ತಿದ್ದಾರೆ ಎನ್ನುವುದನ್ನು ವಿಚಾರ ಮಾಡಬೇಕು. ಇದರ ಫರ್ಮನ್ನು ಬೆಂಗಳೂರಿಗೆ ಸುಮಾರು ಹತ್ತು ಮೈಲಿ ದೂರದಲ್ಲಿ ಇಟ್ಟುಕೊಂಡು ಎಲ್ಲ ವ್ಯವಹಾರಗಳನ್ನೂ ನಡೆಸುತ್ತಿದ್ದಾರೆ. ಇದನ್ನು ನಾವು ಬೇರೆ ರೀತಿಯಿಂದ ಈಕ್ಷೆ ಮಾಡಿದ್ದೇವೆ. ಇವೊತ್ತಿನ ದಿವಸ ಕರಪ್ಷನ್ ಚಾರ್ಜ್ ಎಲ್ಲಿಯವರೆಗೆ ಬಂದಿದೆ ಎನ್ನುವುದನ್ನ ಹೇಳಲಿಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ. ಕರ್ಣಾಟಕ ಎಕ್ಸ್‌ಪೋರ್ಟರ್ಸ್ ಎನ್ನುವ ಸಂಸ್ಥೆ ಹಿಂದೆ ನಾನು ಇಲ್ಲೇ ಒಂದು ಸಾರಿ ಹೇಳಿದಂತೆ ಶ್ರೀಮಾನ್ ನಿಜಲಿಂಗಪ್ಪನವರ ತಮ್ಮ ಹಾಗೂ ಅವರ ಮಗನಿಗೆ ಸೇರಿದಂತ ಸಂಸ್ಥೆಯಲ್ಲ. ಇಲ್ಲಿ ನಾನು ಹೇಳುವ ಕರ್ಣಾಟಕ ಎಕ್ಸ್‌ಪೋರ್ಟರ್ಸ್ ಎನ್ನುವ ಸಂಸ್ಥೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಜಶೇಖರ ಮೂರ್ತಿಯವರ ಮನೆಯಲ್ಲಿ ಬಾಡಿಗೆಗೆ ಇರುವ ಒಂದು ಸಂಸ್ಥೆಯಾಗಿದೆ. ನನಗೆ ಬಂದಿರುವ ವರ್ತಮಾನದ ಪ್ರಕಾರ ಇದೊಂದು ಎಕ್ಸ್‌ಪೋರ್ಟ್ ಟ್ರೇಡಿಂಗ್ ಕಾರ್ಪೊರೇಷನ್ ಆಗಿದೆ. ಹಿಂದೆ ಇದೇ ಸರಕಾರದಲ್ಲಿ ಶ್ರೀಮಾನ್ ಟಿ.ಆರ್. ಶಾಮಣ್ಣನವರು ಇಂಡಸ್ಟ್ರಿ ಇಲಾಖೆ ಡೈರೆಕ್ಟರಾಗಿದ್ದಾಗ ಒಂದು ಎಕ್ಸ್‌ಪೋರ್ಟ್ ಟ್ರೇಡಿಂಗ್ ಕಾರ್ಪೊರೇಷನ್

ಎಂದು ಮಾಡಿ ಅದರಲ್ಲಿ ಇವರನ್ನೇ ಅಧ್ಯಕ್ಷರನ್ನಾಗಿ ಮಾಡಿ ಅದರ ಉಪಯೋಗ ಇದೇ ಇಲಾಖೆಗೆ ಬರಬೇಕೆಂದು ಮಾಡಲಾಗಿತ್ತು. ಇದರಿಂದ ರಾಜ್ಯಕ್ಕೂ ಹೆಚ್ಚು ಉಪಯೋಗವಾಗುತ್ತಿತ್ತು. ಆದರೆ ಇವೊತ್ತಿನ ದಿವಸ ಇಲ್ಲಿ ನಾನು ಹೇಳುತ್ತಿರುವ ಕರ್ಣಾಟಕ ಎಕ್ಸ್‌ಪೋರ್ಟರ್ಸ್ ಎನ್ನುವ ಸಂಸ್ಥೆ ವಿಚಾರವನ್ನು ತೆಗೆದುಕೊಂಡು ಸರಿಯಾಗಿ ವಿಚಾರ ಮಾಡುವುದಾದರೆ ಇದೊಂದು ಎಕ್ಸ್‌ಪೋರ್ಟ್ ಕಾರ್ಪೊರೇಷನ್ ಆಗಿ ಕೆಲಸ ಮಾಡುತ್ತಿದೆ. ಇದಕ್ಕೆ ಎಕ್ಸ್‌ಪೋರ್ಟ್ ರೇಟೇ ಬೇರೆ ಇರುತ್ತೆ ಮತ್ತು ಇಂಟರ್ನಲ್ ರೇಟೇ ಬೇರೆ ಇರುತ್ತೆ. ಇಂಟರ್ನಲ್ ಮಾರ್ಕೆಟ್ ರೇಟು ಸುಮಾರು ಒಂದು ಟನ್ನಿಗೆ 200ರಿಂದ 250 ರ ವರೆಗೆ ಇರುತ್ತೆ. ಇವರು ಫಾರಿನ್ ಎಕ್ಸ್‌ಚೇಂಜು ಪಡೆದುಕೊಳ್ಳಲು ಇಂಟರ್ನಲ್ ರೇಟಿನ ವ್ಯವಹಾರದಲ್ಲಿ ಸುಮಾರು ಐವತ್ತು ಲಕ್ಷಕ್ಕಿಂತಲೂ ಹೆಚ್ಚು ಸಂಪಾದನೆ ಮಾಡಿ ಎಲ್ಲ ಸವಲತ್ತುಗಳನ್ನೂ ಪಡೆಯುತ್ತಿದ್ದಾರೆ. ಇದರಲ್ಲಿ ಇನ್ನೊಂದು ಏನಾಗಿದೆ ಎಂದರೆ ಇವೊತ್ತಿನ ದಿವಸ ಈ ಕರ್ಣಾಟಕ ಎಕ್ಸ್‌ಪೋರ್ಟರ್ಸ್ ಎನ್ನುವ ಸಂಸ್ಥೆ ನಮ್ಮ ಮೈಸೂರು ರಾಜ್ಯಕ್ಕೆ ಸೇರಿದ ಜನರದಲ್ಲ. ಮೈಸೂರು ರಾಜ್ಯದ ಜನತೆಗೆ ಇದರಿಂದ ಒಂದು ನಯಾಪೈಸಾ ಉಪಯೋಗ ಕೂಡ ಇಲ್ಲ. ಹೊರಗಿನಿಂದ ಬಂದವರು ಒಬ್ಬರು ಕರ್ಣಾಟಕ ಎಕ್ಸ್‌ಪೋರ್ಟರ್ಸ್ ಎಂದು ಒಂದು ಸಂಸ್ಥೆ ಮಾಡಿಕೊಂಡು ಬೆಂಗಳೂರಿಗೆ ಸುಮಾರು ಹತ್ತು ಮೈಲಿ ದೂರದಲ್ಲಿ ಒಳ್ಳೆಯ ಬಂಗಲೆ ಮಾಡಿಕೊಂಡು ಈ ಕಾರ್ಖಾನೆಯಲ್ಲಿ ಒಂದು ಅರೇಂಜ್‌ಮೆಂಟು ಮಾಡಿಕೊಂಡು ನಮ್ಮ ದೇಶದ ಹಣವನ್ನು ಇಂದು ಲೂಟಿ ಮಾಡಿಕೊಂಡು ಬರುತ್ತಿರುವುದನ್ನು ನಾವು ಏಕೆ ನೋಡಿಕೊಂಡು ಸುಮ್ಮನೆ ಇರಬೇಕೆಂದು ಇಲ್ಲಿ ಹೇಳಬೇಕಾಗಿದೆ. ಇದೂ ಅಲ್ಲದೆ ಇದೇ ರೀತಿ ನಮ್ಮ ಸರಕಾರದವರು ಸೋಮಾನಿ ಎನ್ನುವವರಿಗೆ ಭದ್ರಾವತಿ ಕಾರ್ಖಾನೆಯಿಂದ ಅನುಕೂಲ ಮಾಡಿಕೊಡುತ್ತಿದ್ದಾರೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದ ಎಕ್ಸ್‌ಪೋರ್ಟ್ ಮಾಡುವುದರ ವ್ಯವಹಾರಗಳಲ್ಲಿ ಇವರಿಗೂ ಅನುಕೂಲ ಮಾಡಿದ್ದಾರೆ. ಇದೇ ರೀತಿ ಬಿರ್ಲಾರವರ ಬಗ್ಗೆ ಕೂಡ ಇದೆ. ಇದರ ಡೀಟೇಲ್ಸ್ ಬಗ್ಗೆ ಇಲ್ಲಿ ಹೆಚ್ಚು ಹೇಳಲು ಹೋಗುವುದಿಲ್ಲ. ಒಟ್ಟಿನಲ್ಲಿ ಇಂಡಸ್ಟ್ರಿಗಳನ್ನು ದೇಶದಲ್ಲಿ ಮಾಡಿ ಈ ರಾಜ್ಯದ ಜನರಿಗೆ ಅವರ ಹಿತದೃಷ್ಟಿಯಿಂದ ಅನುಕೂಲವಾಗುವ ಹಾಗೆ ಏನನ್ನೂ ಮಾಡಿಲ್ಲ ಎಂದು ಹೇಳಬೇಕಾಗಿದೆ.

ಇನ್ನು ರೈತರಿಗಾಗಿ ಏನು ಮಾಡಿದ್ದಾರೆ ಎನ್ನುವುದನ್ನೇ ತೆಗೆದುಕೊಳ್ಳೋಣ. ರಿಸೋರ್ಸಸ್ ಕಮಿಟಿ ಮುಂದೆ ಶ್ರೀಮಾನ್ ರಾಚಯ್ಯನವರೂ ಇದ್ದರು. ಅಲ್ಲಿ ನಮಗೆ ತಿಳಿದು ಬಂದ ಹಾಗೆ ಬೇಕಾದಷ್ಟು ಗೊಬ್ಬರವನ್ನು ದಾಸ್ತಾನು ಮಾಡಿದ್ದಾರೆ. ಆರ್ಟಿಫಿಷಿಯಲ್ ಫರ್ಟಿಲೈಸರ್ಸ್ ಸುಮಾರು 35 ಕೋಟಿ ರೂಪಾಯಿಗಳ ಬೆಲೆ ಉಳ್ಳ ಗೊಬ್ಬರವನ್ನು ದಾಸ್ತಾನು ಮಾಡಿದ್ದಾರೆ. ಇದನ್ನು ತೆಗೆದುಕೊಳ್ಳುವಾಗ ಕೂಡ ಒಂದು ಟನ್ನಿಗೆ 30 ರಿಂದ 35ರ ವರೆಗೆ ಜಾಸ್ತಿ ಕೊಟ್ಟು ರೈತರಿಗೆ ಮಾರಾಟ ಮಾಡಿದ್ದಾರೆ. ಇದರ ಕಾಸ್ಟನ್ನು ವರ್ಕ್‌ಔಟು ಮಾಡಿದರೆ ಇದರಲ್ಲಿ ಎಷ್ಟು ನಷ್ಟವಾಗಿದೆ ಎನ್ನುವುದು ಗೊತ್ತಾಗುತ್ತದೆ. ಇದರ ಬಗ್ಗೆ ಶ್ರೀಮಾನ್ ರಾಚಯ್ಯನವರನ್ನು ಕೇಳಿದಾಗ ಅವರು ಇದನ್ನು ನನ್ನ ಇಲಾಖೆಗೆ ಕೊಟ್ಟರೆ ಸರಿಯಾಗಿ ಮಾಡಬಹುದು. ಆದರೆ ಇದು ನನಗೆ ಸೇರಿಲ್ಲ ಶ್ರೀಮಾನ್ ನಾಡಗೌಡರಿಗೆ ಸೇರಿದಂತಹ ಇಲಾಖೆ ಎಂದು ಹೇಳಿದರು. ಇದರಲ್ಲಿ ಎಷ್ಟು ಜನ ಲಿಂಗಾಯಿತರಿಗೆ ಅನುಕೂಲವಾಗಿದೆ ಇಲ್ಲ ಎನ್ನುವುದನ್ನು ಪರಿಶೀಲಿಸಲು ನನ್ನ ಸ್ನೇಹಿತರಿಗೇ ಇದನ್ನು ಬಿಡುತ್ತೇನೆ. ಇವೊತ್ತು ಸಹಕಾರ ಸಂಸ್ಥೆ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಬೆಳೆಯುತ್ತ ಇದ್ದು ಎಷ್ಟು ಹಣ ದುರುಪಯೋಗವಾಗಿದೆ ಎನ್ನುವುದನ್ನು ನೋಡಿದರೆ ಅದು ನಿಮಗೇ ತಿಳಿಯುತ್ತದೆ. ನಿನ್ನೆ ದಿವಸ ಮಾನ್ಯ ಸದಸ್ಯರಾದ ಶ್ರೀಮಾನ್ ಬೊಮ್ಮಾಯಿಯವರು ಸಹಕಾರ ಸಂಸ್ಥೆ ಬಗ್ಗೆ ಹೇಳುತ್ತಾ ಧಾರವಾಡ ಜಿಲ್ಲೆಯ ಬಗ್ಗೆ ಒಂದು ಸಂಸ್ಥೆ ವಿಚಾರ ಹೇಳಿದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದಂತಹ ಸಹಕಾರ ಸಂಸ್ಥೆಯಲ್ಲಿ ನಾನು ನಾಮಿನೇಟೆಡ್ ಮೆಂಬರಾಗಿ ಬರಲಿಲ್ಲ. ಆ ಸಂಸ್ಥೆಗೆ ಚುನಾಯಿಸಿ ಬಂದಿದ್ದೇನೆ. ಅಲ್ಲದೆ ಅದರ ಅಧ್ಯಕ್ಷನಾಗಿ ನಾನು ಕೆಲಸ ಮಾಡಿದಾಗ ನಾನು ಕಾಂಗ್ರೆಸ್ಸು ಪಕ್ಷಕ್ಕೆ ಸೇರಿರಲಿಲ್ಲ. ಕಾಂಗ್ರೆಸ್ಸಿಗೆ ಸೇರಿದ ಮೇಲೆ ಈ ಸಂಸ್ಥೆಯ ಅಧ್ಯಕ್ಷನಾಗಿರಲಿಲ್ಲ. ನಾನು ಈ ಸಂಸ್ಥೆಗೆ ಬರುವುದಕ್ಕೆ ಮುನ್ನ ಇದರ ವ್ಯವಹಾರಗಳು ಆಗುತ್ತಿದ್ದಾಗ ಸುಮಾರು 50 ಸಾವಿರ ರೂಪಾಯಿಗಳ ನಷ್ಟವಾಗುತ್ತಿತ್ತು. ನಾನು ಅಧಿಕಾರಕ್ಕೆ ಬಂದ ಮೇಲೆ ಇವನ್ನೆಲ್ಲಾ ಸರಿ ಮಾಡಿ ಈಗ ಇಲ್ಲಿ ಸುಮಾರು ಒಂದು ಲಕ್ಷ ರೂಪಾಯಿ ಲಾಭ ಬರುವಂತೆ ಕೆಲಸ ಮಾಡುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸಿದ್ಧವೀರಪ್ಪನವರು ಸರಿಯಾಗಿ ತಿಳಿದುಕೊಳ್ಳಬೇಕು. ಈ ಸಂಸ್ಥೆಯಲ್ಲಿ ದುರುಪಯೋಗ ಅಥವಾ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎನ್ನುವದನ್ನು ಮಾನ್ಯ ಸದಸ್ಯರು ರುಜುವಾತು ಮಾಡಿದರೆ ನಾನು ನನ್ನ ಅಧ್ಯಕ್ಷ ಸ್ಥಾನಕ್ಕೆ ಇಂದೇ ರಾಜೀನಾಮೆ ಕೊಡುತ್ತೇನೆ. ಮಾನ್ಯ ಸದಸ್ಯರು ಹೇಳುವುದು ಸರಿಯಿಲ್ಲದಿದ್ದರೆ ಅವರು ತಮ್ಮ ಈ ಸಭೆಯ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆಯೋ ಎಂದು ನಾನು ಇಲ್ಲಿ ಕೇಳುತ್ತೇನೆ.

ಶ್ರೀ ಹೆಚ್. ಸಿದ್ಧವೀರಪ್ಪ.—ಎಲ್ಲರೂ ಒಟ್ಟಿಗೆ ರಾಜೀನಾಮೆ ಕೊಡುವ ಪ್ರಸಂಗ ಬರುತ್ತದೆ. ಆಗ ನೋಡೋಣ. ಇಂತಹ ಕೆಲವು ಸಂಸ್ಥೆಗಳಿವೆ ಎಂದು ಹೇಳುವಾಗ ಇದರ ಬಗ್ಗೆ ಹೇಳುತ್ತೇನೆ. ಇದರ ಬಗ್ಗೆ ಇನ್ನೂ ಒಂದು ಮಾತು ಹೇಳುತ್ತೇನೆ. ಇದರ ಬಗ್ಗೆ ಒಂದು ಮಾತು ಇಲ್ಲಿ ಹೇಳಿದರೆ ತಾವು ಅದನ್ನು ತಪ್ಪಾಗಿ ಭಾವಿಸಬಾರದು. ಇಂತಹ ಪದವನ್ನು ಉಪಯೋಗಿಸಲು ತಾವು ಅಪ್ಪಣೆ ಕೊಡುತ್ತೀರಿ ಎಂದು ಇಲ್ಲಿ ಹೇಳುತ್ತೇನೆ. ಇದಕ್ಕೆ ಏನು ಹೇಳಬಹುದು ಎಂದರೆ Prostitution of Political Power ರಾಜಕೀಯ ಹಾದರತನ ಎಂದು ಇಲ್ಲಿ ಹೇಳಬೇಕಾಗಿ ಬಂದಿದೆ. ಇದರಿಂದ ಇಂದು ದೇಶದಲ್ಲಿ ಆರ್ಥಿಕ ದಿವಾಳಿತನ ಬಂದಿದೆ.

4-30 P.M.

ನಿಜಲಿಂಗಪ್ಪನವರ ಯುಗ ಪ್ರಾರಂಭವಾದದ್ದು ಎಲ್ಲಿಯವರೆಗೆ ಬಂದಿದೆ ಎನ್ನುವುದನ್ನು ಪತ್ರಿಕೆಗಳಲ್ಲಿ ಓದಿದೆ. ಸೌತ್ ಕೆನರಾ ಜಿಲ್ಲೆಯಲ್ಲಿ 562 ರೂಪಾಯಿ ಯಾರೋ ಒಬ್ಬ ವ್ಯಕ್ತಿಗೆ ಕೊಡುವ ಶಕ್ತಿ ಇಲ್ಲ ಎಂದು ಜಿಲ್ಲಾಧಿಕಾರಿಯ ಕಛೇರಿಯಲ್ಲಿ ಇರುವ ಕುರ್ಚಿ, ಮೇಜು, ಬೆಂಚು ಹರಾಜಿಗೆ ತಂದಿದ್ದಾರೆ. ಹೊಳೆನರಸೀಪುರದಲ್ಲಿ ಉಪಾಧ್ಯಾಯರಿಗೆ ಸಂಬಳ ಕೊಡಲು ಇಲ್ಲದೆ ಸ್ಕೂಲು ಬಿಲ್ಡಿಂಗ್ ಹರಾಜಿಗೆ ತಂದಿದ್ದಾರೆ. ರಿಸರ್ವ್‌ಬ್ಯಾಂಕ್ ಒಂದು ಇಲ್ಲದಿದ್ದರೆ ಮೈಸೂರು ದೇಶದ ಪರಿಸ್ಥಿತಿ ಏನಾಗುತ್ತಿತ್ತೊ ? ಈಗ ಲಾಟರಿ ಶುರು ಮಾಡಿದ್ದಾರೆ. ಲಾಟರಿಯಿಂದ ವರ್ಷಕ್ಕೆ ಇಷ್ಟು ಬರುತ್ತದೆ, ಇಷ್ಟು ಬರುತ್ತದೆ ಎಂದು ಜನ ತಿಳಿದುಕೊಂಡಿದ್ದಾರೆ. ಲಾಟರಿಗೆ ಹಾಕಿದ ದುಡ್ಡು ಏನಾಗುತ್ತದೆ ಎನ್ನುವುದನ್ನು ಮುಂದೆ ಹೇಳೋಣ. ಈಗಿರುವ ಆಡಳಿತದಿಂದ ಎಲ್ಲರ ಮನಸ್ಸು ಕೆಟ್ಟು ಹೋಗಿದೆ. ಆಡಳಿತದ ಕಡೆ ನೋಡುತ್ತಾ ಇಲ್ಲ. ಕಾಗೆಗಳ ಗುಂಪಿನಲ್ಲಿ ಕೋಗಿಲೆಗಳು ಸೇರಿಕೊಂಡ ಹಾಗೆ ಕೆಲವರು ಇದ್ದಾರೆ. ಇವರನ್ನು ನೋಡಿದರೆ ನನಗೆ ವ್ಯಥೆ ಆಗುತ್ತದೆ. ಅವರ ವಿಚಾರದಲ್ಲಿ ನನಗೆ ಕಳಕಳಿ ಇದೆ. ಏನುಮಾಡುವುದು ? ಸಹವಾಸದೋಷ. ಕೆರೆ ಕಟ್ಟುವುದಕ್ಕೆ ದುಡ್ಡು ಇಲ್ಲ. ಇನ್ನೊಂದು ಮಾಡುವುದಕ್ಕೆ ದುಡ್ಡು ಇಲ್ಲ, ಅದಕ್ಕಾಗಿ ನಮಗೆ ರಿಸೋರ್ಸಸ್ ಕೊಡಿ ನಾವು ಏನು ಬೇಕಾದರೂ ಮಾಡುತ್ತೇವೆ ಎಂದು ಹೇಳಿ ಹೋದ ವರ್ಷ 7—8 ಮೀಟಿಂಗುಗಳನ್ನು ಸೇರಿಸಿ ಕೇಳಿಕೊಂಡರು. 1974ನೇ ಇಸವಿ ಒಳಗೆ ಕೆರೆ ಕಟ್ಟದಿದ್ದರೆ ನಮಗಿರುವ ನೀರಿನ ಹಕ್ಕು ಹೋಗುತ್ತದೆ ಎಂದು, ಅದಕ್ಕಾಗಿ ಎಲ್ಲರೂ ಒಪ್ಪಿಕೊಂಡರು. ಒಂಭತ್ತುಮುಕ್ಕಾಲು ಕೋಟಿ ಉಳಿತಾಯ ತೋರಿಸುತ್ತೇವೆ ಎಂದು ಹೇಳಿದ ಮಹನೀಯರು ಈಗ ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಹಣ ಕಾಸಿನ ಮಂತ್ರಿಗಳು ಕಣ್ಣುಕಣ್ಣು ಬಿಡುತ್ತಾ ಇದ್ದಾರೆ. ಒಂದು ಉದಾಹರಣೆ ಕೊಡುತ್ತೇನೆ. ರಾಜಶೇಖರ ಮೂರ್ತಿಯವರಿಗೆ ಹೇಳಿದೆವು ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು ಎನ್ನುವಂತೆ ಫಿಲ್ಮ್ ಇಂಡಸ್ಟ್ರೀಸ್‌ಗೆ ಪ್ರೋತ್ಸಾಹ ಕೊಡಲಿರುವ ಯೋಜನೆಯನ್ನು ಸ್ವಲ್ಪ ಮುಂದಕ್ಕೆ ಹಾಕಿ ಅದರಲ್ಲಿ ಉಳಿಯುವ ದುಡ್ಡನ್ನು ಕೆರೆ ಕಟ್ಟುವುದಕ್ಕೆ ಉಪಯೋಗಿಸೋಣ ಎಂದು. ಅವರು ರಿಸೋರ್ಸಸ್ ಕಮಿಟಿ ಮುಂದೆ ಅದಕ್ಕೆ ಒಪ್ಪಿಕೊಂಡು ಹಣ ಕೇಳುವುದಿಲ್ಲ ಎಂದು ಹೇಳಿದರು. ಆದರೆ ಈ ದಿನ ಇಂತಹ ಯೋಜನೆಗಳಿಗೆ ಹಣ ಕೊಡುವುದೇ ಸರಿ ಎಂದು ಹೇಳುತ್ತಿದ್ದಾರೆ. ಅವರಿಗೆ ಏನೇನು ಕಮಿಟ್‌ಮೆಂಟ್ಸ್ ಇದೆಯೋ ಯಾರು ಬಲ್ಲರು, ನಮಗೆ ಒಂದೂ ಗೊತ್ತಾಗುವುದಿಲ್ಲ. ಈ ರೀತಿಯಾಗಿ ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲದೆ ಕೆರೆ ಕಟ್ಟುವುದಕ್ಕೇ ಆಗಿಲ್ಲ. ಒಂದು ರೀತಿಯಿಂದ ಅವರು ಕೆರೆ ಕಟ್ಟದೆ ಇದ್ದದ್ದು ಒಳ್ಳೆಯದೆಂದು ಕಾಣುತ್ತದೆ. ಯಾತಕ್ಕೆಂದರೆ ಅವರು ಮಾಡುವ ಕೆಲಸ ಪ್ರತಿಯೊಂದು ಕೆಲಸವೂ ಅಭದ್ರವಾಗಿದೆ. ಅವರು ಕಟ್ಟಿರುವ ಕೆರೆ ಈವೊತ್ತು ಒಡೆದು ಹೋಗಿದೆ. ನಮ್ಮ ಜಿಲ್ಲೆಯಲ್ಲಿ ಕರ್ಣಾಟಕ ಟ್ರೇಡರ್ಸ್ ಎಂದು ಶ್ರೀಮಾನ್ ನಿಜಲಿಂಗಪ್ಪನವರ ತಮ್ಮಂದಿರು ಕಟ್ಟಿರತಕ್ಕ ಮೂರು ಕೆರೆಗಳು ಒಡೆದುಹೋಗಿವೆ. ಅಲ್ಲಿಯ ಸೂಪರಿಂಟೆಂಡಿಂಗ್ ಇಂಜನೀಯರು ಅವರಿಗೆ ಜುಲ್ಮಾನೆಯನ್ನು ಹಾಕಿದ್ದಾರೆ. ಆದುದರಿಂದ ಇರುವ ದುಡ್ಡು ಹಾಗೆಯೇ ಉಳಿಯುವುದಾದಾರೆ ಅವರು ಹೋದ ಮೇಲೆ ಕೆಲಸ ತೆಗೆದುಕೊಂಡರೆ ಮುಂದೆ ಒಳ್ಳೆಯದಾದೀತು. ಕಟ್ಟಿದ ಕೆರೆ ಒಡೆದು ಹೋಗುವುದಾದರೆ ದೇಶದಲ್ಲಿ ಹಣ ಅಪವ್ಯಯ ಆದೀತು. ಏನು ಮಾಡುವುದಕ್ಕೂ ಸರಕಾರದವರ ಕೈಯಲ್ಲಿ ಆಗಿಲ್ಲ. ಫೈನಾನ್ಸ್ ಕಮಿಷನ್ ಮುಂದೆ ಸರಕಾರದವರು ನಮ್ಮ ದೇಶದ ಚಿತ್ರವನ್ನು ಸರಿಯಾಗಿ ಇಡದೆ ಕರ್ತವ್ಯ ಲೋಪ ಮಾಡಿದ್ದಾರೆ ಎನ್ನುವುದು ಇತ್ತೀಚೆಗೆ ನಡೆದಿರುವ ಸಂಗತಿಗಳಿಂದ ಗೊತ್ತಾಗುತ್ತದೆ. ಫೈನಾನ್ಸ್ ಕಮಿಷನ್ ಮುಂದೆ ನಮ್ಮ ಕೇಸ್‌ನ್ನು ಸರಿಯಾಗಿ ಪ್ರತಿಪಾದಿಸಿದ್ದರೆ ಈವೊತ್ತಿನ ದಿವಸ ಇಂತಹ ಧಾರುಣ ಪರಿಸ್ಥಿತಿ ಬರುತ್ತಿರಲಿಲ್ಲ. ನಮ್ಮ ಓವರ್‌ಡ್ರಾಫ್ಟ್ ವರ್ಷಕ್ಕೆ ಎಲ್ಲಿಯವರೆಗೆ ಹೋಗಿದೆ ಎಂದರೆ 30ರಿಂದ 35 ಕೋಟಿ ರೂಪಾಯಿಗಳವರೆಗೆ ಹೋಗಿದೆ. ಓವರ್‌ಡ್ರಾಫ್ಟ್‌ಗೆ ಲಿಮಿಟ್ ಏನಾದರೂ ಹಾಕಿದರೆ ಮುಂದಿನ ತಿಂಗಳ ಸಂಬಳವೇ ನೌಕರರಿಗೆ ಕೊಡುವುದಕ್ಕೆ ಆಗುವುದಿಲ್ಲ. ಇಂತಹ ದಾರುಣ

ಪರಿಸ್ಥಿತಿ ಇರಬೇಕಾದರೆ ಹೆಚ್ಚಿನ ಅಧಿಕಾರಿಗಳನ್ನು ನೇಮಿಸಬೇಡಿ ಹೆಚ್ಚಿನ ಇಲಾಖೆಗಳನ್ನು ತೆರೆಯ ಬೇಡಿ, ಮಂತ್ರಿಗಳನ್ನು ಕಡಿಮೆ ಮಾಡಿರಿ ಎಂದು ಹೇಳಿದರೆ ಯಾರೂ ಕೇಳುವುದಿಲ್ಲ. ವೀರೇಂದ್ರ ಪಾಟೀಲರಿಗೆ ಇನ್ನೊಂದು ಸೂಚನೆ ಕೊಡುತ್ತೇನೆ. ಹೇಗೂ ನಿಮಗೆ 28 ಜನ ಮಂತ್ರಿಗಳು ಇದ್ದಾರೆ. ಒಬ್ಬ ಸದಸ್ಯರಿಗೆ ಒಬ್ಬ ಮಂತ್ರಿಯಂತೆ 60 ಜನ ಮಂತ್ರಿಗಳನ್ನು ನೇಮಿಸಿ. ಆ ರೀತಿ ಮಾಡಿದರೆ ಪೋರ್ಟ್‌ಫೋಲಿಯೋ ಹಂಚಿಕೆಯಲ್ಲಿ ಕಷ್ಟ ಬರುತ್ತದೆ ಎಂದರೆ ಅನಿಮಲ್ ಹಸ್‌ಬೆಂಡರಿ ಇಲಾಖೆಯಲ್ಲಿ ಕುರಿಗೆ ಒಂದು ಪೋರ್ಟ್‌ಫೋಲಿಯೋ ಕೋಳಿಗೆ ಒಂದು ಪೋರ್ಟ್‌ಫೋಲಿಯೋ ಈ ರೀತಿ ಮಾಡಿಕೊಂಡರೆ ತಪ್ಪಾಗುವುದಿಲ್ಲ. ಏತಕ್ಕೆಂದರೆ ಹಣ ಆ ರೀತಿ ದೇಶದಲ್ಲಿ ಹಾಳು ಮಾಡುತ್ತಿದ್ದೀರಿ. ನೀವು ಉಳಿತಾಯ ತರಬೇಕಾಗಿತ್ತು ತರದೇ ಇದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾನು ಹೀಗೆ ಅನೇಕ ವಿಷಯಗಳನ್ನು ಹೇಳುತ್ತಾ ಹೋದರೆ ನಾನೇ ಬಾಕಿಯವರ ಕಾಲವನ್ನು ತೆಗೆದುಕೊಳ್ಳುವುದು ತಪ್ಪಾಗಬಹುದು. ನಾನು ಇಷ್ಟು ಹೇಳುತ್ತೇನೆ. ನಿಮ್ಮ ಜನರನ್ನು ಸಂತುಷ್ಟರನ್ನಾಗಿ ಮಾಡುವುದರಿಂದ ಜನರಿಗೆ ಪ್ರಯೋಜನ ವಾಗುವುದಿಲ್ಲ. ಉದಾಹರಣೆ ನೀಡುವುದಾದರೆ ತುಂಗಭದ್ರ ಲೆಫ್ಟ್ ಬ್ಯಾಂಕ್ ಚಾನಲ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಪಕ್ಷದ ಕಡೆ ಒಬ್ಬ ಸದಸ್ಯರು ದುಡ್ಡು ಕೊಟ್ಟು 33 ಎಕರೆ ಜಮೀನನ್ನು ತೆಗೆದು ಕೊಂಡಿದ್ದಾರೆ. ಅವರ ಜಮೀನು ಅಪ್ಪರ್ ರೀಚಸ್‌ನಲ್ಲಿ ಇದೆ. ಅಲ್ಲಿಗೆ ಚಾನಲ್ಸ್‌ನಿಂದ ನೀರು ಹೋಗುವ ಹಾಗೆ ಇಲ್ಲ. ಅವರಿಗೆ ಪಂಪು ಹಾಕಿ ಚಾನಲ್‌ನಿಂದ ನೀರು ತೆಗೆದುಕೊಂಡು ಹೋಗ ಬಹುದು ಎಂದು ಆಡಳಿತದಲ್ಲಿ ಆರ್ಡರ್ ಮಾಡಿಕೊಟ್ಟಿದ್ದಾರೆ. ಆದರೆ ಶ್ರೀಮಾನ್ ಡೆಪ್ಯುಟಿ ಸ್ಪೀಕರ್ ಸಾಹೇಬರ ಕ್ಷೇತ್ರದಲ್ಲಿ ವಾಣೀವಿಲಾಸ ಸಾಗರ ಕೆರೆಯ ಕೆಳಗೆ ಜನ ಬಡಿದುಕೊಳ್ಳುತ್ತಿದ್ದಾರೆ, ಇಲ್ಲಿಯವರೆಗೂ ಇದೇರೀತಿ ಅವಕಾಶ ಮಾಡಿಕೊಡಿ ಎಂದರೆ ಸರ್ಕಾರದವರು ಮಾಡಿ ಕೊಡುವುದಿಲ್ಲ. ಅವರು ಹೇಳುತ್ತಾರೆ ವಿ ವಿಲ್ ಬಿ ಓಪನಿಂಗ್ ದಿ ಫ್ಲಡ್‌ಗೇಟ್ಸ್, ಆದುದರಿಂದ ನಾವು ಏನೂ ಮಾಡು ವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಈಗ ರಾಜಕೀಯ ಪರಿವರ್ತನೆ ಆಗುವ ಸಮಯದಲ್ಲಿ ಅವರಿಗೆ ಈ ರೀತಿ ಕೊಡುವುದಕ್ಕೆ ಆವಶ್ಯಕತೆ ಏನಿತ್ತು ? ಇನ್ನು ಈ ಸರಕಾರದ ವಿಚಾರದಲ್ಲಿ ದೇಶದಲ್ಲಿ ಅಶಾಂತಿ ಇದೆ. ಮೊನ್ನೆ ದಿವಸ ಮುಂಬಯಿನಲ್ಲಿ ಆದ ಅಧಿವೇಶನಕ್ಕೆ ಜನರು ತಾವು ತಾವಾಗಿಯೇ ದುಡ್ಡು ಹಾಕಿಕೊಂಡು ಒಂದೊಂದು ಜಿಲ್ಲೆಯಿಂದ ಸ್ಪೆಷಲ್ ಟ್ರೇನಿನಲ್ಲಿ ಹೋದದನ್ನು ನೋಡಿದರೆ ಜನರಿಗೆ ಎಷ್ಟು ಬೇಜಾರು ಆಗಿದೆ ಎನ್ನುವುದು ಗೊತ್ತಾಗುತ್ತದೆ. ಅವರಿಗೆ ಈ ಸರಕಾರ ಸಧ್ಯ ತೊಲಗಿಹೋದರೆ ಸಾಕು ಎನ್ನುವಷ್ಟು ಮಟ್ಟಿಗೆ ಮನಸ್ಸಿಗೆ ಬೇಜಾರು ಆಗಿದೆ. ಈವೊತ್ತು ನಿಜಲಿಂಗಪ್ಪನವರು ಅಧ್ಯಕ್ಷರಾಗಿದ್ದಾರೆ. ಡಿಸೆಂಬರ್ ಹೊತ್ತಿಗೆ ಮುಂದೆ ಯಾವ ಕಾಂಗ್ರೆಸ್ ಅಧ್ಯಕ್ಷರು ಬರುತ್ತಾರೋ ? ಅವರಿಗೆ ಅದೇ ನಿಷ್ಠೆಯಿಂದ ಇರಲಿಕ್ಕೆ ಎಲ್ಲಿ ಸಾಧ್ಯ ? ಪರ್ಸನಲ್ ಅಟ್ಯಾಚ್‌ಮೆಂಟ್ ಇದೆ ಎಂಬುದನ್ನು ದೇಶದ ಜನ ನೋಡುತ್ತಿದ್ದಾರೆ. ಸರಕಾರದವರು ತಿಳಿದು ಕೊಳ್ಳಬಹುದು ನಾವು ಇಲ್ಲಿ ಬಂದು ಕೂತಿದ್ದೇವೆ ನಮ್ಮನ್ನು ಏನು ಮಾಡಿದರೂ ಅಲುಗಾಡಿಸುವುದಕ್ಕೆ ಆಗುವುದಿಲ್ಲ, ಅದು ಅಸಾಧ್ಯ ಎಂದು. ಆದರೆ ನೆಪೋಲಿಯನ್ The word "impossible" has no place in his dictionary ಎಂದು ಹೇಳಿದ್ದಾನೆ. ನಾನಾದರೂ ಹೇಳುತ್ತೇನೆ ನೀವು ಇಲ್ಲಿಯೇ ಇರಿ, ಏನಾದರೂ ಮಾಡಿ, ಹೇಗಾದರೂ ಮಾಡಿ, ಹೊರಗಡೆ ಹೋಗಬೇಕೆಂದು ಹೇಳು ವವನು ನಾನು ಅಲ್ಲ. ಜನರು ಓಡಿಸುತ್ತಾರೆ. ದೇಶ ನಿಮ್ಮ ಕೈಯಲ್ಲಿ ಸುಖವಾಗಿ ಇಲ್ಲ. ದೇಶವು ಪಡಬಾರದ ಕಷ್ಟವನ್ನು ಪಡುತ್ತಾ ಇದೆ. ಇಂತಹ ದಾರುಣ ಪರಿಸ್ಥಿತಿ ಇದೆ. ನಿಮಗೆ ದೇಶಉಳಿಸಿ ಕೊಂಡುಬರಬೇಕೆಂದು ಆಶೆ ಇದ್ದರೆ ದೇಶದ ಜನತೆಗೆ ಉಪಕಾರ ಮಾಡಬೇಕೆಂದು ಆಶೆ ಇದ್ದರೆ ನೀವು ಬೇಕಾದರೆ ಪರೀಕ್ಷೆಮಾಡಬಹುದು ಎನ್ನುವ ದೃಷ್ಟಿ ಇದ್ದರೆ ಜನರ ಕಡೆಗೆ ಹೋಗಿ ಕೇಳಿ ಲ್ಯಾಂಡ್‌ರಿಫಾರಮ್ಸ್ ಬಗ್ಗೆ ಯಾವರೀತಿ ಹೇಳುತ್ತಿದ್ದಾರೆಂದು. ಬಿಟ್ಟಿನಲ್ಲಿ ಈ ಅವಕಾಶವನ್ನು ನಾನು ಉಪಯೋಗಿಸಿಕೊಂಡು ಕೆಲವು ಅಂಶಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಅರಿತರೆ ಆರು ಪಟ್ಟು, ಮರೆತರೆ ಮೂರು ಪಟ್ಟು ಎನ್ನುವ ಹಾಗೆ ಸ್ವಲ್ಪ ಈಗಲಾದರೂ ಹುಶಾರಾಗಿ. ನೆವರ್ ಟೂ ಲೇಟ್ ಟು ಮೆಂಡ್. ಈಗಲೂ ತಿದ್ದಿಕೊಳ್ಳಲು ಅವ ಕಾಶವಿದೆ. ಇಲ್ಲದಿದ್ದರೆ ಇದರಿಂದ ಪರಿಣಾಮ ಬಹಳ ಕೆಟ್ಟದ್ದು ಆಗುತ್ತದೆಂದು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ.

ಶ್ರೀ ಎಂ. ರಾಮಪ್ಪ (ಹೊಸದುರ್ಗ).—ಮಾನ್ಯ ಸಭಾಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣದ ಮೇಲೆ ಒಂದೆರಡು ಮಾತುಗಳನ್ನು ಮಾತನಾಡುವುದಕ್ಕಿಂತ ಮುಂಚೆ ಇದುವರೆಗೂ ಬಹಳ ಸ್ಫೂರ್ತಿದಾಯಕವಾಗಿ ಮಾತನಾಡಿದ ಮೈಸೂರು ರಾಜ್ಯದ ವಿರೋಧಿ ಕಾಂಗ್ರೆಸ್ ಪಕ್ಷದ ನಾಯಕರು ....

ಶ್ರೀ ಆರ್. ದಯಾನಂದಸಾಗರ್.—ನಾವೇ ನಿಜವಾದ ಕಾಂಗ್ರೆಸ್. ಆಡಳಿತ ಪಕ್ಷದ ಕಾಂಗ್ರೆಸ್‌ನವರು.

ಶ್ರೀ ಎಂ. ರಾಮಪ್ಪ.—ಮೈಸೂರು ವಿರೋಧಿ ಕಾಂಗ್ರೆಸ್ ಪಕ್ಷ ಎಂದು ಹೇಳುವುದರ ಬಗ್ಗೆ ಮಾನ್ಯ ಸದಸ್ಯರು ವಿರೋಧ ಮಾಡುವುದಾದರೆ ಆ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಬೇಡ. ಇಂಡಿಕೇಟ್ ಮತ್ತು ಸಿಂಡಿಕೇಟ್ ಎಂದು ಹೇಳುವುದಕ್ಕೆ ನನಗೆ ಇಚ್ಛೆ ಇಲ್ಲ. ಶ್ರೀಮಾನ್ ಸಿದ್ಧವೀರಪ್ಪನವರು ಭಾಷಣ ಮಾಡುವಾಗ ನಾನು ಬಹಳ ಕುತೂಹಲದಿಂದ ಕೇಳಿದೆ. ಏತಕ್ಕೆಂದರೆ ಅವರ ಪ್ರತಿಭೆಯ ವಿಷಯದಲ್ಲಿ ನನಗೆ ಅಪಾರ ಗೌರವವಿದೆ. ಅವರ ವಿಷಯದಲ್ಲಿ ನನಗೆ ವೈಯ್ಯಕ್ತಿಕವಾಗಿ ಗೌರವವಿದೆ. ಅವರ ಪ್ರತಿಭೆಯ ವಿಷಯದಲ್ಲಿ ನನಗೆ ಹೆಮ್ಮೆ ಇದೆ. ಅವರು ನಮ್ಮ ಜಿಲ್ಲೆಯವರು. ಅವರು ಒಂದು ಘಂಟೆಯ ಕಾಲ ಭಾಷಣ ಮಾಡಿದರು. ಅವರು ಭಾಷಣ ಮಾಡಿದಾಗ ಅಖಿಲ ಭಾರತ ಆಡಳಿತ ಕಾಂಗ್ರೆಸ್ ಪಕ್ಷದ ನೀತಿ ಧೋರಣೆಯ ವಿಷಯದಲ್ಲಿ ಭಾಷಣ ಮಾಡಿ ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರ ಮನಸ್ಸನ್ನು ಅವರ ಪಕ್ಷದ ಕಡೆ ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ, ಜನರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ ಎನ್ನತಕ್ಕಂಥ ಒಂದು ಕುತೂಹಲದಿಂದ ಒಂದು ಘಂಟೆಯ ಕಾಲ ಅವರ ಭಾಷಣವನ್ನು ನಾನು ಕೇಳಿದ್ದೇನೆ. ಅವರು ಅದನ್ನು ಹೇಳಿದ್ದರೆ ನಿಜವಾಗಿಯೂ ಕೂಡ ಈ ಸಭೆಯ ಸದಸ್ಯರನೇಕರು ಶ್ರೀಮಾನ್ ಸಿದ್ಧವೀರಪ್ಪನವರ ಪಕ್ಷಕ್ಕೆ ಸೇರುವುದಕ್ಕೆ ಪ್ರಯತ್ನ ಮಾಡುತ್ತಿದ್ದರೋ ಏನೋ ಎಂದು ನನಗೆ ಅನಿಸುತ್ತದೆ. ಆದರೆ ನಾನು ನಿರೀಕ್ಷಣೆ ಮಾಡಿದ ಹಾಗೆ ಅವರು ಭಾಷಣ ಮಾಡಲಿಲ್ಲ. ಸದಸ್ಯರನ್ನು ಒಲಿಸಿಕೊಳ್ಳುವ ಪ್ರಯತ್ನವನ್ನು ಅವರು ಮಾಡಲಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಮಾತ್ರ ಅವರ ಮುಂದೆ ನಿಂತಿದ್ದರು. ಅವರ ವಿಷಯದಲ್ಲಿ ಮಾತ್ರ ಅವರು ಮಾತನಾಡಿದರು.

Sri M. MALLIKARJUNASWAMY.—My hon. Friend must know that Sri S. Nijalingappa matters most today in Indian politics and therefore we are bound to make reference to him.

ಶ್ರೀ ಎಂ. ರಾಮಪ್ಪ.—ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದ ಒಂದು ವಿಷಯದಲ್ಲಿ ನನಗೆ ಬಹಳ ಅಸಮಾಧಾನ ಉಂಟಾಯಿತು. ಅದೇನೆಂದರೆ ಶ್ರೀಮಾನ್ ವೀರೇಂದ್ರ ಪಾಟೀಲರು ಶ್ರೀಮಾನ್ ನಿಜಲಿಂಗಪ್ಪನವರ ದತ್ತುಪುತ್ರರು ಅವರು ಹೇಳಿದ ಕಡೆ ಎಡಗೈ ಹೆಬ್ಬೆಟ್ಟಿನ ಗುರ್ತು ಹಾಕುತ್ತಾರೆ ಎಂದು ಹೇಳಿದರು. ಆ ಬಗ್ಗೆ ನನಗೆ ಆತ್ಮ ಸಾಕ್ಷಿಯಾಗಿ ನಂಬಿಕೆ ಇಲ್ಲ. ಏತಕ್ಕೆಂದರೆ ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಅವರದೇ ಆದ ಒಂದು ವ್ಯಕ್ತಿತ್ವ ಇದೆ, ಪ್ರತಿಭೆ ಇದೆ. ನಾನೂ ಕೂಡ ಈಗ ಸುಮಾರು 20 ವರ್ಷಗಳಿಂದ ಕನ್ನಡ ನಾಡಿನಲ್ಲಿ ಹಿಂದೆ ಆಡಳಿತ ನಡೆಸಿದ ಅನೇಕ ಮುಖ್ಯ ಮಂತ್ರಿಗಳನ್ನು ನೋಡಿದ್ದೇನೆ. ನಿಜವಾಗಿಯೂ ಅವರ ಒಂದು ದಕ್ಷತೆ, ಪ್ರಾಮಾಣಿಕತೆ ಏನಿವೆ ಅವು ಕನ್ನಡ ನಾಡನ್ನು ಏಳಿಗೆಗೆ ಮತ್ತು ಅಭ್ಯುದಯಕ್ಕೆ ತರುವ ಸಾಧನಗಳು. ಶ್ರೀಮಾನ್ ವೀರೇಂದ್ರ ಪಾಟೀಲರು ಅವರದೇ ಆದ ಒಂದು ವಿಶಿಷ್ಟ ರೀತಿ ರಾಜ್ಯಭಾರವನ್ನು ನಡೆಸುತ್ತಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರ ಆಶೀರ್ವಾದ ಇವರಿಗೆ ಇದ್ದರೂ ಕೂಡ ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ ಹಾಗೆ ಇವರು ಕೇಳುತ್ತಾರೆ ಎಂದರೆ ನಾನು ಆತ್ಮಸಾಕ್ಷಿಯಾಗಿ ಒಪ್ಪುವುದಿಲ್ಲ ಎಂದು ಈ ಸಂದರ್ಭದಲ್ಲಿ ಈ ಸಭೆಯ ಗಮನಕ್ಕೆ ತರುವುವಕ್ಕೆ ನಾನು ಇಷ್ಟಪಡುತ್ತೇನೆ. ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ ಓದಿದ್ದ ರಾಘವಾಂಕನು ಬರೆದ ಸಿದ್ಧರಾಮ ಚರಿತೆಯ ಒಂದು ವಾಕ್ಯ ನನಗೆ ಜ್ಞಾಪಕಕ್ಕೆ ಬರುತ್ತದೆ. ಅದು ಈ ರೀತಿ ಇದೆ: 'ಉದಯ ಪರ್ವತದಲ್ಲಿ ಹುಟ್ಟಿದ ಸೂರ್ಯ ಉದಯಪರ್ವತದ ಮಗನೇ'' ಎಂದು. ಸೂರ್ಯ ಉದಯ ಪರ್ವತದಲ್ಲಿ ಹುಟ್ಟುತ್ತಾನೆ. ಆದರೆ ಅವನು ಉದಯ ಪರ್ವತದ ಮಗನಾಗುವುದಕ್ಕೆ ಸಾಧ್ಯವಿಲ್ಲ. ಆದರೆ ಅವನು ಇಡೀ ಪ್ರಪಂಚಕ್ಕೇ ಬೆಳಕು ಕೊಡುತ್ತಾನೆ. ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಶ್ರೀಮಾನ್ ನಿಜಲಿಂಗಪ್ಪನವರ ಆಶೀರ್ವಾದ ಇರಬಹುದು. ಶ್ರೀಮಾನ್ ವೀರೇಂದ್ರ ಪಾಟೀಲರ ಪ್ರತಿಭೆ ಇಡೀ ಕರ್ನಾಟಕ ರಾಜ್ಯದಲ್ಲೇ ಬೆಳೆದಿದೆ. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಿಜಲಿಂಗಪ್ಪನವರನ್ನೂ ಮತ್ತು ಪ್ರಧಾನಿಯವರಾದ ಶ್ರೀಮತಿ ಇಂದಿರಾಗಾಂಧಿಯವರನ್ನೂ ಒಂದು ಕಡೆ ಕೂಡಿಸುವುದಕ್ಕೆ ಎಲ್ಲಾ ರಾಜ್ಯದ ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಿ ವಿಫಲರಾಗಿದ್ದರು. ಅಂಥಾ ಸಂದರ್ಭದಲ್ಲಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರು ನಡೆಸಿದಂತಹ ಒಂದು ಸಂಧಾನದಿಂದ ಅವರ ಮಾತಿಗೆ ಬೆಲೆ ಕೊಟ್ಟು ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರು ಒಂದು ಕಡೆ ಸೇರಿದರು. ಅಂಥಾ ಒಂದು ಸಾಹಸಮಯವಾದ ಕೆಲಸವನ್ನು ಶ್ರೀಮಾನ್ ವೀರೇಂದ್ರ ಪಾಟೀಲರು ಮಾಡಿದರು ಎಂದು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

Sri H. SIDDAVEERAPPA.—Mr. Ramappa has raised a very relevant point. Though I did not refer to the programme and policies of the Party to which we belong, I have got every thing ready. I will pass on everything to him. Unfortunately, the clock does not stop for me. Therefore, I will take my time in the course of the Budget speech to refer only to that aspect.

Sri M. RAMAPPA.—Very good, Sir. I hope you will do it in the Budget speech and forget personalities. ರಾಜ್ಯಪಾಲರ ಭಾಷಣದ ವಿಷಯದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ರಾಜ್ಯ ಸರ್ಕಾರದವರು ರಾಜ್ಯ ಸಾಧನೆ ಮಾಡಿರತಕ್ಕ ಹಲವಾರು ವಿಷಯಗಳನ್ನು ಕೂಲಂಕಷವಾಗಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನಾನು ರಾಜ್ಯಪಾಲರನ್ನು ಅಭಿನಂದಿಸುತ್ತೇನೆ. ಮತ್ತು ನಮ್ಮ ಸ್ನೇಹಿತರಾದ ಶ್ರೀಮಾನ್ ಬೊಮ್ಮಾಯಿಯವರು ತಂದಿರತಕ್ಕ ವಂದನಾ ನಿರ್ಣಯಕ್ಕೆ ನಾನು ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಡುತ್ತೇನೆ. ಈ ಸಂದರ್ಭದಲ್ಲಿ ಮುಖ್ಯವಾಗಿ ನಾವು ಆರ್ಥಿಕ ಕ್ಷೇತ್ರದಲ್ಲಿ ರಾಜ್ಯ ಸರ್ಕಾರದವರಾಗಲೀ, ಕೇಂದ್ರ ಸರ್ಕಾರದವರಾಗಲೀ ಜನತೆಯ ಹಿತಕ್ಕಾಗಿ ಜನಗಳ ಜೀವನ ಮಟ್ಟವನ್ನು ಉತ್ತಮಪಡಿಸುವುದಕ್ಕೆ ಮಾಡಿರತಕ್ಕ ಕಾರ್ಯಗಳು ಬಹುಮಟ್ಟಿಗೆ ಸ್ವಾತಂತ್ರ್ಯ ಬಂದ ಮೇಲೆ ಮಾಡಿದ್ದಾರೆ. ಇದು ಕೇವಲ ರಾಜ್ಯ ಸರ್ಕಾರದ ಕ್ಷೇತ್ರದಲ್ಲಿ ನಡೆದದ್ದು ಅಲ್ಲ. ಮುಖ್ಯವಾಗಿ ಇದು ಜನರ ಆರ್ಥಿಕ ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ರಾಜ್ಯಾಂಗದ ಒಂದು ಅಡಿಗಲ್ಲಿನ ಮೇಲೆ, ಯೋಜನಾ ಆಯೋಗದವರು ಹಾಕಿಕೊಟ್ಟಿರತಕ್ಕ ಒಂದು ಹಿನ್ನೆಲೆಯಲ್ಲಿ ಈ ಸಾಧನೆಗಳು ನಡೆದಿವೆ. ಪ್ರಜಾಪ್ರಭುತ್ವದಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸಬೇಕಾದರೆ ಅನೇಕ ಆತಂಕಗಳಿವೆ. ಕಮ್ಯೂನಿಸ್ಟ್ ದೇಶಗಳಲ್ಲಿ ಸಾಧನೆ ಮಾಡಿದ ಹಾಗೆ ನಾವು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ರಾಷ್ಟ್ರದಲ್ಲಿ ನಮಗೆ ಸ್ವಾತಂತ್ರ್ಯ ಬಂದಾಗ ನಮ್ಮ ನಾಯಕರಿಗೆ ಸ್ವಾತಂತ್ರ್ಯದ ಪ್ರೇಮ ಹೆಚ್ಚಾಗಿದ್ದ ಕಾರಣ ರಾಜ್ಯಾಂಗವನ್ನು ತಯಾರುಮಾಡುವಾಗ ಅವರು ಬೇರೆ ರಾಷ್ಟ್ರದ ಪ್ರಜಾಪ್ರಭುತ್ವದಲ್ಲಿ ಯಾವರೀತಿ ರಾಜ್ಯಾಂಗ ಇದೆ ಅದೇರೀತಿಯಲ್ಲಿ ಇಲ್ಲಿಯೂ ಒಂದು ಐಡಿಯಲ್ ಕಾನ್‌ಸ್ಟಿಟ್ಯೂಷನ್ ಮಾಡಬೇಕೆಂದು ವ್ಯಕ್ತಿ ಸ್ವಾತಂತ್ರ್ಯದ ರಾಜ್ಯಾಂಗ ಮಾಡಿದರು. ಆರ್ಥಿಕ ಸ್ವಾತಂತ್ರ್ಯವನ್ನು ಬೆಳೆಸುವುದಕ್ಕೆ ಬೇಕಾಗುವ ದೃಷ್ಟಿ ಅವರಿಗೆ ಇರಲಿಲ್ಲ. ಪ್ರತಿಯೊಂದು ರೀತಿಯ ಹಕ್ಕು ಅಂದರೆ ಪ್ರಾಪರ್ಟಿ ರೈಟ್ಸ್ ಇಂಡಿವಿಜುಯಲ್ ರೈಟ್ಸ್ ಎಲ್ಲಾ ರೈಟ್ಸ್ ಮತ್ತು ಪ್ರಿವಿಲೇಜೆಸ್‌ಗೆ ಹೆಚ್ಚಿಗೆ ಗಮನಕೊಡುವಂಥಾ ಒಂದು ಘಟನೆ ಮಾಡಿರುವ ಕಾರಣ ಯಾವ ಒಬ್ಬ ವ್ಯಕ್ತಿಯನ್ನೂ ಫೋರ್ಸ್ ಮಾಡಿ ಒತ್ತಾಯದಿಂದ ಕೆಲಸ ತೆಗೆದುಕೊಂಡು ಆರ್ಥಿಕ ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಈಗ ಆ ಬಗ್ಗೆ ಸ್ವಲ್ಪಮಟ್ಟಿಗೆ ರೀತಿಂಕ್ ಮಾಡಿದರೆ ಒಳ್ಳೆಯದು ಎಂದು ಅನಿಸುತ್ತದೆ. ಈ ರೀತಿ ನಾವು ಆರ್ಥಿಕ ಪ್ರಗತಿಯನ್ನು ಹೆಚ್ಚಿನ ಮಟ್ಟದಲ್ಲಿ ಸಾಧನೆ ಮಾಡದೆ ಇರುವುದಕ್ಕೆ ನಮ್ಮ ರಾಜ್ಯಾಂಗದಲ್ಲಿ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವನ್ನು ನಮೂದು ಮಾಡದೇ ಇರುವುದು ಮುಖ್ಯ ಕಾರಣ ಎಂದು ಅನಿಸುತ್ತದೆ. ಪ್ಲಾನಿಂಗ್ ಕಮಿಷನ್‌ನವರು ಯೋಜನೆ ತಯಾರು ಮಾಡಿದಾಗ ಇಡೀ ದೇಶದ ಎಲ್ಲಾ ವಿರೋಧ ಪಕ್ಷಗಳವರೂ ಟೀಕೆ ಮಾಡುತ್ತಿದ್ದರು. ಈ ಯೋಜನೆ ಸರಿಯಾಗಿಲ್ಲ, ಇದರಲ್ಲಿ ವ್ಯವಸಾಯಕ್ಕೆ ಪ್ರಾಧಾನ್ಯತೆ ಇಲ್ಲ ಮತ್ತು ಇದರಿಂದ ಹಳ್ಳಿಗಾಡು ಜನರಿಗೆ ಪ್ರಯೋಜನವಾಗುವುದಿಲ್ಲ ಎಂದು ಹೇಳುತ್ತಿದ್ದರು. ಆಮೇಲೆ ನಮ್ಮ ಸರ್ಕಾರದವರು ಪುನರಾಲೋಚನೆ ಮಾಡಿದರು ಮತ್ತು ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ಅವಕಾಶವಾಯಿತು. ಇದಕ್ಕೆಲ್ಲಾ ಮುಖ್ಯವಾಗಿ ಆರ್ಥಿಕ ಮಟ್ಟವು ಸುಧಾರಣೆಯಾಗಬೇಕು. ಹಿಂದೆ ಯಾರಾದರೂ ಯೋಜನೆ ಸರಿಯಾಗಿಲ್ಲವೆಂದು ಹೇಳುವಹಾಗೆ ಇರಲಿಲ್ಲ. ಆದರೆ ಈಗ ಆ ಮನೋಭಾವ ಸರ್ಕಾರಕ್ಕೆ ಇಲ್ಲ. ಇದು ಸರಿಯಾಗಿಲ್ಲ, ಇದು ಒಳ್ಳೇಯದಲ್ಲವೆಂದು ಜನರು ಹೇಳಿದರೆ, ಅಥವಾ ರಾಜಕೀಯ ಪಕ್ಷದವರು ಹೇಳಿದರೆ, ಅದನ್ನು ತಿದ್ದಿಕೊಳ್ಳುವ ನೀತಿಯನ್ನು ಸರ್ಕಾರದವರು ಅನುಸರಿಸಿಕೊಂಡು ನಡೆಯುತ್ತಿದ್ದಾರೆ. ಇತ್ತೀಚೆಗೆ ಏನಾಗಿದೆ ಎಂದರೆ, ಈ ಜನರನ್ನು ಒಲಿಸಿಕೊಳ್ಳುವುದಕ್ಕೆ ಪ್ರತಿಯೊಂದು ರಾಜಕೀಯ ಪಕ್ಷಗಳೂ ಕೂಡ ಸಮಾಜವಾದವನ್ನು ಘೋಷಣೆ ಮಾಡುತ್ತಾ ಹೊರಟಿದ್ದಾರೆ. ಏಕೆಂದರೆ ಈ ಘೋಷಣೆ ಮಾಡದಿದ್ದರೆ ಜನರ ಬೆಂಬಲ ಸಿಗುವುದಿಲ್ಲವೆಂಬ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದಾರೆ. ಆದರೆ ಬರೀ ಒಂದು ಘೋಷಣೆಯಲ್ಲಿ ನಾವು ಬಡತನವನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಿಲ್ಲ. ಬಡತನ ನಿರ್ಮೂಲನ ಆಗಬೇಕಾದರೆ ಕೈಗಾರಿಕಾ ಕ್ಷೇತ್ರದಲ್ಲಿ, ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿಪರವಾದ ಕೆಲಸಗಳು ಆಗಬೇಕು. ನಮಗೆ ಇವತ್ತು ಬೇಕಾದಷ್ಟು ನೈಸರ್ಗಿಕ ಸಂಪತ್ತು ಇದೆ. ಜನತೆಯ ಸಂಪತ್ತು ಇದೆ. ಇವೆಲ್ಲಾ ಇದ್ದರೂ ಹಣವಿಲ್ಲದಿದ್ದರೆ ಯಾವುದೂ

(SRI M. RAMAPPA)

ಸಾಧ್ಯವಿಲ್ಲ. ಆದ್ದರಿಂದ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೋಸ್ಕರ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಆ ಬ್ಯಾಂಕುಗಳಲ್ಲೂ ಕೂಡ ಎಲ್ಲವನ್ನೂ ಮಾಡಿಲ್ಲ. ಇದರ ಜೊತೆಗೆ ಫಾರಿನ್ ಬ್ಯಾಂಕುಗಳನ್ನು ಕೂಡ ರಾಷ್ಟ್ರೀಕರಣ ಮಾಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಬ್ಯಾಂಕ್ ರಾಷ್ಟ್ರೀಕರಣವನ್ನು ನಿಮ್ಮ ಆರ್ಥಿಕ ಮಂತ್ರಿಯವರು ಒಪ್ಪುತ್ತಾರೆಯೇ ?

ಶ್ರೀ ಎಂ. ರಾಮಪ್ಪ.—ತಪ್ಪು ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ. ರಾಷ್ಟ್ರೀಕರಣ ವಾದ ಮೇಲೆ ಅದು ಸರಿಯಾದ ರೀತಿಯಲ್ಲಿ ಕಾರ್ಯಗತವಾಗಬೇಕು. ಯಾರೂ ಇವೊತ್ತಿನ ದಿವಸ ಅದನ್ನು ವಿರೋಧ ಮಾಡುವುದಕ್ಕೆ ಸಾಧ್ಯವಿಲ್ಲ. ಸ್ವತಂತ್ರ ಪಕ್ಷ ಮತ್ತು ಜನಸಂಘ ಕೂಡ ನ್ಯಾಷನಲೈಸ್ ಮಾಡುವುದಕ್ಕೆ ವಿರೋಧ ಮಾಡುವುದಿಲ್ಲ. ಅವರು ಅದನ್ನು ಕಾರ್ಯಗತ ಮಾಡುವುದರಲ್ಲಿ ಸರಿಯಾಗಿರುವುದಿಲ್ಲವೆಂದು ಹೇಳುವುದಷ್ಟೆ ಎಲ್ಲಾ ಪಕ್ಷಗಳಲ್ಲೂ ಪ್ರತಿಗಾಮಿಗಳೂ ಇದ್ದಾರೆ, ಪ್ರಗತಿಗಾಮಿಗಳೂ ಇದ್ದಾರೆ.

ಇನ್ನು ಎಫಿಶಿಯನ್ಸಿ ವಿಚಾರದಲ್ಲಿ ರಾಜ್ಯಪಾಲರು ಹೇಳಿದ್ದಾರೆ. ಆದರೆ ಈಗ ಇಲಾಖೆಗಳಲ್ಲಿ ಇರುವಂತಹ ಎಫಿಶಿಯನ್ಸಿ ಸಾಲದು. ಇದನ್ನು ಹೆಚ್ಚು ಸುಧಾರಣೆ ಮಾಡಬೇಕು. ಸರ್ಕಾರದವರು ಇತ್ತೀಚೆಗೆ ಕ್ವಾಸಿ ಜುಡಿಶಿಯಲ್ ಪವರನ್ನು ಇಟ್ಟುಕೊಂಡಿದ್ದಾರೆ. ಅದು ಗೃಹ ಮಂತ್ರಿಗೆ ಇರಬಹುದು, ಇನ್ನೊಬ್ಬ ಮಂತ್ರಿಗೆ ಇರಬಹುದು. ಈ ರೀತಿ ಕ್ವಾಸಿ ಜುಡಿಶಿಯಲ್ ಪವರ್ಸ್ ಇರುವಾಗ ಅದನ್ನು ಅವರ ಸೆಕ್ರೆಟರಿಗೆ ಡೆಲಿಗೇಟ್ ಮಾಡಬಾರದು. ಸರ್ಕಾರದವರ ಈ ಪವರನ್ನು ಸರಿಯಾಗಿ ಮಂತ್ರಿಯವರೇ ಚಲಾಯಿಸಬೇಕು. ಮಂತ್ರಿಯವರೇ ಪಾರ್ಟಿಯವರನ್ನು ಕರೆದು ಹಿಯರ್ ಮಾಡಬೇಕು. ಹಿಯರ್ ಮಾಡಿ ಆಮೇಲೆ ಸೆಕ್ರೆಟರಿಯವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಆದರೆ ಯಾರಾದರೂ ಆಫೀಸರು ನೋಟ್ ಹಾಕಿದರೆ, ಈ ಕ್ವಾಸಿ ಜುಡಿಶಿಯಲ್ ಪವರ್ಸ್ ಎಕ್ಸರ್‌ಸೈಸ್ ಮಾಡಿದ ಹಾಗೆ ಆಗುವುದಿಲ್ಲ. ಮಂತ್ರಿಯವರೇ ಖುದ್ದು ಮೈಂಡ್ ಅಪ್ಲೈ ಮಾಡಿ ತೀರ್ಮಾನ ಮಾಡಬೇಕು. ಪ್ರತಿಯೊಬ್ಬ ಮಂತ್ರಿಯೂ ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪುಟ 25ರಲ್ಲಿ ಮೈಸೂರು ಪಂಚಾಯತ್‌ರಾಜ್ಯ ಬಿಲ್ ವಿಚಾರ ರಾಜ್ಯಪಾಲರು ಹೇಳಿದ್ದಾರೆ. ಇದನ್ನು ಆದಷ್ಟು ಜಾಗ್ರತೆ ತರುತ್ತೇವೆಂದೂ ಹೇಳಿದ್ದಾರೆ. ಬಹುವರ್ಷಗಳಿಂದ ಈ ಮಸೂದೆ ಇದೆ. ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಹಿಂದೆ ಇತ್ತು. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕೆಂದು ಕೆಲವರು ಹೇಳಬಹುದು. ಆದರೆ ಆ ರೀತಿ ಅದು ಸೆಲೆಕ್ಟ್ ಕಮಿಟಿಗೆ ಹೋಗತಕ್ಕ ಅವಶ್ಯಕತೆ ಇಲ್ಲ. ಅದನ್ನು ಆದಷ್ಟು ಜಾಗ್ರತೆ ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಹಕಾರ ಸಂಘಗಳು ಅಂದರೆ, ಇದು ಕಾಂಗ್ರೆಸ್ ಪಕ್ಷದವರ ಗುತ್ತಿಗೆ ಎಂದು ಹೇಳುತ್ತಿದ್ದಾರೆ. ಸಹಕಾರ ಸಂಘಗಳಲ್ಲಿ ಎಲ್ಲಾ ಪಕ್ಷಗಳ ಹೆಗ್ಗಣಗಳೂ ಇದ್ದಾವೆ. ಇದರಲ್ಲಿ ಬರೇ ದಕ್ಷತೆ ಒಂದು ಇದ್ದರೆ ಸಾಲದು. ಅಲ್ಲಿ ನ್ಯಾಯ ನಿಷ್ಠುರತೆ ಎಲ್ಲಾ ಇರಬೇಕು. ಬರೇ ಮಂತ್ರಿಯವರು ದಕ್ಷರಾಗಿದ್ದರೆ ಸಾಲದು. ಸಹಕಾರ ಸಂಘಗಳ ಅಪೆಕ್ಸ್ ಬ್ಯಾಂಕ್ ಏನಿದೆ, ಅದರ ಛೇರ್‌ಮನ್ ಒಬ್ಬನೇ ಶಾಶ್ವತವಾಗಿರುತ್ತಾರೆ. ಅದು ಹೇಗೆ ಸಾಧ್ಯ ? ಅದನ್ನೆಲ್ಲಾ ತಪ್ಪಿಸಬೇಕು. ಬಿ. ಎಲ್. ಗೌಡರ ಕಮಿಟಿಯಲ್ಲಿ ಏನು ಹೇಳಿದ್ದಾರೋ ಅದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟಿ, ಅವರು ಕೂಡ ದಕ್ಷತೆಯಿಂದ ತನ್ನ ಕೆಲಸ ಮಾಡುತ್ತಾರೆಂಬುದರಲ್ಲಿ ನನಗೆ ಸಂಶಯ ಇದೆ. ಅವರು ಅಪೆಕ್ಸ್ ಬ್ಯಾಂಕಿನವರ ಸ್ನೇಹಿತರೇ ಆಗಿರುತ್ತಾರೆ. ಆದ್ದರಿಂದ ಇದನ್ನು ಮಾನ್ಯ ಮುಖ್ಯ ಮಂತ್ರಿಯವರು ಗಮನದಲ್ಲಿಟ್ಟುಕೊಂಡು ಸಹಕಾರ ಕ್ಷೇತ್ರವನ್ನು ಬಹಳ ಉತ್ತಮಪಡಿಸಬೇಕು. ಏಕೆಂದರೆ ಪ್ರೈವೇಟ್ ಸೆಕ್ಟರ್ ಬೇಡ, ಅಂದಾಗ ಪಬ್ಲಿಕ್ ಸೆಕ್ಟರ್ ಬರುತ್ತದೆ. ಕೊನೆಯ ಪಕ್ಷ ಕೋಆಪರೇಟಿವ್ ಸೆಕ್ಟರಿನಲ್ಲಾದರೂ ಅನೇಕ ಕಾರ್ಯಗಳನ್ನು ಸಾಧನೆ ಮಾಡಬೇಕಾಗಿರುವುದರಿಂದ ಇಲ್ಲಿ ಪ್ರಮಾಣಿಕರು, ದಕ್ಷರು ಇಲ್ಲದಿರುವುದರಿಂದ ಪಬ್ಲಿಕ್ ಸೆಕ್ಟರ ಫೈಲ್ ಆದಾಗ ಕೊನೆಗೆ ಪ್ರೈವೇಟ್ ಸೆಕ್ಟರೇ ಬರುವಂತಹ ಸಂದರ್ಭ ಬರುತ್ತದೆ. ಆದಕ್ಕೋಸ್ಕರ ಅಲ್ಲಿಗೆ ಬಹಳ ಪ್ರಾಮಾಣಿಕರಾಗಿರತಕ್ಕವರನ್ನು ರಾಜ್ಯ ಸರ್ಕಾರದ ಪರವಾಗಿ ಹಾಕಬೇಕು. ಬಿ. ಎಲ್. ಗೌಡ ಕಮಿಟಿಯ ವರದಿಯನ್ನು ಒಪ್ಪಿಕೊಂಡು ಅದರ ಬಗ್ಗೆ ಒಂದು ಮಸೂದೆಯನ್ನು ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

5-00 P.M.

ಇನ್ನು ರಾಜ್ಯಪಾಲರು ಕೆಲವು ಸ್ಟ್ಯಾಚುಟರಿ ಕಾರ್ಪೊರೇಷನ್ಸ್ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮುಂಚೆ ಕೆಲವು ಇಲಾಖೆಗಳು ಕೆಲವು ಕ್ಷೇತ್ರಗಳಲ್ಲಿದ್ದರೂ ಈಗ ಅವು ಸ್ಟ್ಯಾಚುಟರಿ ಕಾರ್ಪೊರೇಷನ್ನುಗಳಾಗಿವೆ. ಕೆಲವು ಲಿಮಿಟೆಡ್ ಕನ್‌ಸರ್ನ್ಸ್ ಆಗಿವೆ. ಅವು ನೇರವಾಗಿ ಸರ್ಕಾರದ ಹತೋಟಿಯಲ್ಲಿಲ್ಲ. ಅವು ಅಟಾನಮಸ್ ಬಾಡಿ, ಸರ್ಕಾರದವರು ಅದರಲ್ಲಿ ಪ್ರವೇಶ ಮಾಡುವುದಕ್ಕಾಗುವುದಿಲ್ಲವೆಂದು ಇದೆ. ಇದು ಬಹಳ ತಪ್ಪು. ಕಾನೂನು ಪ್ರಕಾರ ಅವು ಅಟಾನಮಸ್ ಬಾಡಿಯಾಗಿದ್ದರೂ ಅನೇಕ ಸಂದರ್ಭಗಳಲ್ಲಿ ಅವರನ್ನು ಸರ್ಕಾರ ಹತೋಟಿಯಲ್ಲಿಡ ಬಹುದು. ಅದು ಮಂತ್ರಿಗಳ ದಕ್ಷತೆಯಮೇಲೆ ಹೋಗುತ್ತದೆ. ಅಟಾನಮಸ್ ಬಾಡಿಗಳಲ್ಲಿ ಏನೇನು ನಡೆಯುತ್ತದೆಂಬುದನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ. ಉದಾಹರಣೆಗೆ ತೆಗೆದುಕೊಂಡರೆ, ಭದ್ರಾವತಿಯಲ್ಲಿ ಏನು ನಡೆಯಿತೆಂಬುದು ಎಲ್ಲರಿಗೂ ಗೊತ್ತಿದೆ. ಅಲ್ಲಿ ಕೋಟ್ಯಾಂತರ ರೂಪಾಯಿಗಳ ಅಪವ್ಯಯವಾಗಿದೆಯೆಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿಯೇ ವರದಿಮಾಡಿದ್ದಾರೆ. ಅದನ್ನು ನಾವು ಪ್ರತ್ಯಕ್ಷವಾಗಿ ನೋಡಿದ್ದೇವೆ. ಖಂಡಿತವಾಗಿ ಅದರ ಆಡಳಿತದಮೇಲೆ ಅನೇಕರಿಗೆ ಅಸಮಾಧಾನವಿದೆ. ಮತ್ತೆ ಪುನಃ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯವರನ್ನು ಇದರ ಬಗ್ಗೆ ತನಿಖೆಮಾಡ ಬೇಕೆಂದು ರಿಕ್ವೆಸ್ಟ್‌ಮಾಡುತ್ತಿದ್ದಾರೆ. ಇಲ್ಲಿ ಹಿಂದೆ ಒಬ್ಬ ಯಾರೋ ಇನ್‌ಫ್ಲುಯನ್ಸ್ ಅಧಿಕಾರಿ ಇದ್ದು ಇಷ್ಟು ಕೋಟ್ಯಾಂತರ ರೂಪಾಯಿಗಳು ಅಪವ್ಯಯವಾಗುವುದಕ್ಕೆ ಅವಕಾಶವಾಗಿದೆ. ಇದಕ್ಕೆ ಯಾವರೀತಿ ನೀವು ಅವಕಾಶ ಕೊಟ್ಟಿದ್ದೀರಿ? ಮಾನ್ಯ ಶ್ರೀ ಸಿದ್ದವೀರಪ್ಪನವರು ಮತ್ತು ಶ್ರೀ ಶಿವಪ್ಪ ನವರು ಎಲ್ಲದಕ್ಕೂ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ಹೇಳುತ್ತಾರೆ. ಅದನ್ನು ನಾನು ಒಪ್ಪುವುದಿಲ್ಲ. ಜನತಾ ಪ್ರತಿನಿಧಿಗಳು ಅದನ್ನು ತನಿಖೆಮಾಡಬೇಕು. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯವರು ಅಟಾನಮಸ್ ಬಾಡಿಯಂತಹವರ ಮೇಲೆ ಹತೋಟಿಯನ್ನು ಹೆಚ್ಚಿಗೆ ಇಟ್ಟುಕೊಳ್ಳ ಬೇಕು.

ಕೊನೆಯದಾಗಿ, ರಾಜ್ಯಪಾಲರು ತಮ್ಮ ಭಾಷಣದ ಕೊನೆಯ ಪುಟದಲ್ಲಿ ಒಂದು ಮಾತನ್ನು ಪ್ರಸ್ತಾಪಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಧಕ್ಕೆ ಬಂದಿದೆ, ಅದನ್ನು ಯಶಸ್ವಿಯಾಗಿ ಮಾಡಬೇಕಾದುದು ನಿಮ್ಮ ಕರ್ತವ್ಯ, ಪ್ರಜಾಪ್ರಭುತ್ವ ಕೇಂದ್ರದಲ್ಲಿ ಸ್ವಲ್ಪಮಟ್ಟಿಗೆ ತೊಂದರೆಗೆ ಈಡಾಗಿದೆ ಯೆಂದು ಹೇಳಿದ್ದಾರೆ. ಮಾನ್ಯ ಶ್ರೀ ಶಿವಪ್ಪನವರು ಇದನ್ನು ಪ್ರಸ್ತಾಪಮಾಡಿದ್ದಾರೆ. ರಾಜ್ಯ ಪಾಲರು ಇದನ್ನು ಹೇಳುವುದಕ್ಕೆ ಕಾರಣ ಕೇಂದ್ರದಲ್ಲಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲದೇ ಇರತಕ್ಕ ಪಕ್ಷಗಳ ಬೆಂಬಲದಮೇಲೆ ಆ ಸರ್ಕಾರ ನಿಂತಿರುತ್ತದೆ. ಅದರಿಂದಾಗಿ ರಾಜ್ಯಪಾಲರು ಈ ರೀತಿ ಪ್ರಸ್ತಾಪಮಾಡಿರುವುದು. ಆದರೆ ಕೇಂದ್ರದಲ್ಲಿರತಕ್ಕ ಸರ್ಕಾರವನ್ನು ಉರುಳಿಸಬೇಕೆಂದು ಪ್ರಯತ್ನಮಾಡುವುದು ನನಗೆ ಒಪ್ಪಿಗೆ ಇಲ್ಲ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ನಮ್ಮ ಪಕ್ಷ ದವರು ಕೇಂದ್ರಸರ್ಕಾರಕ್ಕೆ ಬೆಂಬಲ ಕೊಡಬೇಕು. ಕೇಂದ್ರಸರ್ಕಾರದವರು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲದೇ ಇರುವ ಪಕ್ಷಗಳ ಕೈಗೆ ಸಿಲುಕಬಾರದು. ಕೇಂದ್ರಸರ್ಕಾರದಲ್ಲಿ ಪ್ರಧಾನಮಂತ್ರಿ ಯವರು ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಬರುವುದಕ್ಕೆ ಪ್ರಯತ್ನಪಡುತ್ತಾರೆಂಬ ಸಂಪೂರ್ಣ ಭರವಸೆ ನನಗಿದೆ. ಹಲವು ಬಾರಿ ಇಂಟಗ್ರೇಟೆಡ್ ಏರಿಯಗಳಲ್ಲಿಯೇ ಹೆಚ್ಚು ಕೆಲಸಗಳು ಆಗುತ್ತಿದೆ, ಹಣ ವಿಪರೀತವಾಗಿ ಅಲ್ಲಿ ಖರ್ಚಾಗುತ್ತಿದೆಯೆಂದು ಮಾನ್ಯ ಶ್ರೀ ನಂಜೇಗೌಡರು ಮತ್ತು ಮಾನ್ಯ ಶ್ರೀ ಹಚ್ಚಶಾಸ್ತ್ರಿಗೌಡರು ಪ್ರಸ್ತಾಪಮಾಡಿದ್ದಾರೆ. ಇನ್ನು ಕೆಲವರಲ್ಲಿ ಈ ಮೈಸೂರನ್ನು ಇಭ್ಭಾಗ ಮಾಡಬೇಕೆಂಬ ಮಾತು ಇತ್ತು. ಅದನ್ನು ಈಗ ಬಿಟ್ಟಿದ್ದಾರೆ, ಬಹಳ ಸಂತೋಷದ ವಿಷಯ. ಇವರಿಗೂ ಅವರಿಗೂ ಸಂಪರ್ಕವಿಲ್ಲದೇ ಇರುವ ದೃಷ್ಟಿಯಿಂದ ಅವರು ಈ ರೀತಿ ಹೇಳುತ್ತಾರೆ ಒಂದು ವೇಳೆ ಅವರಿಗೂ ಇವರಿಗೂ ಹೆಚ್ಚು ಸಂಪರ್ಕವಿದ್ದಿದ್ದರೆ, ಒಂದು ರೀತಿಯ ಸಾಮರಸ್ಯ ಬೆಳದಿದ್ದರೆ ಯಾರೂ ಈ ರೀತಿ ಹೇಳುತ್ತಿರಲಿಲ್ಲ.

ಇಷ್ಟು ಹೇಳಿ, ನನಗೆ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣ ಮೈಸೂರು ಸರ್ಕಾರದ ಕಾರ್ಯಸಾಧನೆಯ ವಿಮರ್ಶನಾರಹಿತವಾದ ಹಾಗೂ ಪ್ರಶಂಸನಾಪರವಾದ ಪ್ರವಚನವಾಗಿದೆ. ರಾಜ್ಯಪಾಲರು ಅವರ ಭಾಷಣದ ಕೊನೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಬಿಟ್ಟರೆ ಉಳಿದಿದ್ದು ರಸರಹಿತವಾಗಿದೆ. ಏಕೆಂದರೆ ಅವರು ಭಾಷಣದ ಕೊನೆಯಲ್ಲಿ ದೇಶದಲ್ಲಿರತಕ್ಕ ಪ್ರಜಾಪ್ರಭುತ್ವದ ಸಂಪ್ರದಾಯಗಳು ವಿಷಮಕಾಲದಲ್ಲಿವೆ, ವಿಧಾನಮಂಡಲದ ಎರಡು ಸದನಗಳ ಸದಸ್ಯರ ಸೂಕ್ಷ್ಮ ವಿವೇಚನಾ ಶಕ್ತಿಯೂ, ಅವರ ಸಹಿಷ್ಣುತೆಯೂ, ಅವರ ನೈತಿಕ

(ಶ್ರೀ ಕೆ. ಪಿ. ನಾಡಗೌಡ)

ಮೌಲ್ಯನಿಷ್ಠೆಯೂ, ಈ ವಿಷಮಕಾಲದಲ್ಲಿ ಭಾರತದ ಪ್ರಜಾಪ್ರಭುತ್ವದ ಪ್ರಯೋಗದ ಅಳಿವು, ಉಳಿವುಗಳನ್ನು ನಿರ್ಣಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದ್ದಾರೆ. ಇದನ್ನು ಪಾರ್ಲಿಮೆಂಟ್ ಸದಸ್ಯರಿಗೆ ಉಪದೇಶವೆಂದು ರಾಜ್ಯಪಾಲರು ಭಾಷಣ ಮಾಡಿಲ್ಲ. ಇದನ್ನು ನಮ್ಮ ವಿಧಾನ ಸಭೆಯ ಮಾನ್ಯ ಸದಸ್ಯರನ್ನು ಕುರಿತು ಇಂಥಾ ಉಪದೇಶಗಳನ್ನು ಮಾಡಿದ್ದಾರೆಂದು ತಾವೆಲ್ಲರೂ ತಿಳಿದುಕೊಳ್ಳತಕ್ಕದ್ದು. ನಮ್ಮ ರಾಜ್ಯದಲ್ಲಿ ನಡೆದುದೇನು, ಪ್ರಗತಿಯಾಗುವುದಕ್ಕೆ ಸಾಕಷ್ಟು ಆಗದೇ ಇರುವುದಕ್ಕೆ ಕಾರಣವೇನು ಎಂಬ ಮಾತನ್ನು ಉಪದೇಶಕರವಾದ ಮಾತಿನಲ್ಲಿ ರಾಜ್ಯಪಾಲರು ಬಹು ಸೂಕ್ಷ್ಮವಾಗಿ ತಿಳಿಸಿದ್ದಾರೆ. Democracy can function only through the mutual adjust ent of the different political parties having different outlook. ಪ್ರಜಾಪ್ರಭುತ್ವ ಮುಂದುವರಿಸು ಹೋಗಬೇಕಾಗಿದ್ದರೆ, ಅದು ಚೆನ್ನಾಗಿ ನಡೆಯುಬೇಕಾಗಿದ್ದರೆ, ಪರಸ್ಪರ ನಂಬಿಕೆ ವಿಶ್ವಾಸ ಆಧಾರವಾಗಿ ಇಟ್ಟುಕೊಂಡಿರತಕ್ಕ ರಾಷ್ಟ್ರದೃಷ್ಟಿ ರಾಜಕೀಯ ಪಕ್ಷಗಳಲ್ಲಿರಬೇಕು. ಆಗ ಪ್ರಜಾಪ್ರಭುತ್ವ ನಡೆಯುತ್ತದೆಯೇ ಹೊರತು ಅಂತಹ ಭಾವನೆ ರಾಜಕೀಯ ಪಕ್ಷಗಳಲ್ಲಿ ಇಲ್ಲದೇ ಹೋದಾಗ ಪ್ರಜಾಪ್ರಭುತ್ವ ನಡೆಯುವುದಿಲ್ಲವೆಂಬ ಮಾತನ್ನು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಈಗ ನಮ್ಮ ದೇಶದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಒಂದು ಗಂಡಾಂತರವಿದೆಯೆಂದು ಹೇಳಿದರು. ಸೇವಾ ಮನೋಭಾವನೆಯನ್ನು ಸಂಘಟಿತಮಾಡಿಕೊಂಡು, ಕಾಂಗ್ರೆಸ್ಸಿಗೆ ಸ್ವಾತಂತ್ರ್ಯ ಸಿಕ್ಕಿದಮೇಲೆ, ಅದು ಅಧಿಕಾರಕ್ಕೆ ಬಂದಾಗ, ಮಾತ್ರ ದುರುಪಯೋಗವಾಗುತ್ತಿಯೆಂದು ಖಾತ್ರಿ ಮಾಡಿಕೊಂಡಮೇಲೆ, ಮಹಾತ್ಮ ಗಾಂಧಿಯವರು ಅವರು ಸಾಯುವುದಕ್ಕೆ ಮುಂಚಿತವಾಗಿ ಒಂದೆರಡು ವರ್ಷಗಳ ಕೆಳಗೆ ಅಥವಾ ಒಂದೆರಡು ತಿಂಗಳುಗಳ ಕೆಳಗೆ ಕಾಂಗ್ರೆಸ್ಸನ್ನು ವಿಸರ್ಜನೆಮಾಡಿ ರಾಜಕೀಯದಲ್ಲಿ ಅಭಿರುಚಿ ಇರುವವರು ರಾಜಕೀಯ ಪಕ್ಷದಲ್ಲಿ ಸೇರಕೊಳ್ಳಿ ಎಂಬ ಉಪದೇಶ ಮಾತುಗಳನ್ನು ಬರೆದು ಇಟ್ಟಿದ್ದಾರೆ. ಹಾಗೆ ಮಾಡದೆ ನನ್ನ ಜೀವಮಾನದಲ್ಲಿ ನನಗಿಂತಲೂ ಬೇರೆ ಯಾರೂ ಇಲ್ಲವೆಂದು ಹೇಳಿದರೆ, ಅಂತಹವರನ್ನು ಜನರು ಹಿಡಿದುಕೊಂಡು ಹಾಕುವ ಕಾಲ ಈಗ ಬಂದಿದೆ. ಆಗ A third party will con e to power ಎಂಬುದಾಗಿ ಮಹಾತ್ಮ ಗಾಂಧಿಯವರು ಹೇಳಿದ್ದು ಇವತ್ತಿನ ಜೀವನದ ಈ ವರ್ಷದಲ್ಲಿ ಅದು ಸತ್ಯವಾಗಿ ಪರಿಣಮಿಸುತ್ತಾ ಇದೆ. ಅದರ ಫಲವಾಗಿ ನಮ್ಮ ರಾಜ್ಯದಲ್ಲಿಯೂಕೂಡ ಆಡಳಿತ ಕಾಂಗ್ರೆಸ್, ಮತ್ತು ವಿರೋಧಿ ಕಾಂಗ್ರೆಸ್ ಅಥವಾ ಸಂಸ್ಥಾ ಕಾಂಗ್ರೆಸ್ ಎಂದು ಆಯಿತು. ಈ ರಾಜ್ಯದಲ್ಲಿರುವ ಆಡಳಿತ ಕಾಂಗ್ರೆಸ್‌ಗೂ ಮತ್ತು ಕೇಂದ್ರದಲ್ಲಿರುವ ಆಡಳಿತ ಕಾಂಗ್ರೆಸ್‌ಗೂ ಯಾವ ರೀತಿಯ ಸಂಬಂಧವೂ ಇಲ್ಲ ಎನ್ನುವಂಥ ರೀತಿಯಲ್ಲಿ ಇವೆ. ಈ ಪ್ರಕಾರವಾಗಿ ಈ ಕಾಂಗ್ರೆಸ್ ಸಂಸ್ಥೆಯು ಛಿದ್ರ ವಿಛಿದ್ರವಾಗಿ ಒಡೆದುಹೋಗಿದೆ. ಒಂದು ದೇಶ ದೊಡ್ಡದು ಎಂಬುದನ್ನು ಯಾವ ರೀತಿ ಕಂಡುಹಿಡಿಯಬೇಕು ಎಂಬ ಬಗ್ಗೆ ರೆಸ್ಕಿನ್ ಎಂಬಾತ ಈ ರೀತಿ ಹೇಳಿದ್ದಾನೆ: "ಯಾವ ದೇಶದಲ್ಲಿ ಶಿಸ್ತು ಸಂಯಮ ಮತ್ತು ನೀತಿಸಂಪನ್ನರಾದ ಜನರು ಹೆಚ್ಚಿನ ಪ್ರಮಾಣದಲ್ಲಿ ಇರುತ್ತಾರೋ ಅಂತಹ ದೇಶ ದೊಡ್ಡದಾಗಿರುತ್ತದೆ" ಎಂಬುದಾಗಿ. ಒಂದು ರಾಜಕೀಯ ಪಕ್ಷ ಇವತ್ತು ಆಡಳಿತದಲ್ಲಿ ಇರಬಹುದು, ನಾಳೆ ಹೋಗಬಹುದು ಅದು ಮುಖ್ಯವಾದುದಲ್ಲ. ಆಡಳಿತದಲ್ಲಿರುವ ಮನುಷ್ಯರು ತಮ್ಮ ವ್ಯಕ್ತಿತ್ವವನ್ನು ಕೆಡಿಸಿಕೊಳ್ಳದೆ ತಮ್ಮ ಪ್ರತಿಷ್ಠೆಯನ್ನು ಉಳಿಸಿಕೊಂಡು ದೇಶಕ್ಕೆ ಉಪಯುಕ್ತವಾದ ಕೆಲಸಗಳನ್ನು ಮಾಡುವುದು ಮುಖ್ಯ. ಈ ರೀತಿ ಒಳ್ಳೆಯ ಕೆಲಸಗಳನ್ನು ಮಾಡಿದರೆ ಆದರ್ಶಪುರುಷರು ಎಂಬ ಹೆಸರನ್ನು ಗಳಿಸುವುದೇ ಅಲ್ಲದೆ ಸಮಾಜದಲ್ಲಿ ಗೌರವ ಸ್ಥಾನವೂ ಸಹ ಸಿಗುತ್ತದೆ. ನಾವೇ ಅಧಿಕಾರದಲ್ಲಿ ಮುಂದುವರೆಯುತ್ತೇವೆ ಎಂಬ ಹಂಬಲವನ್ನು ಇಟ್ಟುಕೊಳ್ಳದೆ ಕೆಲಸ ಮಾಡಬೇಕು. ಇದನ್ನು ಬಿಟ್ಟು ಅಧಿಕಾರದಲ್ಲಿ ಇದ್ದವರು ತಮ್ಮ ಹಸ್ತಕರನ್ನು ಅವರು ಯಾವ ತಪ್ಪು ಮಾಡಿದ್ದರೂ ಕೂಡ ಅದನ್ನು ಮುಚ್ಚಿ ಅವರನ್ನು ಉಳಿಸಿಕೊಂಡು ಹೋಗುತ್ತಿದ್ದರೆ ಈ ಪ್ರಜಾಪ್ರಭುತ್ವಕ್ಕೆ ಗಂಡಾಂತರ ತಪ್ಪಿದ್ದಲ್ಲ. ಇದನ್ನು ಆಡಳಿತ ಪಕ್ಷದವರು ಮೊದಲು ಅರಿತುಕೊಳ್ಳಬೇಕು. ನಾವು ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ, ಅದನ್ನು ಸಾಧಿಸಿದ್ದೇವೆ, ಇದನ್ನು ಸಾಧಿಸಿದೇವೆ ಎನ್ನುವ ಮಾತಿನ ಪಟ್ಟಿಯನ್ನೇ ತಯಾರು ಮಾಡಿ ಅದನ್ನು ರಾಜ್ಯಪಾಲರ ಬಾಯಿಂದ ಓದಿಸಿಬಿಟ್ಟಿದಾರೆ. ಇವತ್ತು ನಮ್ಮ ರಾಜ್ಯದಲ್ಲಿ ತರುಣರು ಮತ್ತು ಉತ್ಸಾಹಶಾಲಿಗಳಾದಂಥ ಮುಖ್ಯಮಂತ್ರಿಗಳು ಮತ್ತು ಅರ್ಥಿಕ ಮಂತ್ರಿಗಳು ಇದ್ದಾರೆ. ನಮ್ಮ ರಾಜ್ಯದ ಭವಿಷ್ಯವನ್ನು ರೂಪಿಸುವ ಕೆಲಸದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ ಎನ್ನುವ ಮಾತನ್ನು ಇವರು ಅರಿತುಕೊಳ್ಳಬೇಕು ಇದೇ ಮಂತ್ರಿಮಂಡಲದಲ್ಲಿರುವ ಇಬ್ಬರು ಮಂತ್ರಿಗಳು ಗಾಂಧಿ ಶತಮಾನೋತ್ಸವದ ವರ್ಷದಲ್ಲಿ ನಮ್ಮ ಕ್ಷೇತ್ರದಲ್ಲಿ ಒಂದು ದಿವಸ ಏನು ಮಾಡಿದರು ಎಂಬುದನ್ನು ಉದಾಹರಣೆಗಾಗಿ ಹೇಳುತ್ತೇನೆ. ಶ್ರೀ ಎ. ಎಂ. ಪಾಟೀಲರು

ಮತ್ತು ಶ್ರೀ ಪಿ. ಎಂ. ನಾಡಗೌಡರು ಮುಂಜಾನೆ 9 ಗಂಟೆಯಿಂದ ಹಿಡಿದು ಮಧ್ಯಾಹ್ನ 12 ಗಂಟೆಯೊಳಗೆ ಸುಮಾರು 21 ಶಾಲ ಕಟ್ಟಡಗಳನ್ನು ಉದ್ಘಾಟನೆ ಮಾಡಿದ್ದಾರೆ. ಅದು ಯಾವ ರೀತಿ ಮಾಡಿದರು ಎಂದರೆ ಮುಂದೆ ಒಂದು ಜೀಪಿನಲ್ಲಿ ನಾಲ್ಕು ಜನ ಬ್ಯಾಂಡ್ ಬಾರಿಸುವವರು ಇದ್ದರೆ, ಇನ್ನೊಂದರಲ್ಲಿ ಈ ಮಂತ್ರಿಗಳು ಆ ಸ್ಥಳದ ಪಂಚಾಯಿತಿ ಅಧ್ಯಕ್ಷರು ಕುಳಿತುಕೊಂಡು ಹಳ್ಳಿಯಿಂದ ಹಳ್ಳಿಗೆ ಹೋಗಿ ಕೆಲವೇ ಗಂಟೆಗಳಲ್ಲಿ 21 ಶಾಲೆಗಳನ್ನು ಉದ್ಘಾಟನೆ ಮಾಡಿದ್ದಾರೆ. ಜಾಲಿಗಟ್ಟಿ ಎಂಬ ಹಳ್ಳಿಗೆ ಶಾಲೆಯನ್ನು ಉದ್ಘಾಟನೆ ಮಾಡಲು ಈ ಮಂತ್ರಿಗಳು ಬಂದಾಗ ಬ್ಯಾಂಡ್ ಬಾರಿಸುವ ನಾಲ್ಕು ಜನ ಬಿಟ್ಟರೆ ಆ ಹಳ್ಳಿಯ ಒಬ್ಬರೂ ಕೂಡ ಬಂದಿರಲಿಲ್ಲ. ವಿರೋಧಪಕ್ಷದಲ್ಲಿ ಸಹಕಾರ ಭಾವನೆ ಇರಬೇಕು ಎಂದು ಈ ಸರ್ಕಾರದವರು ಹೇಳುತ್ತಿರುತ್ತಾರೆ. ಆದರೆ ವಿರೋಧ ಪಕ್ಷದ ಸದಸ್ಯರಿಗೆ ಅವರ ಕ್ಷೇತ್ರಕ್ಕೆ ಮಂತ್ರಿಗಳು ಹೋದಾಗ ಯಾವ ರೀತಿ ಸಹಕಾರ ಕೊಡಬೇಕು ಎಂಬುದು ಮಾತ್ರ ಗೊತ್ತಿರುವುದಿಲ್ಲ. ವಿರೋಧಪಕ್ಷದ ಸದಸ್ಯರ ಸಂಗಡ ಕೆಲವು ಮಂತ್ರಿಗಳು ವರ್ತಿಸುವ ರೀತಿಯನ್ನು ನೋಡಿದರೆ ಇವರ ಮುಖ ನೋಡಬಾರದು ಎಂದು ಅನ್ನಿಸುತ್ತದೆ. ಮುಖ್ಯಮಂತ್ರಿಗಳೇನಾದರೂ ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡಲು ಬರುತ್ತಾರೆ, ಯಾವುದಾದರೂ ಉದ್ಘಾಟನೆ ಮಾಡುತ್ತಾರೆ ಎನ್ನುವ ವಿಚಾರವನ್ನು ಸ್ಥಾನೀಕ ಮುಖಂಡರಿಂದ ಶ್ರೀಮಾನ್ ನಾಡಗೌಡರು ತಿಳಿದುಕೊಂಡು, ಅವರಿಗೆ ಹೇಳುತ್ತಾರೆ, ಸ್ಥಳದ ಎಂ. ಎಲ್. ಎ. ಅವರನ್ನು ಅಧ್ಯಕ್ಷತೆಗೆ ಕರೆಯಬೇಡಿ, ನಾನು ಬಂದು ಅಧ್ಯಕ್ಷತೆ ವಹಿಸುತ್ತೇನೆ ಎಂಬುದಾಗಿ. ಬಾಗಲಕೋಟೆ ಬಾದಾಮಿ ಕ್ಷೇತ್ರಗಳಲ್ಲಿ ಏನಾದರೂ ಉದ್ಘಾಟನಾ ಕಾರ್ಯಕ್ರಮ ಇದ್ದರೆ ಅಲ್ಲಿಯ ಸ್ಥಳದ ಎಂ. ಎಲ್. ಎ. ಗಳು ಅಧ್ಯಕ್ಷತೆ ವಹಿಸಿದರೆ, ಮಂತ್ರಿಗಳು ಉದ್ಘಾಟಕರಾಗಿರುತ್ತಾರೆ. ಅಷ್ಟೇ ಮುಧೋಳ್ ಕ್ಷೇತ್ರದಲ್ಲಿ ಆದರೆ ಜಾತೀಯತೆ ಬರುತ್ತದೆ. ನಮ್ಮವರು ಸೇರಿಕೊಂಡರೆ ಏನಾಗಿಬಿಡುತ್ತದೋ ಎಂಬ ಭಾವನೆ ಬಂದು ಬಿಡುತ್ತದೆ. ಜಾತಿಯ ವಿಚಾರ ತೆಗೆದುಕೊಂಡರೆ ನಾನೇನು ಯಾರಿಗೂ ಕಡಿಮೆ ಇಲ್ಲ. ಆದರೆ ಈ ಸಹಕಾರ ಮಂತ್ರಿಗಳು ನನ್ನ ಕ್ಷೇತ್ರದಲ್ಲಿ ನನ್ನ ಮರ್ಯಾದೆಯನ್ನು ಕಡಿಮೆ ಮಾಡಬೇಕು ಎಂಬ ಭಾವನೆಯಿಂದ ಈ ರೀತಿ ವರ್ತಿಸುತ್ತಿದ್ದಾರೆ. ಇದನ್ನೇ ಮುಂದುವರಿಸಿದರೆ ನನ್ನ ಕ್ಷೇತ್ರದ ಜನರು ಈ ಮಂತ್ರಿಗಳ ಬಗ್ಗೆ ಮರ್ಯಾದೆ ಇಟ್ಟುಕೊಂಡಿರುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ: ''ಶಿಕ್ಷಣದ ಗುಣ ಪ್ರಮಾಣವನ್ನು ಉತ್ತಮಪಡಿಸುವುದಕ್ಕಾಗಿ ಹಲವಾರು ಯೋಜನೆಗಳನ್ನು ಕೈಕೊಳ್ಳಲಾಗಿದೆ. ತರಬೇತಿ ಹೊಂದಿದ 500 ಪದವೀಧರ ಶಿಕ್ಷಕರನ್ನು ಮಾದರಿ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರಾಗಿ ನೇಮಿಸಲಾಗಿದೆ'' ಎಂಬುದಾಗಿ. ಇದು ಬಹಳ ಮಹತ್ವದ ವಿಷಯ. ಅದೇ ಬಿಜಾಪುರ ಜಿಲ್ಲೆಯಲ್ಲಿ ಏನು ನಡೆದಿದೆ ಎಂಬುದು ಬಹಳ ಮಹತ್ವದ ಅಂಶವಾಗಿದೆ. ಈ ಒಂದು ಯೋಜನೆ ಇಡೀ ರಾಜ್ಯಕ್ಕೆ ಅನ್ವಯವಾಗಿದ್ದರೆ ನಮ್ಮ ಬಿಜಾಪುರ ಜಿಲ್ಲೆಯ ಕೆಲವು ಕ್ಷೇತ್ರಗಳಿಗೆ ಅನ್ವಯವಾಗುವುದಕ್ಕೆ ಮಂತ್ರಿಗಳು ಅಡ್ಡಿ ಬಂದಿದ್ದಾರೆ. ಬಾಗಲಕೋಟೆ, ಮುಧೋಳ್ ಮತ್ತು ಬಾದಾಮಿ ಈ ಮೂರು ಸ್ಥಳಗಳಿಗೂ ಕೂಡ ಈ ಹೊಸ ಯೋಜನೆಯನ್ನು ಜಾರಿಗೆ ತರಬೇಕೆಂದು ಸರ್ಕಾರದವರು ಅಭಿಪ್ರಾಯ ಪಟ್ಟಾಗ, ಶ್ರೀಮಾನ್ ನಾಡಗೌಡರ ಹಸ್ತಕರೊಬ್ಬರು ಅಂದರೆ ಈ ಮಂತ್ರಿಗಳ ಯೋಗ್ಯ ಮತ್ತು ಅಯೋಗ್ಯ ಕೆಲಸಗಳನ್ನು ಮಾಡಿಕೊಡುತ್ತಿದ್ದ ಒಬ್ಬ ಉಪಾಧ್ಯಾಯರು ಪದವೀಧರರಲ್ಲದ ಕಾರಣ, ಅವರನ್ನು ಆ ಜಾಗದಿಂದ ವರ್ಗ ಮಾಡುವುದನ್ನು ತಪ್ಪಿಸಲು, ವಿದ್ಯಾಮಂತ್ರಿಗಳು ಮತ್ತು ಉಪಮಂತ್ರಿಗಳು ರಾಜಧಾನಿಯಲ್ಲಿ ಇಲ್ಲದ ಸಮಯ ನೋಡಿಕೊಂಡು, ಈ ಸಹಕಾರ ಮಂತ್ರಿಗಳು ಇಲ್ಲದ ಸುಳ್ಳು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದು ಆ ಭಾಗಗಳಿಗೆ ಬರಬೇಕಾಗಿದ್ದ ಮಾದರೀ ಶಾಲೆಗಳನ್ನು ರದ್ದುಪಡಿಸಿ ತಾಲ್ಲೂಕ್ ಸ್ಕೂಲುಗಳೇ ಮುಂದುವರಿಯುವಂತೆ ಏರ್ಪಾಡು ಮಾಡಿದ್ದಾರೆ. ಮಕ್ಕಳ ಹಿತದೃಷ್ಟಿಯಿಂದ ಈ ವಿಚಾರವನ್ನು ಹೇಳಬೇಕಾಗಿದೆ. ಇದು ಶಾಲೆಗಳ ವಿಚಾರವಾಯಿತು.

ಇನ್ನು ವ್ಯವಸಾಯದ ಬಗ್ಗೆ ಹೇಳುವುದಾದರೆ, ದಿವಂಗತ ಪಂಡಿತ್ ನೆಹರೂ ಅವರು ಅಂತರ್ ರಾಷ್ಟ್ರ ರಾಜಕಾರಣಿಗಳಾಗಿದ್ದರಿಂದ ಅವರಿಗೆ ಈ ದೇಶದ ಒಕ್ಕಲುತನ ಯಾವ ರೀತಿ ನಡೆದಿದೆ ಎಂಬುದು ಗೊತ್ತಿರಲಿಲ್ಲವಂತೆ. ದೊಡ್ಡ ಯೋಜನೆಗೆ ಇಷ್ಟು ಕೋಟಿ ರೂಪಾಯಿ ಖರ್ಚಾಯಿತು ಎಂದು ಹೇಳುವುದಾಯಿತು ಅಷ್ಟೇವಿನಹ ಅದರಿಂದ ಪ್ರಯೋಜನವಾದದ್ದು ಏನು ಎಂಬುದನ್ನು ಗಮನಿಸುವುದಿಲ್ಲ. ಒಬ್ಬ ಸಾಮಾನ್ಯ ರೈತನ ಜೀವನ ಉತ್ತಮವಾದಾಗ ಅದೇ ರಾಷ್ಟ್ರದ ಜನತೆಯ ಜೀವನ ಮಟ್ಟ ಮೇಲಕ್ಕೆ ಏರಿತು ಎಂಬ ಮಾತನ್ನು ರಾಜಕಾರಣಿಗಳು ಅರಿತುಕೊಳ್ಳಬೇಕು. ಹೋದ ವರ್ಷ ಲೋಕೋಪಯೋಗಿ ಶಾಖೆಯಲ್ಲಿ ಎಷ್ಟೆಷ್ಟು ಕಾಂಗಾರಿಗಳು, ಸಂಚಾರ ಮಾರ್ಗಗಳು ಆದವು ಎಂಬ ಮಾತನ್ನು ನಾನು

(ಶ್ರೀ ಕೆ. ಪಿ. ನಾಡಗೌಡ)

ಇಲ್ಲಿ ಹೇಳಬೇಕಾಗಿದೆ. ಗೋಕಾಕ್ ತಾಲ್ಲೂಕಿನ ಎರಡು ಮತದಾರರ ಕ್ಷೇತ್ರಗಳಲ್ಲಿ ಸಂಚಾರ ಸೌಕರ್ಯ ಇಲ್ಲ. ಆ ವಿಚಾರವನ್ನು ಶ್ರೀಮಾನ್ ಪಂಚಗಾವಿಯವರು ಇವತ್ತಿನ ದಿವಸದ ಪ್ರಶ್ನೆಯಲ್ಲಿ ಕೇಳಿದ್ದಾರೆ. ದುರ್ದೈವದಿಂದ ಅವರು ಈಗ ಸಭೆಯಲ್ಲಿ ಇಲ್ಲದೇ ಇದ್ದುದರಿಂದ ಅದು ಕೈಬಿಟ್ಟು ಹೋಯಿತು. ಆದರೂ ಕೆಲವು ಮುದ್ರಿತ ಉತ್ತರಗಳು ಇಲ್ಲಿ ಇವೆ. ಕುಲಗೋಡು ಮತ್ತು ತಿಮ್ಮಾಪುರ ನಾಲಾ ಇದು ವಿಜಾಪುರ ಬೆಳಗಾಂ ಜಿಲ್ಲೆಯನ್ನು ಸಂಬಂಧಿಸಿದಂತೆ 70 ಮೈಲಿ ಉದ್ದಕ್ಕೂ ಹೋಗಿರತಕ್ಕ ಮಾರ್ಗ ಗೋಕಾಕದಿಂದ ಬಾಗಲಕೋಟೆಯವರೆಗೂ ಇರತಕ್ಕ ರಸ್ತೆಯಲ್ಲಿ 3 ದೊಡ್ಡ ನಾಲೆಗಳು ಇವೆ ಅವಕ್ಕೂ ಕೂಡ ಪೂಲಿನ ವ್ಯವಸ್ಥೆ ಇಲ್ಲ. ಆ ಬಗ್ಗೆ ಕೂಡ ರೆಪ್ರಸಂಟೇಷನ್ ಕೊಟ್ಟದ್ದು ಆಗಿದೆ. ಈ ಪ್ರಶ್ನೆ ಕೇಳಲಾಗಿದ್ದಕ್ಕೆ ಶ್ರೀಮಾನ್ ಲಕ್ಕಪ್ಪನವರ ಉತ್ತರ ಏನೆಂದರೆ ಹಣದ ಲಭ್ಯತೆಗೆ ಅನುಗುಣವಾಗಿ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ''ಮಾಡಲಾಗುವುದು'' ಅಂತಲೂ ಕೂಡ ಇಲ್ಲ, ಹಣ ಸಿಕ್ಕರೆ ಮಾಡುತ್ತೇವೆ ಅಂತ ಕೂಡ ಹೇಳಿಲ್ಲ. ಒಂದು ಮಾತು ಹೇಳಬೇಕಾಗಿದೆ, ಒಕ್ಕಲುತನದ ಬಗ್ಗೆ, ಭೂಸುಧಾರಣೆಯ ಬಗ್ಗೆ ಬೇಕಾದಷ್ಟು ಆಗುತ್ತಾ ಇದೆ. ಭೂ ಸುಧಾರಣೆ ಎಂದರೆ ಕೇವಲ ಮಾನವರು ಅಷ್ಟೇ ಅಲ್ಲ, ಪಶುಪಕ್ಷಿಗಳಿಗೂ ಕೂಡ ಆಹಾರವನ್ನು ಒದಗಿಸುವಂತಹ ಭೂಮಿ ತಾಯಿ. ಆಕೆಯ ಮೇಲ್ ಹೊದಿಕೆಯಲ್ಲಿ ಅವರು ಬೆಳೆಯುವುದಕ್ಕೆ ಉಪಯೋಗ ಮಾಡಿಕೊಳ್ಳತಕ್ಕ ಮಣ್ಣನ್ನು ಯಾವ ರೀತಿಯಿಂದಲೂ ಸವಕಳಿಯಾಗದಂತೆ ನೋಡಿಕೊಳ್ಳಬೇಕಾದ್ದು ಬಹಳ ಮುಖ್ಯವಾದ ಕಾರ್ಯವಾಗಿದೆ. ಬೆಳಗಾಂ, ವಿಜಾಪುರ, ಧಾರವಾಡ ಈ ಮೂರು ಜಿಲ್ಲೆಗಳಲ್ಲಿ ಭೂಮಿಯ ಮೇಲ್ ಹೊದಿಕೆ ಎಲ್ಲಾ ಸಣ್ಣ ಸಣ್ಣ ಹಳ್ಳಗಳ ಮೂಲಕ ದೊಡ್ಡ ಹಳ್ಳಕ್ಕೆ ಬಿದ್ದು ಅಲ್ಲಿಂದ ನದಿಗಳಿಗೆ ಸೇರಿ ಹೊರಟು ಹೋಗಿ, ಕರೀ ಭೂಮಿ ಎಲ್ಲಾ ಬೆಳ್ಳಗೆ ಆಗುತ್ತಾ ಇದೆ. ಅದರ ಕಪ್ಪು ಬಣ್ಣವನ್ನೇ ಕಳೆದುಕೊಳ್ಳುತ್ತಾ ಇವೆ. ಅಲ್ಲಲ್ಲಿ ಒಡ್ಡುಗಳನ್ನು ಹಾಕಿದರೆ ಅಷ್ಟರಿಂದ ಈ ಕೆಲಸ ಮಾಡಿದಂತಾಗುವುದಿಲ್ಲ. ದೊಡ್ಡ ದೊಡ್ಡ ಹಳ್ಳಗಳಿಗೆ ಮೈಲಿ ಎರಡು ಮೈಲಿಗೆ ಒಂದೊಂದು ಒಡ್ಡನ್ನು ಹಾಕಿ ಹರಿಯುವ ನೀರಿನ ರಭಸವನ್ನು ತಡೆಗಟ್ಟಿದರೆ ಭೂಮಿಯಲ್ಲಿ ಕೊರಕಲು ಬೀಳುವುದಿಲ್ಲ. ಈ ಕಾರ್ಯವನ್ನು ಜಾಗ್ರತೆಯಾಗಿ ತೆಗೆದುಕೊಂಡರೆ ನಮ್ಮ ಭೂಮಿ ಫಲವತ್ತಾಗಿ ಉಳಿಯುತ್ತದೆ ಎಂಬ ಮಾತನ್ನು ಸರ್ಕಾರದವರು ಅರಿತುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯುತ್ತನ್ನು ವಿತರಣೆ ಮಾಡುವ ವಿಷಯ. ಯಾವ ಪ್ರದೇಶದಲ್ಲಿ ರಾಜಕೀಯ ಪಕ್ಷ, ಆಳುವ ಪಕ್ಷದ ಸದಸ್ಯರು ಇದ್ದಾರೆಯೋ ಅಲ್ಲಿ ಹೆಚ್ಚಾಗಿ ವಿತರಣೆ ಮಾಡುತ್ತಾ ಇದ್ದಾರೆಯೇ ಹೊರತು ಬೇರೆ ಕಡೆಗಳಲ್ಲಿ ಮಾಡದೇ ಇರುವಂತಹ ಅನೇಕ ನಿದರ್ಶನಗಳು ನಮ್ಮ ಮುಂದೆ ಇವೆ. ನಮ್ಮ ಭಾಗದಲ್ಲಿ 5-6 ಸಾವಿರ ಜನಸಂಖ್ಯೆ ಇರತಕ್ಕ ದೊಡ್ಡ ದೊಡ್ಡ ಊರುಗಳು ಇವತ್ತೂ ಸಹ ಕತ್ತಲಿನಲ್ಲಿವೆ. ಆದ್ದರಿಂದ ಮಾನ್ಯ ಮಂತ್ರಿಗಳು ದಯಮಾಡಿ ಇದನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು, ನಾವು ಹೋಗಿ ಹೇಳಿದರೆ ಯಾವ ಕೆಲಸವೂ ಆಗುವುದಿಲ್ಲ. ಇದನ್ನು ತಾವು ಜರೂರಾಗಿ ಮಾಡಬೇಕು, ಇದು ಬಹಳ ತುರ್ತಾಗಿ ಮಾಡಬೇಕಾದ ಯೋಗ್ಯವಾದ ಕೆಲಸ ಎಂದು ಸಂಬಂಧಪಟ್ಟ ಮಾನ್ಯ ಮಂತ್ರಿಗಳಲ್ಲಿ ವಿಜ್ಞಾಪಿಸುತ್ತಾ ಇದ್ದೇನೆ. ಗೋಕಾಕ ತಾಲ್ಲೂಕಿನ ಇನ್ನೊಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಯಾದವಾಡಿ ಎಂಬ ಹಳ್ಳಿಯಲ್ಲಿ 8-10 ಸಾವಿರ ಜನಸಂಖ್ಯೆ ಇದೆ. ಕುಲಗೋಡಿಯಲ್ಲಿ 6—7 ಸಾವಿರ ಜನಸಂಖ್ಯೆ ಇದೆ. ಕೌಜಲಗಿಯಲ್ಲಿ 7—8 ಸಾವಿರ ಜನಸಂಖ್ಯೆ ಇದೆ. ಇಲ್ಲಿ ಮಾಡಬೇಕಾದ ಕಾರ್ಯ ಯಾವುದು ಎಂದರೆ ಘಟಪ್ರಭಾ ಬಲದಂಡೆಯ ಕಾಲುವೆಯಿಂದ ನೀರನ್ನು ಒದಗಿಸಬೇಕು. ಹಿಂದೆ ಈ ಕಾರ್ಯ ಆದಷ್ಟು ಜಾಗ್ರತೆ ಆಗುತ್ತದೆ ಎಂದು ಶ್ರೀಮಾನ್ ಚನ್ನಬಸಪ್ಪನವರ ಕಾಲದಿಂದಲೂ ಕೇಳಿಕೊಂಡು ಬಂದು ಇನ್ನೂವರೆಗೂ ಆಗಿಲ್ಲ, ಯಾವಾಗ ಇದು ಆಗುತ್ತದೆ ಎಂಬ ಭರವಸೆ ನಮಗಂತೂ ಇಲ್ಲ. ಘಟಪ್ರಭಾ ಲೆಫ್ಟ್ ಬ್ಯಾಂಕ್ ಕೆನಾಲ್‌ನಿಂದ ರೈತರಿಗೆ ಪ್ರತಿ ವರ್ಷ 4—5 ನೂರು ರೂಪಾಯಿ ಲುಕ್ಸಾನಾಗುತ್ತದೆ ಏಕೆಂದರೆ ಅದರಿಂದ ನೀರು ಸರಬರಾಯಿ ಆಗುವುದಿಲ್ಲ ಮತ್ತು ಮಳೆ ಆಗುವುದಿಲ್ಲ. ಹೀಗಾಗಿ ರೈತರು ಪದೇ ಪದೇ ಹಾನಿಗೆ ಈಡಾಗುತ್ತಾ ಇದ್ದಾರೆ, ಇದನ್ನು ಗಮನಿಸಬೇಕು. ಆದ್ದರಿಂದ ನಮ್ಮ ಪಡೆ ತ್ವರಿತ ಗತಿಯಿಂದ ಫಲವನ್ನು ಕೊಡುವಂತಹ ಮೀಡಿಯಂ ತರಗತಿಯ ನೀರಾವರಿ ಸೌಕರ್ಯವನ್ನು ಕಾರ್ಯಗತ ಮಾಡಿಕೊಡಬೇಕು. ಲೋಕಾಪೂರ, ಯರಗುತ್ತಿ, ವರ್ತಗಟ್, ಹಿರೇಹಳ್ಳಿ ಈ ಕೆರೆಗಳ ಕಾರ್ಯವನ್ನು ತೆಗೆದುಕೊಂಡು ನೀರಾವರಿ ಸೌಕರ್ಯವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಷಯದಲ್ಲಿ ಎರಡು ಮಾತು ಹೇಳಬೇಕೆಂದು ಇದ್ದೇನೆ. ಲೋಕಾಪುರ ಪೋಲೀಸ್ ಸ್ಟೇಷನ್ ಇದೆ. ನನಗೆ ಸಂಬಂಧಿಸಿದ ಒಂದು ಹಳ್ಳಿಯಲ್ಲಿ ಹೊಡೆದಾಟ

ನಡೆದಾಗ ಫಿರ್ಯಾದಿ ಕೊಡಲಿಕ್ಕೆ ನಾನು ಅಲ್ಲಿಗೆ ಹೋಗಿದ್ದೆ, ಅದು ನಮಗೆ ಸೇರಿದ್ದಲ್ಲ, ಮುಧೋಳ್ ಪ್ರದೇಶಕ್ಕೆ ಸೇರಿದ್ದು ಅಂತ ಹೇಳಿದರು, ಮುಧೋಳ್‌ಗೆ ಹೋಗಿ ಹೇಳಿದಾಗ ಅವರು ಇದು ನಮಗೆ ಸೇರಿದ್ದಲ್ಲ ಲೋಕಾಪುರಕ್ಕೆ ಸೇರಿದ್ದು ಎಂದು ಹೇಳಿದರು, ಹೀಗಾಗಿ ಎಲ್ಲಿ ಫಿರ್ಯಾದು ಕೊಡಬೇಕು ಎಂಬುದೇ ಗೊತ್ತಾಗದೇ ಆ ಹಳ್ಳಿ ಏನು ನೊ ಮ್ಯಾನ್ಸ್ ಲ್ಯಾಂಡ್‌ನಂತೆ ಇದೆಯೋ ಏನೋ ಅನ್ನುವಂತೆ ನನಗೆ ಭಾಸವಾಯಿತು. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಈ ರೀತಿ ಪೋಲೀಸ್ ರಾಜ್ಯ ನಡೆದಿದೆ. ಇವತ್ತಿನ ದಿವಸ ನಮ್ಮ ರಾಜಕೀಯ ಹದಗೆಟ್ಟಿರುವಾಗ ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ತಾವು ಬಹಳ ಎಚ್ಚರಿಕೆಯಿಂದ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಸುದೈವದಿಂದ ಇವತ್ತು ನಮ್ಮ ರಾಜ್ಯದ ರಾಜ್ಯಪಾಲರಾಗಿ ಧರ್ಮವೀರರು ಬಂದಿದ್ದಾರೆ. ಇವರು ಬೆಂಗಾಳದಲ್ಲಿ ಯಾವ ರೀತಿ ಪರಿಸ್ಥಿತಿಯನ್ನು ಹತೋಟಿಗೆ ತಂದರೂ ಆ ರೀತಿ ಇಲ್ಲಿಯೂ ಮಾಡಬೇಕಾಗುತ್ತದೆ.

5-30 P.M.

†ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ)—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವಂಥ ಶ್ರೀಮಾನ್ ಬೊಮ್ಮಾಯಿ ಅವರ ನಿರ್ಣಯವನ್ನು ಸಮರ್ಥಿಸುತ್ತ ರಾಜ್ಯಪಾಲರು ಮಾಡಿರುವ ಭಾಷಣದಮೇಲೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಮುಂಚೆ, ಪ್ರಸ್ತುತ ರಾಜಕೀಯದ ವಿಚಾರದಲ್ಲಿ ಒಂದೆರಡು ಮಾತು ಹೇಳದೆ ಇದ್ದರೆ ಕರ್ತವ್ಯ ಲೋಪವಾಗುತ್ತದೆಂದು ನಾನು ಭಾವಿಸುತ್ತೇನೆ. ಸಭಾಪತಿಗಳೇ, ನಾವು ಈ ಹೊತ್ತಿನ ದಿವಸ ಬಹಳ ಸಂದಿಗ್ಧ ಸನ್ನಿವೇಶದಲ್ಲಿ ಸೇರಿದ್ದೇವೆ. ಭಾರತ ದೇಶದ ಇತಿಹಾಸದಲ್ಲಿ ಬಹಳ ಆಂದೋಳನ ನಡೆದು ಬಹುಶಃ ಯಾರೂ ನಿರೀಕ್ಷೆ ಮಾಡದೆ ಇರತಕ್ಕ ದುರದೃಷ್ಟವಾದ ಘಟನೆ ನಡೆದುಹೋಗಿದೆ. ಯಾವ ಪಕ್ಷ ಕಳೆದ 22 ವರ್ಷಗಳಿಂದ ಈ ದೇಶದ ಆಗುಹೋಗುಗಳನ್ನು ನಡೆಸಿಕೊಂಡು ಬಂತೋ ಆ ಪಕ್ಷ ಛಿನ್ನವಾಗಿ ಎರಡಾಗಿದೆ. ಈ ಹೊತ್ತು ನಮ್ಮ ರಾಜ್ಯ ಸರ್ಕಾರದಲ್ಲಿ ಮಾನ್ಯ ಸ್ನೇಹಿತರು ಸರ್ಕಾರಕ್ಕೆ ಎದುರಾಗಿ ಕುಳಿತುಕೊಂಡಿದ್ದಾರೆ, ಆಂಧ್ರ ಪ್ರಾಂತದಲ್ಲಿ ಈ ಗುಂಪಿನ ಕಾಂಗ್ರೆಸ್‌ನವರು ಸರ್ಕಾರಕ್ಕೆ ಎದುರಾಗಿ ಕುಳಿತಿದ್ದಾರೆ ಮತ್ತು ದೆಹಲಿಯಲ್ಲಿ ಆಡಳಿತ ನಡೆಸತಕ್ಕ ಕಾಂಗ್ರೆಸ್ ಪಕ್ಷಕ್ಕೆ ಎದುರಾಗಿ ಸಂಸ್ಥಾ ಕಾಂಗ್ರೆಸ್ ಪಕ್ಷ ಕುಳಿತುಕೊಂಡಿದೆ. ಈ ರೀತಿಯಾಗಿ ಇಡೀ ಭರತಖಂಡದ ಇತಿಹಾಸದಲ್ಲಿ ಹಿಂದೆ ನಡೆಯದೇ ಇರುವ ಒಂದು ಇತಿಹಾಸ ನಡೆದು ಹೋಗಿದೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲ, ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಬಂದಂಥ ರಾಷ್ಟ್ರಗಳಲ್ಲ ಬಹುಶಃ ನಮ್ಮ ಸ್ಥಿತಿಯನ್ನು ನೋಡಿ ನಗುತ್ತಾರೆಂದು ಹೇಳದೆ ವಿಧಿ ಇಲ್ಲ. ಯಾವುದಾದರೂ ತಾತ್ವಿಕ ಆಧಾರದಮೇಲೆ, ಬಹುಶಃ ಯಾವುದಾದರೂ ಆರ್ಥಿಕ ಅಥವಾ ರಾಜಕೀಯ ತತ್ವದಮೇಲೆ ಈ ಪಕ್ಷ ಒಡೆದು ಹೋಗಿದ್ದರೆ ನಾನು ಬಹಳ ಸಂತೋಷ ಪಡುತ್ತಿದ್ದೆ. ಈ ಹೊತ್ತು ಸಮಾಜವಾದದ ಒಂದು ಗುಂಪು ಬಹಳ ಕ್ರಾಂತಿಕಾರಕವಾಗಿ ನಮ್ಮ ದೇಶದಲ್ಲಿ ಕೆಲಸ ಮಾಡುತ್ತಿದೆ. ಅದಕ್ಕೆ ವಿರೋಧವಾಗಿ ಒಂದು ಗುಂಪು ಇದೆ, ಬಂಡವಾಳಶಾಹಿ ಗುಂಪು ಬಹುಶಃ ಸಮಾಜವಾದದಲ್ಲಿ ನಂಬಿಕೆಯುಳ್ಳ ಎಲ್ಲರೂ ಒಂದು ಕಡೆ ಸೇರಿದ್ದರೆ ಬಹುಶಃ ಈ ದೇಶದ ರಾಜಕಾರಣವನ್ನು ಬಹಳ ಆದರ್ಶವಾಗಿ ರೂಪಿಸಬಹುದಾಗಿತ್ತು. ಸಮಾಜವಾದದಲ್ಲಿ ನಂಬಿಕೆಯುಳ್ಳ ಪ್ರತಿಯೊಬ್ಬ ಕಾಂಗ್ರೆಸ್ಸಿನವರೇ ಆಗಲೀ, ಯಾವ ಇತರ ಪಕ್ಷದವರೇ ಆಗಲೀ ಸಮಾಜವಾದವನ್ನು ತನ್ನ ಪಕ್ಷದ ಧ್ಯೇಯ ಧೋರಣೆಯನ್ನಾಗಿ ಹೊಂದಿದ್ದು ಆ ಪಕ್ಷಗಳು ಸಂತೋಷದಿಂದ ಸಂಘಟಿತವಾಗಿ ಕೆಲಸ ಮಾಡಿಕೊಂಡು ಬಂದಿದ್ದರೆ ದೇಶದ ಆರ್ಥಿಕ, ಸಾಮಾಜಿಕ ರಾಜಕೀಯ ವಿಚಾರದಲ್ಲಿ ಈ 22 ವರ್ಷಗಳಲ್ಲಿ ಆಗದೆ ಇದ್ದುದನ್ನು ಬಹಳ ತ್ವರಿತ ಗತಿಯಲ್ಲಿ ಸಾಧಿಸಿಕೊಂಡು ಬರಬಹುದಾಗಿತ್ತು. ಆದರೆ ಈ ಹೊತ್ತು ಪಕ್ಷ ಒಡೆದು ಹೋಗಿರುವುದಕ್ಕೆ ಕಾರಣ ಅಧಿಕಾರ ಲಾಲಸೆ ಎಂದರೆ ತಪ್ಪಾಗಲಾರದು. ಈ ಮಾತನ್ನು ಹೇಳುವಾಗ ಹೊರಗೆ ಹೋದವರು ಅಧಿಕಾರ ಲಾಲಸೆ ಇರುವವರು, ಅಧಿಕಾರ ಲಾಲಸೆಯಿಂದ ಬಿಟ್ಟು ಹೋದರು ಎಂದು ಹೇಳುವುದಿಲ್ಲ. ಅಧಿಕಾರ ಲಾಲಸೆ ಎರಡೂ ಕಡೆಯೂ ಇದೆ. ಈ ಹೊತ್ತಿನ ದಿವಸ ಅಧಿಕಾರ ಲಾಲಸೆ ಇಲ್ಲದೆ ಇದ್ದ ಪಕ್ಷದಲ್ಲಿ ತಾತ್ವಿಕವಾಗಿ ಸಂಸ್ಥೆ ಒಡೆಯುತ್ತಿತ್ತು. ಬಹುಶಃ ದೇಶದಲ್ಲಿನ ರಾಜಕೀಯ ಧೋರಣೆಯಿಂದ ಅಥವಾ ಬೇರೆ ಯಾವುದೋ ತಾತ್ವಿಕ ಕಾರಣದಿಂದ ಪಕ್ಷ ಒಡೆದು ಹೋಗುತ್ತದೆ ಎಂದು ಪರ ರಾಷ್ಟ್ರಗಳವರು ಮತ್ತು ಎಲ್ಲರೂ ತಿಳಿದುಕೊಂಡಿದ್ದರು. ಅವರಿಗೂ ಕೂಡ ನಿರಾಸೆಯಾಗಿದೆ. ಕಾಂಗ್ರೆಸ್ ಸಂಸ್ಥೆಯಲ್ಲಿರುವವರಿಗೆ, ಸಮಾಜವಾದವನ್ನು ನಂಬಿರುವವರಿಗೆ ಕೂಡ ನಿರಾಸೆಯಾಯಿತು. ನಾನು ಮೊದಲೇ ಬಿನ್ನವಿಸಿಕೊಂಡ ಹಾಗೆ ನಮ್ಮ ದುರ್ದೈವವೋ, ಕಾಂಗ್ರೆಸ್ ಸಂಸ್ಥೆಯ ದುರ್ದೈವವೋ, ಭರತಖಂಡದ 50 ಕೋಟಿ ಜನರ ದುರ್ದೈವವೋ ಸಂಸ್ಥೆ ಒಡೆದು ಯಾರು ಪ್ರತಿ ಕಾಂಗ್ರೆಸ್, ಯಾರು ನಿಜವಾದ ಕಾಂಗ್ರೆಸ್, ಕಾಂಗ್ರೆಸ್ ಚಿಹ್ನೆ ಯಾರಿಗೆ

(ಶ್ರೀ ಡಿ. ಎಂ. ಸಿದ್ದಯ್ಯ)

ಹೋಗಬೇಕು, ಸಮಾಜವಾದವನ್ನು ಯಾರು ಅನುಷ್ಠಾನಕ್ಕೆ ತರಬೇಕು ಎಂದು ಹೋರಾಟ ನಡೆಯುತ್ತಿದೆ. ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿದರೆ ಬೇರೆ ಪಕ್ಷಗಳು ಸರಿಯಾದ ರೀತಿಯಲ್ಲಿ ಬೆಳೆಯುವಂಥ ಸಂಘಟನಾ ಶಕ್ತಿ ಇಲ್ಲ. ಅಂಥ ಪಕ್ಷ ಇಲ್ಲದೆ ಇರುವಾಗ ಪ್ರಜಾಪ್ರಭುತ್ವ ಉಳಿಯುತ್ತದೆಯೇ ಎನ್ನುವ ಶಂಕೆ ಸಹಜವಾಗಿ ಎಲ್ಲರ ಮನಸ್ಸಿನಲ್ಲಿ ಮೂಡುವುದು ಸಹಜವೇ ಸರಿ.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಮನೆಯಲ್ಲಿ ಗಂಡ ಹೆಂಡಿರು ಜಗಳವಾಡಿದರೆ ತಪ್ಪು ಯಾರದು ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ. ಸಮಾಜವಾದದಲ್ಲಿ ನಂಬಿಕೆ ಇರುವವರು, ಇಲ್ಲದೆ ಇರುವವರು ಎಂದು ಹೇಳುತ್ತಿದ್ದಾರೆ. ಜನಸಂಘ, ಸ್ವತಂತ್ರ ಪಕ್ಷ ಇವರೊಡನೆ ಸೇರುವುದು ಸಮಾಜವಾದವೇ ಅವರು ಸರಿಯಾಗಿ ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಿಗೆ ಸಹನೆ ಇಲ್ಲ ಎಂದು ಕಾಣುತ್ತದೆ. ನಾನು ಹೇಳುವುದನ್ನು ಇನ್ನೂ ಪೂರೈಸಿಲ್ಲ. ಬಹಳ ಆತುರವಾಗಿ ಮಾತನಾಡುತ್ತಿದ್ದಾರೆ. ಈ ಹೊತ್ತಿನ ದಿವಸ ಒಂದು ಪಕ್ಷ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಜನಸಂಘ, ಸ್ವತಂತ್ರ ಪಕ್ಷದ ಜೊತೆಗೆ ಹೋಗಿದೆ. ಮತ್ತೊಂದು ಪಕ್ಷ, ಸಮಾಜವಾದವನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ಪಕ್ಷ ಹೋಗಿರುವುದು ಯಾರ ಜೊತೆಯಲ್ಲಿ ಎಂದರೆ, ಕಮ್ಯುನಿಸ್ಟರು, ಅಕಾಲಿ ದಳ, ಡಿ.ಎಂ.ಕೆ. ಮುಂತಾದ ಪಕ್ಷಗಳ ಜೊತೆಯಲ್ಲಿ. ಇವರ ಜೊತೆಗೆ ಹೋದರೆ ಸಮಾಜವಾದವನ್ನು ತರುವುದಕ್ಕೆ ಆಗುತ್ತದೆಯೇ ? ಇದರ ದೆಸೆಯಿಂದ ಪರಿಸ್ಥಿತಿ ಏನಾಗಿದೆ ಎಂದರೆ ರಾಜಕೀಯ ಕಲುಷಿತವಾಗಿದೆ. ರಾಜಕೀಯದಲ್ಲಿ ವೈಯುಕ್ತಿಕ ದ್ವೇಷಾಸೂಯೆಗಳು, ಅಧಿಕಾರ ಲಾಲಸೆ ಬಂದಿದೆ. ಈ ದುಸ್ಥಿತಿ ಯಾವತ್ತು ನಮ್ಮ ದೇಶದಿಂದ ಹೋದರೆ ಆಗ ನಮ್ಮ ದೇಶಕ್ಕೆ ಮುಕ್ತಿ ಎಂದು ನನಗನ್ನಿಸುತ್ತದೆ. ಕೇಂದ್ರದಲ್ಲಿ ಅಧಿಕಾರ ಮಾಡತಕ್ಕ ಪಕ್ಷ ತನ್ನ ಆಡಳಿತ ನಡೆಸುವುದಕ್ಕೆ ಕಮ್ಯೂನಿಸ್ಟರು, ಡಿ. ಎಂ.ಕೆ. ಅಕಾಲಿ ದಳ ಮುಂತಾದ ಪಕ್ಷಗಳ ಜೊತೆಗೆ ಹೋಗುವುದರ ಬದಲು ಯಾವ ಸಂಸ್ಥೆಯಿಂದ ಒಡೆದಿದ್ದಾರೆ ಅದೇ ಸಂಸ್ಥೆಯೊಂದಿಗೆ ಸೇರಿ ತಮಗಿರುವ ಭಿನ್ನಾಭಿಪ್ರಾಯಗಳನ್ನು ತಿದ್ದಿಕೊಳ್ಳುವುದು ರಾಷ್ಟ್ರದ ಹಿತದೃಷ್ಟಿಯಿಂದ ಒಳ್ಳೆಯದು. ಸಂಸ್ಥೆ ಕಾಂಗ್ರೆಸ್ ಆದರೂ ಕೂಡ ನಾವು ಅವರನ್ನು ತೆಗೆದು ಹಾಕಿರುವುದರಲ್ಲಾಗಲೀ, ಅಥವಾ ಈ ಹೊತ್ತಿನ ಪರಿಸ್ಥಿತಿಯಲ್ಲಿ ರಾಷ್ಟ್ರದ ಅಧಿಕಾರ ಸೂತ್ರವನ್ನು ವಹಿಸಿ, ಈ ದೇಶವನ್ನು ಸರಿಯಾದ ರೀತಿಯಲ್ಲಿ ನಡೆಸಬೇಕೆಂದು ಕಾಯಾ ವಾಚಾ ಮನಸಾ ಇದ್ದ ಪಕ್ಷದಲ್ಲಿ.. ....

Sri AZEEZ SAIT.—Sir, I rise to a Point of Order. The subject before us is thanks giving to Governor's Address and members are supposed to speak on Governor's Address and not with regard to Syndicate Congress, Indicate Congress, D.M.K. or Swatantra. These things can be discussed in Shivaji Maidan, Town Hall, Dodkere Maidan, etc. Sri D. M. Siddaiah is welcome to make an elaborate speech there. As a Speaker I request you to pull up members on the other side also as you do on this side.

Mr. DEPUTY SPEAKER.—There is no Point of Order. Hon. Member may proceed with his speech.

ಶ್ರೀ ಡಿ. ಎಂ. ಸಿದ್ದಯ್ಯ.—ರಾಜ್ಯಪಾಲರ ಭಾಷಣದ ಬಗ್ಗೆ ನಾನು ಮಾತನಾಡುತ್ತಿದ್ದೇನೆ ಯಾವ ರೀತಿ ನಾನು ಮಾತನಾಡಬೇಕು ಎನ್ನುವುದಕ್ಕೆ ನನಗೆ ಅವರಿಂದ ಧರ್ಮೋಪದೇಶ ಬೇಕಾಗಿಲ್ಲ. The Governor has stated in his address that :

> " Democratic institutions in this country are passing through a testing time. Recent developments in the country have given rise to numerous stresses to which our young democracy had so far not been subject. In some quarters, there have been doubts as to whether our Legislatures and representative institutions are strong enough to withstand these stresses. It

is the sagacity of the Members of the two Houses, their spirit of tolerance and their measure of attachment to ethical values which will play a crucial part in determining the extent to which the democratic experiment in India will survive the resent crisis. I have earnest hope that the Hon'ble Members of the Mysore Legislature will meet the challenge of the times. and discharge their obligations to the people of the State."

ನಮ್ಮ ದೇಶಕ್ಕೆ ಪ್ರಜಾಪ್ರಭುತ್ವ ಹೊಸದು. ಕಳೆದ ಇಪ್ಪತ್ತೆರಡು ವರ್ಷಕಾಲ ಸಾಕಷ್ಟು ಮುತ್ಸದ್ದಿತನದಿಂದ ಸಮಾಜವಾದದ ತತ್ವಕ್ಕೆ ಅನುಗುಣವಾಗಿ ಸಾಮಾಜಿಕ ನೀತಿಯನ್ನು ಕಣ್ಣು ಮುಂದೆ ಇಟ್ಟುಕೊಂಡು ನಮ್ಮ ಪಕ್ಷ ಆಡಳಿತ ನಡೆಸಿದೆ. ಇಂಥ ಮಹಾ ನೀತಿ ಧ್ಯೇಯ ಧೋರಣೆಗಳು ಬೇರೆ ಪಕ್ಷದಲ್ಲಿ ಇಷ್ಟು ಸ್ಪಷ್ಟವಾಗಿ ಕಂಡುಬರುವುದಿಲ. ನಮ್ಮ ದೇಶದಲ್ಲಿ ಕೋಟ್ಯಾಂತರ ಜನರು ಬಡತನದಲ್ಲಿ ಇರುವಾಗ, ಅವಿದ್ಯಾವಂತರೇ ಹೆಚ್ಚಾಗಿ ಇರತಕ್ಕಂತ ರಾಜ್ಯವನ್ನು ಸುಖೀ ರಾಜ್ಯವನ್ನಾಗಿ ಮಾಡಬೇಕಾದರೆ ಅದಕ್ಕೆ ಬೇಕಾಗಿರತಕ್ಕಂಥ ಶಕ್ತಿ ಸಾಮರ್ಥ್ಯ ದಯಪಾಲಿಸಲಿ ಎಂದು ಈ ಸಂದರ್ಭವಲ್ಲಿ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ. ಇನ್ನು ರಾಜ್ಯಪಾಲರವರ ಭಾಷಣದ ಬಗ್ಗೆ ಎರಡು ಮೂರು ಮಾತುಗಳನ್ನು ಮಾತ್ರ ಹೇಳಿ ನನ್ನ ಮಾತು ಮುಗಿಸುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಮೊದಲನೆಯದಾಗಿ ಪಾಲಿಸಿ ಬಗ್ಗೆ ತಾತ್ವಿಕ ವಿಚಾರದ ಮೇಲೆ ಭಾಷಣ ಮಾಡುತ್ತಾ ಭೂಸುಧಾರಣೆ ಕಾರ್ಯಕ್ರಮವನ್ನು ತ್ವರಿತಗೊಳಿಸುವ ಅಗತ್ಯಕ್ಕೆ ನಮ್ಮ ಸರಕಾರ ನಿಕಟ ಗಮನ ಕೊಟ್ಟಿದ್ದಾರೆ ಮತ್ತು ಭೂಮಾಲೀಕರಿಗೆ ಸುಮಾರು 35 ಕೋಟಿ ಪರಿಹಾರ ಧನವಾಗಿ ಕೊಡಬೇಕಾಗುವುದು ಮತ್ತು ಇದಕ್ಕಾಗಿ ರಾಷ್ಟ್ರೀಕೃಥ ಬಾಂಕುಗಳ ಸಹಾಯವನ್ನು ಕೋರಲಾಗಿದೆ ಎಂದು ಹೇಳಿದ್ದಾರೆ. ನ್ಯಾಯ ನಿರ್ಣಯವನ್ನು ತ್ವರಿತಗೊಳಿಸುವ ಉದ್ದೇಶಕ್ಕಾಗಿ ಟ್ರಿಬ್ಯುನಲ್‌ಗಳ ನೇಮಕ ಮಾಡಿ ಕೆಲಸ ಮಾಡಬೇಕಾಗಿದೆ ಎಂದು ಸಹ ಹೇಳಿದ್ದಾರೆ. ಸರಕಾರಕ್ಕೆ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಬಹಳ ನಿಧಾನವಾಗಿರತಕ್ಕಂತ ಈ ಕೆಲಸವನ್ನು ತ್ವರಿತಗೊಳಿಸಿ ಕ್ರಾಂತಿಕಾರಕ ಸುಧಾರಣೆ ಮಾಡುವುದು ಅಗತ್ಯ. ಆದುದರಿಂದ ಭೂಸುಧಾರಣೆ ಆದಷ್ಟು ಜಾಗ್ರತೆ ಜಾರಿಗೆ ತರಬೇಕು.

ಎರಡನೆಯದಾಗಿ ರಾಜ್ಯಪಾಲರವರು ಮಹಾಜನ ಕಮೀಷನ್ ವರದಿಯ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಹಾಜನ ಕಮಿಷನ್ ವರದಿ ಜಾರಿಗೆ ತರದೆ ಕೇಂದ್ರ ಸರಕಾರ ಹಾಗೇ ಇರುವುದನ್ನೂ ಹಾಗೂ ಮಹಾರಾಷ್ಟ್ರದವರು ಮಹಾಜನರವರ ಬಗ್ಗೆ ಮಾಡಿದ ಟೀಕೆಗಳನ್ನು ನೆನೆಸಿಕೊಂಡರೆ ಅದೊಂದು ಮೈಸೂರು ರಾಜ್ಯಕ್ಕೆ ಅವಮಾನ ಹಾಗು ನಾಚಿಕೆಯಾಗುತ್ತದೆ. ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದಂಥ ಮಹಾಜನರವರಂಥ ದೊಡ್ಡ ಮನುಷ್ಯರನ್ನು ಕೇಂದ್ರ ಸರಕಾರ ನೇಮಕ ಮಾಡಿ ಅವರ ವರದಿಯನ್ನು ಒಪ್ಪಿಕೊಳ್ಳದೇ ಇರುವುದು ಸರಿಯಲ್ಲ. ಕೇಂದ್ರ ಸರಕಾರದಲ್ಲಿ ಮಹಾರಾಷ್ಟ್ರದ ಪರವಾಗಿ ಇರುವ ಚವಾಣರು ಮಹಾಜನ ತೀರ್ಪಿನ ಬಗ್ಗೆ ತಾತ್ಸಾರ ಮನೋಭಾವನೆ ತಾಳಿರುವುದು ತೀರ ಅನ್ಯಾಯ. ಅಂಥ ನಿಲುವು ತಳೆಯುವುದಕ್ಕೆ ಚವಾಣರವರ ತಲೆಯಮೇಲೆ ಯಾವ ಕಿರೀಟ ಇದೆ? ನ್ಯಾಯಮೂರ್ತಿಗಳ ತೀರ್ಪಿಗೆ ಪ್ರಜಾಪ್ರಭುತ್ವದಲ್ಲಿ ಮಹಾ ಪ್ರಧಾನಿಯವರು ಕೂಡ ಏತಕ್ಕಾಗಿ ತಾತ್ಸಾರ ಮನೋಭಾವನೆಯಿಂದ ನೋಡುತ್ತಿದ್ದಾರೆ? ಕರ್ನಾಟಕ ರಾಜ್ಯದ ಒಂದು ಇಂಚು ಭೂಮಿಯನ್ನು ನಾವು ಬಿಟ್ಟುಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಕೆಚ್ಚಿನಿಂದ ಹೇಳುತ್ತೇನೆ. ಚವಾಣರಾಗಲಿ ಕೇಂದ್ರ ಸರಕಾರವಾಗಲಿ ಬೆಳಗಾಂವಿಯನ್ನು ವಿಭಾಗ ಮಾಡುವುದಕ್ಕೆ ಹೋದರೆ ರಕ್ತದ ಕಾಲುವೆ ಹರಿದೀತು ಎಂದು ಕೇಂದ್ರ ಸರಕಾರಕ್ಕೆ ಮಹಾರಾಷ್ಟ್ರಕ್ಕೆ ಹೇಳಬಯಸುತ್ತೇನೆ. ಕರ್ನಾಟಕದವರು ಬಳೆ ತೊಟ್ಟಿಲ್ಲ. ಕನ್ನಡಿಗರಲ್ಲೂ ಕೆಚ್ಚಿದೆ ಎಂದು ಅವರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಬಹಳ ಭಾವನಾಪೂರಿತವಾಗಿ ಮಾತನಾಡುತ್ತಿದ್ದೀರಿ. ಏಕ ಸದಸ್ಯ ಆಯೋಗ ನೇಮಕ ಮಾಡಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ತೀರ್ಮಾನ ತೆಗೆದುಕೊಂಡಾಗ ಏಕೆ ಒತ್ತಾಯ ಮಾಡಿ ಪ್ರತಿಭಟಿಸಲಿಲ್ಲ? ನೀವು ಏಕೆ ಬೆಂಬಲ ಕೊಟ್ಟಿರಿ? ರಾತ್ರಿ ಎರಡು ಗಂಟೆಗೆ ತೂಕಡಿಸುತ್ತಾ ಇರುವಾಗ ಮಹಾಜನ ಆಯೋಗದ ನೇಮಕದ ಬಗ್ಗೆ ಒಪ್ಪಿಗೆ ಏತಕ್ಕೆ ಕೊಟ್ಟಿರಿ? ಅದರ ತೀರ್ಮಾನ ಬಂದು ಒಂದು ಒಂದೂವರೆ ವರ್ಷವಾಗಿ ಹೋದರೂ ಅದನ್ನು ಜಾರಿಗೆ ತರಲು ಕೇಂದ್ರ ಸರಕಾರದ ಮೇಲೆ ಏಕೆ ಪ್ರಭಾವ ಬೀರಲಿಲ್ಲ? ಇಂದು ಕೇಂದ್ರ ಸರಕಾರದಲ್ಲಿ ಪರಿಸ್ಥಿತಿ ಬದಲಾಗಿದೆ ಎಂದು ಇಷ್ಟು ಉದ್ವೇಗಕರ ಭಾಷಣ ಮಾಡುತ್ತಿದ್ದೀರಿ.

ಶ್ರೀ ಡಿ. ಎಂ. ಸಿದ್ದಯ್ಯ.—ಇದು ಉದ್ವೇಗದಿಂದ ಮಾಡುವ ಭಾಷಣವಲ್ಲ. ನಮ್ಮ ಶಕ್ತಿ ಮೀರಿ ಪ್ರಯತ್ನ ಮಾಡಿದ್ದೇನೆ. ಕರ್ನಾಟಕಕ್ಕೆ ಯಾರೇ ಅನ್ಯಾಯ ಮಾಡಿದರೂ ಅದನ್ನು ಶಕ್ತಿಮೀರಿ ವಿರೋಧಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ರಕ್ತದ ಕಾಲುವೆ ಹರಿದೀತು, ಶಕ್ತಿಮೀರಿ ಪ್ರಯತ್ನ ಮಾಡುತ್ತೇವೆ ಎಂದು ಹೇಳುವುದನ್ನು ನಾನು ಸ್ವಾಗತ ಮಾಡುತ್ತೇನೆ ಆದರೆ ಇಂಥ ಪದಗಳು ನಿಮ್ಮ ಬಾಯಿಂದ ಒಂದು ವರ್ಷ ಹಿಂದೆ ಬಂದಿದ್ದರೆ ಬಹಳ ಸಂತೋಷಪಡುತ್ತಿದ್ದೆವು. ತಾಳವಾಡಿ ಫಿರ್ಕಾದ ಬಗ್ಗೆ ಕನ್ನಡಿಗರಿಗೆ ಅನ್ಯಾಯವಾಗಿರುವುದರ ಬಗ್ಗೆ ತಮ್ಮ ಈ ಸ್ಪಿರಿಟ್ ತೋರಿಸುತ್ತೀರಾ ?

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರಿಗೆ ಬಹಳ ವಿನಯಪೂರ್ವಕವಾಗಿ ಸೂಚಿಸುವುದು ನಾನು ಮೊದಲಿನಿಂದಲೂ ಈ ಶಾಸನ ಸಭೆಯ ಶಾಸಕನಾಗಿದಾಗಿನಿಂದಲೂ ಮಾಡಿರುವ ಭಾಷಣವನ್ನು ತೆಗೆದು ಓದಿ. ಈವೊತ್ತು ಇಲ್ಲಿಗೆ ನಾನು ಹೊಸದಾಗಿ ಬಂದಿಲ್ಲ. ನಾನು ಮೊದಲು ಹೇಗೆ ಭಾಷಣ ಮಾಡುತ್ತಿದ್ದೆನೋ ಆ ಭಾಷಣವನ್ನು ತೆಗೆದು ಓದಿದರೆ ಗೊತ್ತಾಗುತ್ತದೆ.

ಇನ್ನು ಜಿಲ್ಲಾ ಪರಿಷತ್ತುಗಳನ್ನು ತರಬೇಕು ಎನ್ನುವ ವಿಷಯವನ್ನು ಪ್ರಸ್ತಾಪಿಸುತ್ತೇನೆ. ಇದರ ಬಗ್ಗೆ ಮೈಸೂರು ಸರ್ಕಾರದವರು ಇಷ್ಟರಲ್ಲೇ ಈ ಸಭೆಯ ಮುಂದೆ ಮಸೂದೆಯನ್ನು ಮಂಡಿಸುತ್ತಾರೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಹಿಂದೆಯೇ ಆಗಬೇಕಾಗಿತ್ತು. ಸ್ಥಳೀಯ ಸಂಸ್ಥೆಗಳು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಅಂದರೆ ಪಂಚಾಯಿತಿಗಳ ಮಟ್ಟದಲ್ಲಿ, ತಾಲ್ಲೂಕು ಅಭಿವೃದ್ಧಿ ಮಂಡಲಿ ಮಟ್ಟದಲ್ಲಿ ಮತ್ತು ಜಿಲ್ಲಾ ಪರಿಷತ್ತುಗಳ ಈ ಮೂರು ಮಟ್ಟದಲ್ಲೂ ಕೂಡ ಚೆನ್ನಾಗಿ ಕೆಲಸ ಮಾಡಿ ಸರ್ಕಾರದವರು ಕೊಡತಕ್ಕಂಥ ರೆವಿನ್ಯೂ ಹಣವನ್ನು ಉಪಯೋಗಿಸಿಕೊಂಡು ಹಳ್ಳಿಗಾಡಿನ ಜನತೆಗೆ ಒಂದು ಬಾವಿಯಾಗಲಿ, ರಸ್ತೆಯಾಗಲಿ, ಸ್ಕೂಲ್ ಆಗಲಿ ಯಾವ ವಿಧವಾದಂಥ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳಿದ್ದರೂ ಆ ಕೆಲಸ ಕಾರ್ಯಗಳಿಗೆ ಅವರು ಸರ್ಕಾರದ ಮುಂದೆ ಬರಬಾರದು ಎನ್ನುವ ಉದ್ದೇಶದಿಂದ ಈ ಪ್ರಜಾಪ್ರಭುತ್ವದಲ್ಲಿ ಈ ಜಿಲ್ಲಾ ಪರಿಷತ್ತು ಆಗಬೇಕು ಎಂದು ಹೇಳುತ್ತೇನೆ. ಮತ್ತು ಜನಗಳು ಈ ಪ್ರಜಾಪ್ರಭುತ್ವದಲ್ಲಿ ಪರಿಣಾಮಕಾರವಾದ ರೀತಿಯಲ್ಲಿ ಭಾಗವಹಿಸುವಂತೆ ಮಾಡದಿದ್ದರೆ ಈ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ ಎನ್ನುವ ತತ್ವವನ್ನು ಬಹಳ ಕಾಲದಿಂದಲೂ ಸರ್ಕಾರದವರು ಹೇಳುತ್ತಾ ಬಂದರೂ ಕೂಡ ಆಗಲಿಲ್ಲ. ಆದುದರಿಂದ ಈಗ ಅವರು ಧೈರ್ಯ ಮಾಡಿ ಈ ಜಿಲ್ಲಾ ಪರಿಷತ್ತುಗಳು ಖಾಸಗೀ ಅಧ್ಯಕ್ಷರಿಂದಲೇ ನಡೆಸಬೇಕು ಎನ್ನುವ ಒಂದು ನಿರ್ಣಯಕ್ಕೆ ಬಂದಿರುವುದು ಸ್ವಾಗತಾರ್ಹ. ಈ ವಿಚಾರ 7–8 ವರ್ಷಗಳಿಂದಲೂ ಬರೀ ಕಾರ್ಯಾಚರಣೆಯಲ್ಲಿ ಹಾಗೆಯೇ ನಿಂತಿತ್ತು. ಹಿಂದೆ ಹಳ್ಳಿಗಾಡಿನ ಜನರು ಪಂಚಾಯಿತಿಗಳಿಗೆ, ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ, ಮತ್ತು ಜಿಲ್ಲಾ ಪರಿಷತ್ತಿಗೆ ಖಾಸಗೀ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಮತ್ತೆ ಈ ಅವಕಾಶವನ್ನು ಸರ್ಕಾರದವರು ಕಲ್ಪಿಸಿಕೊಟ್ಟ ಉದ್ದೇಶ ಜಿಲ್ಲಾ ಮಟ್ಟದಲ್ಲಿ ಖಾಸಗಿ ಮುಖಂಡತ್ವ ಬೆಳೆದರೆ ಎಲ್ಲದಕ್ಕೂ ಅನುಕೂಲವಾಗುತ್ತದೆ ಎಂದು. ಈ ರಾಜಕಾರಣದಿಂದ ಹೆಚ್ಚು ಜನರನ್ನು ತರಬೇತಿ ಮಾಡಿದಂತಾಗಿ ಈ ಪ್ರಜಾಪ್ರಭುತ್ವದಲ್ಲಿ ಜನತೆಯು ಒಂದು ಸಣ್ಣ ವಿಷಯಕ್ಕಾಗಿಯೂ ಸರ್ಕಾರದ ಮುಂದೆ ಬಂದು ಕೈ ಜೋಡಿಸಿ ನಮ್ಮ ಕೆಲಸ ಏನಾಯಿತು ಎಂದು ಕೇಳುವುದು ಮಾಯವಾಗುತ್ತದೆ. ಈ ಸ್ಥಳೀಯ ಸಂಸ್ಥೆಗಳು ಸ್ಕೂಲುಗಳ ಕೆಲಸಗಳು, ಗ್ರಾಮಾಭಿವೃದ್ಧಿಯ ಕೆಲಸಕಾರ್ಯಗಳು ಮಾಡುವಂಥ ಅವಕಾಶ ಈ ಮಸೂದೆಯಲ್ಲಿ ಇದೆ. ಆದುದರಿಂದ ಈ ಮಸೂದೆಯನ್ನು ಒಂದು ಒಳ್ಳೆಯ ಉದ್ದೇಶಕ್ಕೆ ತಂದಿದ್ದಾರೆ ಎಂದು ಹೇಳಿ ಸರ್ಕಾರವನ್ನೂ ವಂದಿಸುತ್ತೇನೆ.

ಮಾನ್ಯ ರಾಜ್ಯಪಾಲರ ಭಾಷಣ ದೊಡ್ಡದಾಗಿದ್ದರೂ ಕೂಡ ಅನೇಕ ಸಮಸ್ಯೆಗಳನ್ನು ವಿಸ್ತರಿಸಿದ್ದಾರೆ. ಈ ಸಮಸ್ಯೆಯನ್ನೆಲ್ಲಾ ಪರಿಹರಿಸುವಂತೆ ಮಾಡಬೇಕು. ನಾವು ದುಃಸ್ಥಿತಿಯಲ್ಲಿದ್ದರೂ ಕೂಡ ದೇಶಾಭಿವೃದ್ಧಿಯನ್ನು ಕ್ರಾಂತಿಕಾರಕ ರೀತಿಯಲ್ಲಿ ನಡೆಸಿ ದೇಶವನ್ನು ಸುಖೀ ರಾಜ್ಯವನ್ನಾಗಿ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡೋಣ. ಮಾಡತಕ್ಕ ಕಾರ್ಯದಲ್ಲಿ ಮಾನ್ಯ ಸದಸ್ಯರೆಲ್ಲರ ಸಹಾಯ, ಸಹಾನುಭೂತಿ ಅಗತ್ಯ ಎನ್ನುವುದನ್ನು ತಮ್ಮಲ್ಲಿ ಭಿನ್ನವಿಸಿಕೊಂಡು ಶ್ರೀಮಾನ್ ಬೊಮ್ಮೈ ಅವರು ತಂದಿರತಕ್ಕಂಥ ವಂದನಾ ನಿರ್ಣಯಕ್ಕೆ ನನ್ನ ಸಂಪೂರ್ಣ ಸಹಕಾರವನ್ನು ಕೊಡುತ್ತೇನೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ-ಬೆಂಗಳೂರು).—ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯಪಾಲರು ನಮ್ಮ ಮುಂದೆ ರಾಜ್ಯದ ಆಗುಹೋಗುಗಳ ಬಗ್ಗೆ ತಮ್ಮ ಸಂದೇಶವನ್ನು ಕೊಟ್ಟಿದ್ದಾರೆ.

ಆದರೆ ಮಾಮೂಲಾಗಿ ಕೊಡತಕ್ಕಂಥ ಸಂದೇಶಕ್ಕಿಂತ ಈ ವರ್ಷ ಕೊಟ್ಟಿರುವ ಪುಟಗಳು ಹೆಚ್ಚಾಗಿವೆ. ಈ ರಾಜ್ಯಪಾಲರ ಸಂದೇಶದಲ್ಲಿ ಜನಗಳ ನೈತಿಕ ಮಟ್ಟ ಹೆಚ್ಚಿಸುವುದಕ್ಕಾಗಲಿ ಅಥವಾ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸುವುದಾಗಲಿ ಅದು ಬಿಟ್ಟು ಇರತಕ್ಕಂಥ ಕಷ್ಟಗಳನ್ನು ನಿವಾರಣೆ ಮಾಡುವುದರ ಬಗ್ಗೆ ಯಾವ ಒಂದು ಸರಿಯಾದಂಥ ನಿಲುವನ್ನು ಕೊಡದೇ ಇರುವುದು ಬಹಳ ಶೋಚನೀಯವಾಗಿದೆ. ನಮ್ಮ ದೇಶದಲ್ಲಿ ಈಗ ಗಂಡ ಹೆಂಡಿರ ಜಗಳದಿಂದ ಕೂಸು ಬಡವಾಯಿತು ಅಂದಹಾಗೆ ಕಾಂಗ್ರೆಸ್‌ನವರು ಅನೀತಿವಂತರಾದರು. ವಿರೋಧ ಪಕ್ಷದವರು ಅಯೋಗ್ಯರಾದರು ಎಂದು ಜನ ಹೇಳುತ್ತಿದ್ದಾರೆ. ಇದಕ್ಕೆ ಅವಕಾಶ ಕೊಟ್ಟಿರುವ ರಾಜಕೀಯ ಮುಂದಾಳುಗಳು ಈ ರಾಜ್ಯವನ್ನು ಛಿದ್ರಿಸಿದರೆ ಬಹಳ ಅನ್ಯಾಯ ಮಾಡಿದಂತೆ ಆಗುತ್ತೆ ಎಂದು ತಿಳಿದುಕೊಂಡಿದ್ದೇನೆ. ಈಗ ನಮ್ಮನ್ನೇ ನಂಬಿರತಕ್ಕ ಜನಕ್ಕೆ ಸರಿಯಾದ ಯೋಜನೆಯನ್ನು ತೋರಿಸದೆ ಇರುವುದು, ಸರಿಯಾದ ನಾಯಕತ್ವ ಇಲ್ಲದೇ ಇರುವುದು ಬಹಳ ಶೋಚನೀಯವಾದ ವಿಚಾರ. ಅಧಿಕಾರದಲ್ಲಿರುವ ಪ್ರತಿಯೊಬ್ಬನೂ ತಮ್ಮ ಸರ್ಕಾರವನ್ನು ಬಳಸಿಕೊಳ್ಳುವುದಕ್ಕೆ ಹಾಗೂ ತಮ್ಮ ನಾಯಕತ್ವವನ್ನು ಉಳಿಸಿಕೊಳ್ಳುವುದಕ್ಕೆ ನಾನಾ ಅಕ್ರಮಗಳನ್ನು ಮಾಡುವುದರಿಂದ ದೇಶದ ಪರಿಸ್ಥಿತಿ ಹಿಂದಕ್ಕೆ ಹೋಗುತ್ತಾ ಇರುವುದು ಬಹಳ ಶೋಚನೀಯವಾದ ವಿಚಾರ. ಈ ಸಂದರ್ಭದಲ್ಲಿ ಈಗಲಾದರೂ ಕೂಡ ನಾನು ಹೇಳುತ್ತೇನೆ. ಜನಗಳಿಗೆ ಸರಿಯಾದ ಮಾರ್ಗದರ್ಶನವನ್ನು ತೋರಿಸದೇ ಹೋದರೆ ಜನಗಳು ಕಂಗೆಟ್ಟುಹೋಗುವ ಪರಿಸ್ಥಿತಿ ಬರುತ್ತದೆ ಎಂದು ಹೇಳುತ್ತೇನೆ. ಈಗ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಮೊದಲನೆಯದಾಗಿ ದೇಶದ ಅನ್‌ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳುತ್ತೇನೆ. ನಿರುದ್ಯೋಗಿಗಳಿಗೆ ಕೆಲಸ ಇಲ್ಲದೆ ಒದ್ದಾಡುತ್ತಾ ಇರುವುದರ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿ ಬಹಳ ಹೆಚ್ಚಿನ ರೀತಿಯಾಗಿ ಪವರ್ ರೀಸೋರ್ಸಸ್ ಇದೆ. ಮತ್ತು ನ್ಯಾಚುರಲ್ ರಿಸೋರ್ಸಸ್ ಯಥೇಚ್ಛವಾಗಿದೆ. ಮತ್ತು ಕುಶಲ ಮತ್ತು ಕುಶಲ ಇಲ್ಲದೆ ಲೇಬರರ್ಸ್ ಬೇಕಾದಷ್ಟು ಇದೆ. ಕಾರ್ಮಿಕರ ಸಹಕಾರ ಮತ್ತು ಪ್ರಕೃತಿಯ ಸೌಕರ್ಯ ಮತ್ತು ಹೆಚ್ಚಿನ ಪವರ್ ರಿಸೋರ್ಸಸ್ ಇರತಕ್ಕಂಥ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಇರುವುದು ಬಹಳ ಶೋಚನಿಯವಾದುದು. ಇದಕ್ಕೆ ಮುಖ್ಯವಾದ ಕಾರಣ ಈಗ ಆಡಳಿತ ನಡೆಸುತ್ತಾ ಇರತಕ್ಕ ಸರ್ಕಾರದವರು ಜನತೆಗೆ ಸರಿಯಾದಂಥ ಮಾರ್ಗದರ್ಶನ ಕೊಡದೆ ತಮ್ಮ ಸ್ವಾರ್ಥತೆಯನ್ನು ಬಳಸಿಕೊಂಡು ದೇಶದ ಹಿತದೃಷ್ಟಿಯಿಂದ ಆಗಬೇಕಾದ ಸೌಲಭ್ಯಗಳನ್ನು ಮೂಲೆಗಿಟ್ಟು ಜನತೆಯನ್ನು ಈ ತರಹ ಕಷ್ಟಕ್ಕೆ ಒದಗಿಸಿರುವುದು ಬಹಳ ಶೋಚನೀಯವಾದುದು.

ಇನ್ನು ತುಕೋಳ್ ವರದಿ ಬಗ್ಗೆ ತಾವು ಕಾರ್ಯಕ್ರಮ ತೆಗೆದುಕೊಂಡು ನಮ್ಮ ಸರ್ಕಾರಿ ನೌಕರರಿಗೆ ಸಹಾಯ ಮಾಡಿದ್ದೇವೆ ಎನ್ನುವ ಅಂಶವನ್ನು ತಿಳಿಸಿದ್ದಾರೆ. ಆದರೆ ಸರ್ಕಾರದವರು

6-00 P.M.

ಇದರ ಬಗ್ಗೆ ತಾಳಿದ ನಿಲುವಿನಿಂದ ಯಾರಿಗೂ ಹೆಚ್ಚಿನ ಸಮಾಧಾನವಾಗುವುದಿಲ್ಲ. ತುಕೋಳ್ ಸಮಿತಿ ವರದಿ ಬಂದ ತಕ್ಷಣ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳುವುದಕ್ಕೆ ಬದಲಾಗಿ ತಕ್ಷಣ ಕಾರ್ಯಕ್ರಮ ತೆಗೆದುಕೊಂಡಿದ್ದರೆ ನಮ್ಮ ಸರಕಾರದ ನೌಕರರುಗಳ ಒಂದು ಗುಡ್ ವಿಲ್ ಸಿಗುತ್ತಿತ್ತು. ಮತ್ತು ಐದನೇ ಫೈನಾನ್ಸ್ ಕಮಿಷನ್‌ನಿನವರಿಂದ ಸ್ವಲ್ಪಮಟ್ಟಿಗಾದರೂ ಪರಿಹಾರ ಸಿಗುತ್ತಿತ್ತು. ಇದರಿಂದಾಗಿ ಫೈನಾನ್ಸ್ ಕಮಿಷನ್ನಿನವರು ಅವರ ಅವಾರ್ಡು ಕೊಡುವಾಗ ನಮ್ಮ ರಾಜ್ಯಕ್ಕೆ ಅನ್ಯಾಯವಾಯಿತು. ಹೀಗೆ ಅನ್ಯಾಯವಾದುದರಿಂದ ನಮಗೆ ಈಗ ಬಹಳ ತೊಂದರೆಯಾಗುತ್ತಿದೆ. ಹೀಗೆ ರಾಜ್ಯ ಸರಕಾರ ತಮ್ಮ ಅಧಿಕಾರವನ್ನುಳಿಸಿಕೊಳ್ಳುವುದಕ್ಕಾಗಿ ಆಗಿಂದಾಗ್ಗೆ ಇಂತಹ ತೀರ್ಮಾನಗಳನ್ನು ತೆಗೆದುಕೊಳ್ಳುವುದರಿಂದ ಜನರಿಗೆ ಬಹಳ ಅನ್ಯಾಯವಾಗುತ್ತದೆ. ಇದು ತುಂಬಾ ಶೋಚನಿಯವಾದ ವಿಚಾರ. ನಮ್ಮ ದೇಶದಲ್ಲಿ ಸರಕಾರದವರು ಅನೇಕ ಇಲಾಖೆಗಳನ್ನು ತಮ್ಮ ಅನುಕೂಲಕ್ಕೆ ತಕ್ಕಹಾಗೆ ಮಾಡಿಕೊಂಡು ಇದ್ದಾರೆ. ಇದರಿಂದ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಅಲ್ಲದೆ ಸರಕಾರದಲ್ಲಿ ಸರಿಯಾದ ನಾಯಕತ್ವವಿಲ್ಲದೇ ಇರುವುದರಿಂದ ಸರಕಾರದ ಕೆಲಸಗಳು ಸರಿಯಾಗಿ ಆಗದೆ ನಷ್ಟವಾಗುತ್ತಿವೆ. ಇದು ತುಂಬಾ ಶೋಚನೀಯವಾದ ವಿಚಾರ. ರಾಜ್ಯದ ನೌಕರುಗಳಿಗೆ ಸಾಕಾದಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕಾದುದು ಸರಕಾರದವರ ಕರ್ತವ್ಯ. ಅದಕ್ಕೆ ತಕ್ಕಂತೆ ಸರಕಾರದ ನೌಕರರುಗಳೂ ನಿಷ್ಠೆಯಿಂದ ಹಾಗೂ ಶ್ರದ್ಧೆಯಿಂದ ತಮ್ಮ ಕೆಲಸಗಳನ್ನು ಮಾಡಿ ಜನರಿಗೆ ಅನುಕೂಲ ಮಾಡಿಕೊಬೇಕು.

(ಶ್ರೀ ಟಿ. ಆರ್. ಶಾಮಣ್ಣ)

ಇದರ ಬಗ್ಗೆ ತಾಕೋಳ ಸಮಿತಿಯವರೂ ಕೂಡ ಹೇಳಿದ್ದಾರೆ. ನೌಕರರುಗಳಿಗೆ ಸಂತೋಷವುಂಟಾಗುವಂತಹ ಕೆಲಸಗಳನ್ನು ಸರಕಾರದವರು ಮಾಡುವಾಗ ನೌಕರರುಗಳು ಕೂಡ ದೇಶದ ಪರಿಸ್ಥಿತಿಯನ್ನರಿತು ಅದನ್ನು ಉತ್ತಮಪಡಿಸಲು ಸಹಾಯಕರಾಗುತ್ತಾರೆ ಎಂದು ನಾನು ನಂಬುತ್ತೇನೆ. ಇನ್ನು ಸರಕಾರದಲ್ಲಿ ಲಂಚ ರುಷುವತ್ತುಗಳು ಬರಬರುತ್ತಾ ಜಾಸ್ತಿಯಾಗುತ್ತಾ ಬರುತ್ತಿದೆ. ಯಾವ ಇಲಾಖೆಯಲ್ಲಿ ನೋಡಿದರೂ ಲಂಚವಿಲ್ಲದೆ ಕೆಲಸಗಳೇ ಆಗುವುದಿಲ್ಲ. ಇದರಲ್ಲೂ ನಮ್ಮ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಪ್ರತಿಯೊಬ್ಬ ನಾಕರರು ಲಂಚ ಇಲ್ಲದೆ ಯಾವ ಕಾಗದವನ್ನೂ ಮುಟ್ಟುವುದಿಲ್ಲ. ಇದರಿಂದ ಜನರನ್ನು ಶೋಷಣೆ ಮಾಡಿ ಜನರಿಗೆ ತೊಂದರೆಗಳನ್ನು ಕೊಡುತ್ತಿದ್ದಾರೆ. ಇದರ ಬಗ್ಗೆ ಸರಕಾರ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಇರುವುದು ನೋಡಿದರೆ ತುಂಬಾ ಶೋಚನೀಯವಾಗುತ್ತವೆ. ಇನ್ನು ಲೋಕಲ್ ಕ್ಯಾಂಡಿಡೇಟುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನೋ ಒಂದು ರೀತಿಯಾದ ತೀರ್ಮಾನ ತೆಗೆದುಕೊಂಡಿದ್ದಾರೆ. ಇದರಿಂದ ನಿಜವಾಗಿಯೂ ಲೋಕಲ್ ಕ್ಯಾಂಡಿಡೇಟುಗಳಿಗೆ ಸರಿಯಾದ ರೀತಿಯಲ್ಲಿ ಪರಿಹಾರ ಸಿಗುವುದಿಲ್ಲ. ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದರಿಂದಾಗಿ ಇಂದು ಅನೇಕ ಕಡೆಗಳಲ್ಲಿ ಇರುವ ಲೋಕಲ್ ಕ್ಯಾಂಡಿಡೇಟರುಗಳು ಎರಡು ಮೂರು ವರ್ಷಗಳ ಕಾಲ ಕೆಲಸ ಮಾಡಿ ಕೆಲಸ ಇಲ್ಲದೆ ಇಂದು ತೊಂದರೆಪಡುತ್ತಿದ್ದಾರೆ. ಇದು ಬಹಳ ಶೋಚನೀಯವಾದ ವಿಚಾರ.

ಇನ್ನು ಸಣ್ಣ ಭೂಮಿ ಹಿಡುವಳಿದಾರರ ಬಗ್ಗೆ ಅನೇಕ ವಿಧವಾದ ಆಶೋತ್ತರಗಳನ್ನು ಸರಕಾರದವರು ಕೊಡುತ್ತಾ ಬರುತ್ತಿದ್ದಾರೆ. ಆದರೆ ಇಂದು ಸರಕಾರ ಹೇಳಿದಂತೆ ಮಾಡದೇ ಇರುವುದರಿಂದ ಇಂದು ಸಣ್ಣ ಹಿಡುವಳಿದಾರರುಗಳಿಗೆ ಬಹಳ ಕಷ್ಟವಾಗುತ್ತಿದೆ. ಅನೇಕ ಕಡೆ ಸಣ್ಣ ಹಿಡುವಳಿದಾರರುಗಳಿಂದ ಭೂಮಿಯನ್ನು ಪಡೆದುಕೊಂಡರೂ ಅವರಿಗೆ ಸರಿಯಾದ ರೀತಿಯಲ್ಲಿ ಪರಿಹಾರವನ್ನು ಕೊಡದೇ ಇರುವುದರಿಂದ ಇಂದು ಅವರು ಜೀವನ ನಡೆಸುವುದೇ ಕಷ್ಟವಾಗಿದೆ. ಸಣ್ಣ ಹಿಡುವಳಿದಾರರುಗಳ ಹಿತದೃಷ್ಟಿಯಿಂದ ಸರಕಾರ ಸಹಾಯ ಮಾಡಬೇಕು. ಇದರಲ್ಲಿ ಸರಕಾರ ಹಾವು ಹೊಡೆದು ಹದ್ದಿಗೆ ಹಾಕಿದರು ಎನ್ನುವ ಮನೋಭಾವನೆಯಂತೆ ವರ್ತಿಸುತ್ತಿದ್ದಾರೆ ಇದನ್ನು ತಪ್ಪಿಸಬೇಕು.

ಇನ್ನು ವಿದ್ಯಾಭ್ಯಾಸದ ವಿಚಾರವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ದೇಶದಲ್ಲಿ ವಿದ್ಯಾಭ್ಯಾಸದ ಯೋಜನೆಗಳ ಸಂಖ್ಯೆಯೇನೋ ಬೆಳೆಯುತ್ತಲೇ ಇದೆ. ಬಡ್ಜೆಟ್ಟಿನಲ್ಲಿ ಹೋದವರ್ಷ 36 ಕೋಟಿಯಷ್ಟು ಇದುದ್ದು ಈ ವರ್ಷ ಸುಮಾರು 46 ಕೋಟಿಯವರೆಗೆ ಖರ್ಚು ಮಾಡುತ್ತಿದ್ದಾರೆ. ಇಲಾಖೆಗಳ ಸಂಖ್ಯೆಯು ಬಲವೇನೋ ಬೆಳೆಯುತ್ತಿದೆ. ಆದರೆ ವಿದ್ಯಾಭಿವೃದ್ಧಿ ಮಾಡಿಕೊಳ್ಳುವ ವಿದ್ಯಾರ್ಥಿಗಳ ಮನೋಭಾವ ಹೆಚ್ಚಾಗಲಿಲ್ಲ. ಸಾಕಾದಷ್ಟು ವಿದ್ಯಾರ್ಥಿಗಳಿಗೆ ವಿದ್ಯೆಯ ಸೌಕರ್ಯಗಳು ಸಿಗುತ್ತಿಲ್ಲ ಇದು ಇನ್ನೂ ಕೆಳಮಟ್ಟದಲ್ಲೇ ಇದೆ ಎಂದು ಹೇಳುವುದು ತುಂಬಾ ಶೋಚನೀಯವಾದ ವಿಚಾರ. ಸರಕಾರದವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಅಧಿಕಾರಿಗಳನ್ನು ಬೆಳೆಸುತ್ತಿದ್ದಾರೆ. ಶಾಲೆಗಳ ಸಂಖ್ಯೆ ಬೆಳೆಸುತ್ತಿದೆ. ವಿದ್ಯಾರ್ಥಿಗಳಲ್ಲಿ ನೈತಿಕ ಹಾಗೂ ಸಾಮಾಜಿಕ ಮಟ್ಟ ಹೆಚ್ಚು ಹೆಚ್ಚಾಗಿ ಬೆಳೆಯಲು ಅವಕಾಶ ಕೊಡದೇ ಇರಲು ಸರಕಾರ ಅನುಸರಿಸುತ್ತಿರುವ ನೀತಿಯೇ ಕಾರಣ, ಇದು ತುಂಬಾ ಶೋಚನೀಯವಾದ ವಿಚಾರ. ಇನ್ನು ಟೆಕ್ಸ್ಟ್‌ಬುಕ್ಕುಗಳ ಬಗ್ಗೆ ಹೇಳಿದ್ದಾರೆ. ಟೆಕ್ಸ್ಟ್‌ಬುಕ್ಕುಗಳನ್ನೆಲ್ಲಾ ರಾಷ್ಟ್ರೀಕರಣ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇತ್ತೀಚೆಗೆ ಟೆಕ್ಸ್ಟ್ ಬುಕ್ಕುಗಳು ಸರಿಯಾಗಿ ಸಕಾಲದಲ್ಲಿ ವಿದ್ಯಾರ್ಥಿಗಳಿಗೆ ಸಿಗುತ್ತಿಲ್ಲ. ಇಂತಹ ಪುಸ್ತಕಗಳನ್ನು ಶಾಲೆಗಳನ್ನು ಆರಂಭಿಸುವುದಕ್ಕಿಂತ ಮೊದಲೇ ಹುಡುಗರಿಗೆ ಸಿಗುವಂತೆ ಮಾಡಬೇಕು. ಈಗ ಶಾಲೆಗಳು ಆರಂಭವಾಗಿ ಎರಡು ಮೂರು ತಿಂಗಳಾದರೂ ಕೂಡ ಹುಡುಗರಿಗೆ ಪುಸ್ತಕಗಳು ಸಿಗದೇ ತೊಂದರೆಯಾಗುತ್ತಿದೆ. ಅಲ್ಲದೆ ಟೆಕ್ಸ್ಟ್ ಬುಕ್ಕುಗಳನ್ನು ಬರೆಸುವಾಗ ಸರಿಯಾದ ಪರಿಣತರಿಂದ ಬರೆಸುವ ವ್ಯವಸ್ಥೆ ಮಾಡಬೇಕು. ಇದರಲ್ಲಿ ಪ್ರಭಾವಕ್ಕೆ ಒಳಗಾಗಿ ಪುಸ್ತಕಗಳನ್ನು ಮಾಡುತ್ತಿದ್ದಾರೆ ಎಂದು ಕೇಳಿಬರುತ್ತಿದೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮೈಸೂರು ದೇಶದಲ್ಲಿ ಪವರು ಉತ್ಪತ್ತಿ ಹೆಚ್ಚಾಗುತ್ತಿದ್ದರೂ ಇದನ್ನು ಸರಿಯಾಗಿ ಉಪಯೋಗಿಸದೇ ಇರುವುದರಿಂದ ಎಷ್ಟೋ ಕಡೆ ನಷ್ಟವಾಗುತ್ತಿದೆ ಎಂದು ಜನರ ಮೇಲೆ ಹೆಚ್ಚು ರೇಟನ್ನು ಹಾಕುತ್ತಿದ್ದಾರೆ. ಸಾಕಾದಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಲು ಅವಕಾಶ ಕೊಡುತ್ತಿಲ್ಲ ಮತ್ತು ಹೆಚ್ಚು ಲಾಭದಾಯಕವಾಗಿ ಮಾಡುವುದಕ್ಕೆ ಬದಲಾಗಿ ದರಗಳನ್ನು ಹೆಚ್ಚು ಮಾಡುತ್ತಿದ್ದಾರೆ. ಇದರಿಂದಾಗಿ ಜನರಿಗೆ ಬಹಳ ಅನ್ಯಾಯಗಳಾಗುತ್ತಿವೆ. ಇಲ್ಲಿ ಅನೇಕ ಸದಸ್ಯರು

ವ್ಯವಸಾಯಗಾರರಿಗೆ ಬಹಳ ಕಷ್ಟಗಳಾಗುತ್ತಿವೆ. ಇದಕ್ಕಾಗಿ ಅವರಿಗೆ ಪವರು ಕೊಡುವಾಗ ಕಮ್ಮಿದರದಲ್ಲಿ ಹಾಕಬೇಕೆಂದು ಒತ್ತಾಯಮಾಡಿ ಕಡಿಮೆ ಮಾಡಿದರು. ಆದರೆ ನಮ್ಮ ಬೆಂಗಳೂರಿನಲ್ಲಿ ನಾವು ನೋಡಿದರೆ ಸಾಧಾರಣವಾಗಿ ನಾನಾ ರೀತಿಯ ಸೆಸ್‌ಗಳನ್ನು ಹಾಕಿ ಜನಸಾಮಾನ್ಯರ ಮೇಲೆ ಹೆಚ್ಚು ಪವರು ರೇಟುಗಳನ್ನು ಹಾಕುತ್ತಿದ್ದಾರೆ. ಇದರಿಂದ ಜನಕ್ಕೆ ಬಹಳ ಕಷ್ಟವಾಗುತ್ತಿದೆ. ಪವರನ್ನು ತಯಾರು ಮಾಡುವಾಗ ಒಂದು ಯೂನಿಟ್ಟಿಗೆ ಎರಡು ಕಾಸಾದರೆ ಅದನ್ನು ಜನರಮೇಲೆ ಹಾಕುವಾಗ ಒಂದು ಯೂನಿಟ್ಟಿಗೆ 30 ಪೈಸ ಎಂದು ಹಾಕಿದರೆ ಇದು ಸರಿಯೆ ? ಹಿಂದೆ ಸರಕಾರಕ್ಕೆ ಎಲೆಕ್ಟ್ರಿಕ್ ವರಮಾನ ಐದು ಕೋಟಿ ಬರುತ್ತಿದ್ದುದು ಇಂದು 20 ಕೋಟಿಯವರಗೆ ಉತ್ಪತ್ತಿಯಾಗುತ್ತಿದೆ. ಸರಕಾರ ಜನರ ಮೇಲೆ ಹೆಚ್ಚು ಭಾರವನ್ನು ಹೊರಿಸದೆ ಕಡಿಮೆ ಮಾಡಬೇಕೆಂದು ಸೂಚಿಸುತ್ತೇನೆ. ಹೀಗೆ ಹೆಚ್ಚು ಭಾರ ಹಾಕುವುದು ಸರಿಯಾದುದಲ್ಲ. ಆದುದರಿಂದ ಸರಕಾರದವರು ಜನಸಾಮಾನ್ಯರಿಗೆ ಪವರು ರೇಟುಗಳಲ್ಲಿ ಕಡಿಮೆ ಮಾಡಿ ಸಮಂಜಸವಾದ ರೇಟುಗಳಲ್ಲಿ ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ಅನೇಕ ಕಡೆ ಕೋರ್ಟುಗಳಿಗೆ ಕಟ್ಟಡಗಳನ್ನು ಕಟ್ಟಬೇಕೆಂದಿದ್ದಾರೆ. ಬೆಂಗಳೂರಿನಲ್ಲಿ ಇರುವ ಕೋರ್ಟುಗಳ ಕಟ್ಟಡವನ್ನು ಯಾರಾದರೂ ಹೋಗಿ ನೋಡಿದರೆ ಅದು ಒಂದು ಸಂತೆ ಇದ್ದಹಾಗೆ ಇದೆ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಆದುದರಿಂದ ಇಂತಹ ಕೋರ್ಟು ಕಟ್ಟಡಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಕಟ್ಟಿ ಜನರಿಗೂ ಎಲ್ಲ ವಿಧವಾದ ಸೌಲಭ್ಯಗಳೂ ದೊರಕುವಂತೆ ತೀವ್ರವಾದ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಮತ್ತೆ ಬೆಂಗಳೂರು ನಗರ ಕಾರ್ಪೊರೇಷನ್ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ನನಗೆ ಸಾಕಷ್ಟು ಸಮಯ ಇಲ್ಲದುದರಿಂದ ಇದನ್ನು ಆಯಾ ಡಿಮ್ಯಾಂಡು ಬಂದಾಗ ಸ್ವಲ್ಪ ಅವಕಾಶ ಪಡೆದುಕೊಂಡು ಹೇಳುತ್ತೇನೆ. ಆದರೆ ಬೆಂಗಳೂರು ನಗರಕ್ಕೆ ಸೇರಿದ ಸಾರಿಗೆ ಇಲಾಖೆ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ಹಿಂದೆ ಬೆಂಗಳೂರು ನಗರ ಸುಮಾರು 26 ಚದುರ ಮೈಲಿ ಇತ್ತು. ಇಂದು ಸುಮಾರು 46 ಚದುರಮೈಲಿಗಳಷ್ಟು ಆಗಿದೆ. ಹಿಂದೆ ಈ ನಗರದ ಜನಸಂಖ್ಯೆ ಸುಮಾರು 7-8 ಲಕ್ಷ ಇದ್ದುದು ಈಗ ಸುಮಾರು 15—16 ಲಕ್ಷದಷ್ಟು ಹೆಚ್ಚಾಗಿ ಏರಿದೆ. ಇದರಿಂದ ಬೆಂಗಳೂರು ನಗರಕ್ಕೆ ಬರುವ ಪ್ರಯಾಣಿಕರಿಗೆ ಸಾಕಷ್ಟು ಸೌಕರ್ಯಗಳನ್ನು ಸಾರಿಗೆ ಇಲಾಖೆಯವರು ಒದಗಿಸಿಕೊಡುತ್ತಿಲ್ಲ. ಹಿಂದೆ ಬಿ. ಟಿ. ಸಿ. ಕಂಪನಿ ಹಾಗೂ ಇತರ ಖಾಸಗಿ ಕಂಪನಿಗಳಿದ್ದಾಗ ಬಸ್ಸುಗಳು ಲಾಭಧಾಯಕವಾಗಿ ಕೆಲಸ ಮಾಡುತ್ತಿದ್ದವು ಮತ್ತು ಪ್ರಯಾಣಿಕರಿಗೆ ಹೆಚ್ಚು ಸೌಕರ್ಯಗಳು ಸಿಗುತ್ತಿತ್ತು. ಆದರೆ ಇಂದು ಸರಕಾರದವರೇ ನಡೆಸುತ್ತಿರುವ ಬಿ. ಟಿ. ಎಸ್. ಆಡಳಿತದಿಂದ ನಷ್ಟವಾಗುತ್ತಿದೆ ಎಂದು ಹೇಳುತ್ತಾರೆ. ಯಾವ ಬಸ್ಸಿನಲ್ಲಿ ನೋಡಿದರೂ ಜಾಗವೇ ಇಲ್ಲ ಎಂದು ಕೆಲವು ಕಡೆ ಜನರಿಗೆ ಸೀಟುಗಳೇ ಸಿಗುವುದಿಲ್ಲ. ನಾವು ಅನೇಕ ಕಡೆ ಜನರು ಬಸ್ಸುಗಳಿಗಾಗಿ ಕ್ಯೂನಿಂತಿರುವುದನ್ನು ದಿನವಹೀ ನೋಡಬಹುದು. ಇದೂ ಅಲ್ಲದೆ ಸರಕಾರದ ಬಸ್ಸುಗಳಲ್ಲಿರುವ ಕಂಡಕ್ಟರುಗಳ ನಡತೆ ಕೂಡ ಸರಿಯಾಗಿಲ್ಲ. ಸರಕಾರದ ಬಸ್ಸುಗಳ ನಷ್ಟಕ್ಕೆ, ಕಾರಣ ಇಲ್ಲಿರುವ ಕಂಡಕ್ಟರುಗಳೇ ಕಾರಣ ಆಗಿದ್ದಾರೆ. ಇವರು ಜನಗಳಿಗೆ ಸೌಕರ್ಯಗಳನ್ನು ಕೊಡುತ್ತಿಲ್ಲ. ಬಿ. ಟಿ. ಎಸ್. ಬಸ್ಸುಗಳವರು ಇನ್ನು ಮುಂದೆ ಆದರೂ ಜನರಿಗೆ ಹೆಚ್ಚು ಸೌಕರ್ಯ ಕೊಡುವಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಬೆಂಗಳೂರು ನಗರದಲ್ಲ ಇತ್ತೀಚೆಗೆ ಸೊಳ್ಳೆ ಕಾಟ ಜಾಸ್ತಿಯಾಗಿದೆ. ಇದಕ್ಕಾಗಿ 7-8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಕೂಡ ಯಾವ ಪ್ರಯೋಜನವೂ ಕೂಡ ಆಗಿಲ್ಲ. ಸೊಳ್ಳೆಪರದೆ ಇಲ್ಲದವರು ಮತ್ತು ಸರಿಯಾದ ವಾಸದ ಮನೆ ಇಲ್ಲದವರು ಈ ಸೊಳ್ಳೆಗಳಿಂದ ಕಡಿಸಿಕೊಳ್ಳಬೇಕಾಗಿದೆ. ಒಂದು ಕಡೆ ಸರ್ಕಾರದವರು ಜನರ ರಕ್ತವನ್ನು ಹೀರುತ್ತಿದ್ದರೆ ಇನ್ನೊಂದು ಕಡೆ ಈ ಸೊಳ್ಳೆಗಳು ಜನರ ರಕ್ತವನ್ನು ಹೀರುತ್ತಿವೆ. ಅರೋಗ್ಯ ಇಲಾಖೆ 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಕೂಡ ಸೊಳ್ಳೆ ಕಾಟ ತಪ್ಪಲಿಲ್ಲ. ಸರ್ಕಾರವು ಯಾವ ರೀತಿ ಅದಕ್ಷತೆಯಿಂದ ನಡೆಯುತ್ತಿದೆಯೋ ಅದರಂತೆ ಸೊಳ್ಳೆಯ ವಿಮೋಚನಾ ಕೆಲಸವು ಕೂಡ ನಡೆಯುತ್ತಿದೆ ಎಂದು ಹೇಳಬಹುದು. ನನ್ನೆಯ ದಿವಸ ಮಾನ್ಯ ಶಿವಪ್ಪನವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು, ಅದು ಬೆಂಗಳೂರು ವಾಟರ್ ಬೋರ್ಡಿನ ವಿಚಾರ. ಈ ಬೋರ್ಡನ್ನು ಅದಷ್ಟು ಜಾಗ್ರತೆ ಕಿತ್ತು ಹಾಕಿದರೆ ಬೆಂಗಳೂರಿನ ಜನರಿಗೆ ಕ್ಷೇಮ ಎಂದು ಕಾಣುತ್ತದೆ. ಬೆಂಗಳೂರಿಗೆ ಕಾವೇರಿನದಿಯಿಂದ ನೀರನ್ನು ತರಲು ಮೊದಲು 40 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದರು. ಮತ್ತು 1970ನೇ ಇಸವಿಯೊಳಗೆ ಕಾವೇರಿ ನೀರನ್ನು ಬೆಂಗಳೂರಿಗೆ ತರುತ್ತೇವೆಂದು ಹೇಳಿದ್ದರು. ಆದರೆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. 40 ಕೋಟಿ ರೂಪಾಯಿಗಳ ಯೋಜನೆಯನ್ನು

(ಶ್ರೀ ಟಿ. ಆರ್. ಶಾಮಣ್ಣ)

30 ಕೋಟಿ ರೂಪಾಯಿಗಳಿಗೆ ಇಳಿಸಿದರು ಈಗ ಮತ್ತೆ 23 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಕಾವೇರಿ ಜಲಾಶಯದಿಂದ ನೀರನ್ನು ಬೆಂಗಳೂರಿಗೆ ತರಲು ಬೇಕಾಗುವ ಪೈಪ್‌ಗಳ ಬಗ್ಗೆ ಟೆಂಡರ್ ಕರೆದಿದ್ದರು. ಟೆಂಡರ್ ಹಾಕಿಕೊಂಡವರಲ್ಲಿ 8 ಕೋಟಿ ರೂಪಾಯಿಗಳ ಕಡಿಮೆ ರೇಟ್ ಇದ್ದವರಿಗೆ ಕೆಲಸ ವಹಿಸದೆ 13 ಕೋಟಿ ರೂಪಾಯಿಗಳ ಹೆಚ್ಚಿನ ರೇಟನ್ನು ಕೊಟ್ಟವರಿಗೆ ಕೆಲಸ ವಹಿಸಬೇಕೆಂದಿದ್ದಾರೆ. ಇದರಿಂದಾಗಿ 5 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಕೊಡಲು ಒಪ್ಪಿಕೊಂಡಿದ್ದಾರೆ. ಈ ಹಣದ ಹೊರೆಯೂ ಕೂಡ ಜನರ ಮೇಲೆ ಬೀಳುತ್ತದೆ. ಮತ್ತು ಈ ಯೋಜನೆಯ ಕೆಲಸ ಮುಗಿದ ಮೇಲೆ ಬೆಂಗಳೂರಿನ ಜನರು ಸಾವಿರ ಗ್ಯಾಲನ್ ನೀರಿಗೆ 4 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ಕಾರಣದಿಂದ ಸರ್ಕಾರದವರೇ ಈ ಕೆಲಸವನ್ನು ಕೈಕೊಂಡು ವಾಟರ್ ಬೋರ್ಡನ್ನು ವಜಾ ಮಾಡಬೇಕು. ಇಲ್ಲದಿದ್ದರೆ ನಾವು ಪ್ರತಿಭಟಿಸಬೇಕಾಗುತ್ತದೆ. ಬೆಂಗಳೂರಿನ ಜನರು ಹೆಚ್ಚಿನ ನೀರಿನ ದರವನ್ನು ಕೊಡುವುದಕ್ಕೆ ತಯಾರು ಇಲ್ಲ. 8 ಕೋಟಿ ರೂಪಾಯಿಗಳಿಗೆ ಪೈಪನ್ನು ಸಪ್ಲೈ ಮಾಡುವುದಕ್ಕೆ ಒಪ್ಪಿರುವ ಕಂಪನಿಯವರು 10 ವರ್ಷದ ಗ್ಯಾರಂಟಿ ಕೊಟ್ಟಿದ್ದರೆ 13 ಕೋಟಿ ರೂಪಾಯಿಗಳಿಗೆ ಪೈಪನ್ನು ಸಪ್ಲೈ ಮಾಡುವುದಕ್ಕೆ ಒಪ್ಪಿರುವ ಕಂಪನಿಯವರು ಕೇವಲ 6 ತಿಂಗಳ ಗ್ಯಾರಂಟಿಯನ್ನು ಕೊಟ್ಟಿದ್ದಾರೆ. ಈ ಕಾರಣದಿಂದ 10 ವರ್ಷ ಗ್ಯಾರಂಟಿ ಕೊಟ್ಟಿರುವ ಮತ್ತು ಕಡಿಮೆ ರೇಟನ್ನು ಒಪ್ಪಿಕೊಂಡಿರುವವರಿಗೆ ಈ ಕೆಲಸವನ್ನು ವಹಿಸಬೇಕು. ಈ ಬಗ್ಗೆ ಪರಿಶೀಲನೆಮಾಡಿ ಸೂಕ್ತ ಕ್ರಮ ಕೈಕೊಳ್ಳಬೇಕು. ಏಕೆಂದರೆ ಇದಕ್ಕೆ ಸಂಬಂಧಪಟ್ಟವರು ಮದ್ರಾಸ್‌ಗೆ ಹೋಗಿ 1 ದಿವಸಗಳು ಇದ್ದು 13 ಲಕ್ಷ ರೂಪಾಯಿಗಳ ಟೆಂಡರನ್ನು ಒಪ್ಪಿಕೊಂಡಿದ್ದಾರೆಂದು ತಿಳಿದು ಬಂದಿದೆ. ಈ ಟೆಂಡರ್ ಬಗ್ಗೆ ಬೋರ್ಡಿನ ಒಬ್ಬ ಮೆಂಬರ್ ಕೂಡ ವಿರೋಧಿಸಿ ವಾಕ್‌ಔಟ್ ಮಾಡಿದ್ದಾರೆ. ಒಂದು ಪಕ್ಷ 13 ಕೋಟಿ ರೂಪಾಯಿಗಳ ಟೆಂಡರನ್ನು ಒಪ್ಪಿಕೊಂಡಿದ್ದೇ ಆದರೆ ಬೆಂಗಳೂರಿನಲ್ಲಿ ಮತ್ತೊಂದು ಚಳುವಳಿ ಆರಂಭವಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಕೊಟ್ಟು, ಈ ಬಗ್ಗೆ ಸರ್ಕಾರದವರು ಸಾಕಷ್ಟು ಪರಿಶೀಲನೆ ಮಾಡುತ್ತಾರೆಂದು ನಂಬಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎ. ಚನ್ನೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಾಡಿದ ಭಾಷಣಕ್ಕೆ ಶ್ರೀ ಬೊಮ್ಮಾಯಿ ಅವರು ಸೂಚಿಸಿರುವ ವಂದನಾ ನಿರ್ಣಯವನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ರಾಜ್ಯಪಾಲರ ಭಾಷಣ ಬಹಳ ಸುದೀರ್ಘವಾಗಿತ್ತು ಆದರೆ ನೀರಸವಾಗಿತ್ತು. ಮತ್ತು ಸದಸ್ಯರನ್ನು 100 ನಿಮಿಷಗಳ ಕಾಲದವರೆಗೆ ಮೌನವಾಗಿ ಕುಳ್ಳಿರಿಸಿತ್ತು. ರಾಜ್ಯಪಾಲರ ಭಾಷಣದಿಂದ ಸರ್ಕಾರದ ರೀತಿನೀತಿಗಳು ಏನು ಎನ್ನುವ ಅರಿವು ಸಭೆಗೆ ಆಗಿಲ್ಲ ಎಂದು ವಿಷಾದದಿಂದ ಹೇಳಲೇಬೇಕಾಗಿದೆ. ರಾಜ್ಯಪಾಲರು ತಮ್ಮ ಭಾಷಣವನ್ನು ಆಶಾಭಾವನೆಯಿಂದಲೇ ಪ್ರಾರಂಭ ಮಾಡಿ ಈ ರೀತಿ ಹೇಳಿದ್ದಾರೆ:

"ನಾಲ್ಕು ವರ್ಷಕಾಲ ಅಭೂತಪೂರ್ವವಾದ ಅನಾವೃಷ್ಟಿ ಕಳೆದ ಮೇಲೆ ಈ ವರ್ಷ ನಮ್ಮ ರಾಜ್ಯದಲ್ಲಿ ಒಳ್ಳೆಯ ಸುಗ್ಗಿ ಕಾರು ಬರುವಂತಾಗಿದೆ"

ಎಂದು ಹೇಳಿದ್ದಾರೆ. ನಾಲ್ಕು ವರ್ಷಗಳಕಾಲ ಅಭೂತಪೂರ್ವ ಅನಾವೃಷ್ಟಿಯಿಂದ ಕಷ್ಟವನ್ನು ಅನುಭವಿಸಿದಂಥ ಜನತೆಗೆ ಸರ್ಕಾರ ಏನೇನು ಪರಿಹಾರಕೊಟ್ಟಿದೆ ಎಂದು ಕೇಳುತ್ತೇನೆ. ಹಳ್ಳಿಗಾಡಿನಲ್ಲಿ ಶೇಕಡ 80 ರಷ್ಟು 'ಜನ ವಾಸಿಸುತ್ತಿದ್ದಾರೆ.' ಅವರು ನಾಲ್ಕು ವರ್ಷಕಾಲ ಏಕಪ್ರಕಾರವಾಗಿ ಮಳೆ ಬೆಳೆ ಇಲ್ಲದೆ ಕಷ್ಟವನ್ನು ಅನುಭವಿಸಿದ್ದರೂ ಕೂಡ ಸರ್ಕಾರದವರು ಕಂದಾಯ ಮಾಫಿ ವಿನಾಯಿತಿಯನ್ನು ಕೊಟ್ಟಿದ್ದಾರೆಯೇ? ಎಂದು ಕೇಳುತ್ತೇನೆ. ತಮಗೆ ಬೇಕಾದಂಥ ಪ್ರದೇಶಗಳಲ್ಲಿ ಮಾತ್ರ ಭೂಕಂದಾಯವನ್ನು ಮಾಫಿ ಮಾಡಿದ್ದಾರೆ. ಹಳೆಯ ಮೈಸೂರು ಪ್ರದೇಶದ ಬಹುಭಾಗದಲ್ಲಿ ಮಾಡಿಲ್ಲ. ಅನಾವೃಷ್ಟಿಯನ್ನು ಅನುಭವಿಸಿದ್ದು ಹೆಚ್ಚಾಗಿ ಹಳೆ ಮೈಸೂರು ಪ್ರದೇಶವೇ. ನನ್ನ ಕ್ಷೇತ್ರದಲ್ಲಿ ಕಂದಾಯವನ್ನು ಮಾಫಿ ಮಾಡಬೇಕೆಂದು ಕಳೆದ 2 ವರ್ಷದಿಂದಲೂ ಕೂಡ ಅರ್ಜಿಗಳ ಮತ್ತು ಭೇಟಿಯ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಆದರೆ ಈ ದಿವಸದವರೆಗೂ ಕೂಡ ಕಂದಾಯದ ವಿನಾಯಿತಿ ಕೊಡುವ ಆರ್ಡರನ್ನು ಸರ್ಕಾರ ಮಾಡಿಲ್ಲವೆಂದು ನನಗನ್ನಿಸುತ್ತದೆ. ಯಾವ ವಿರೋಧಪಕ್ಷದ ಕ್ಷೇತ್ರದವರಿಗೂ ಕೂಡ ಒಳ್ಳೆಯದು ಮಾಡಬೇಕೆಂದು ಮನಸ್ಸು ಈ ಸರ್ಕಾರಕ್ಕೆ ಇಲ್ಲ. ಕಂದಾಯ ಮಾಫಿ ಮಾಡುವ ವಿಷಯವನ್ನು ಚುನಾವಣಾ ಅಸ್ತ್ರವನ್ನಾಗಿ ಈ ಸರ್ಕಾರದವರು ಉಪಯೋಗಿಸಿಕೊಂಡರು. 1967ನೇ ಚುನಾವಣೆಯ ಕಾಲದಲ್ಲಿ ಕಂದಾಯವನ್ನು ರದ್ದು ಮಾಡುತ್ತೇವೆಂದು ಹೇಳಿದ್ದು ಚುನಾವಣೆಯ ನಂತರ ತಮ್ಮ ಮಾತನ್ನೇ ಮುರಿದರು.

ಈಗ ಮತ್ತೊಂದು ಘೋಷಣೆಯನ್ನು ಹೊರಡಿಸಿದ್ದಾರೆ. ಅದೇ ಶೀಘ್ರಭೂಸುಧಾರಣೆ ಘೋಷಣೆ. 1972ರೊಳಗೆ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಇದು ಕೂಡ ಚುನಾವಣಾ ಸ್ಟಂಟ್ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇದೇ ಕಾಂಗ್ರೆಸ್ ಸರ್ಕಾರ ಇರುವ ಉತ್ತರ ಪ್ರದೇಶದಲ್ಲಿ ಆರೂಕಾಲು ಎಕರೆಗಿಂತ ಕಡಿಮೆ ಇರುವ ಹಿಡುವಳಿದಾರರಿಗೆ ಭೂಕಂದಾಯವನ್ನು ರದ್ದು ಮಾಡಿದ್ದಾರೆ. ರಾಜಾಸ್ಥಾನದಲ್ಲಿ ಬೆಟರ್‌ಮೆಂಟ್ ಲೇವಿಯನ್ನೂ ಕೂಡ ಮೂರು ಎಕರೆಗಳಿಗಿಂತ ಕಡಿಮೆ ಇರುವ ಹಿಡುವಳಿದಾರರಿಗೆ, ಮಾಫಿ ಮಾಡಿದ್ದಾರೆ. ನಮ್ಮ ಸರ್ಕಾರದವರು ತದ್ವಿರುದ್ಧವಾಗಿ ರೈತರಿಗೆ ಯಾವ ವಿಧವಾದಂಥ ಸವಲತ್ತುಗಳನ್ನು ಸಹ ಕೊಡದೆ ಭೂಕಂದಾಯವನ್ನು ಏರಿಸಿಕೊಂಡು ಮುಂದುವರೆಸಿಕೊಂಡು ಬಂದಿದ್ದಾರೆ. ಈಗ 19 2ರೊಳಗೆ ಭೂಸುಧಾರಣೆಯನ್ನು ಜಾರಿಗೆ ತರಲು ತ್ವರಿತವಾದ ಕಾರ್ಯಕ್ರಮವನ್ನು ಹಾಕಿಕೊಂಡು ಅದಕ್ಕಾಗಿ ಟ್ರಿಬ್ಯೂನಲ್‌ಗಳನ್ನು ನೇಮಕ ಮಾಡಿದ್ದೇವೆ ಮತ್ತು ಶೀಘ್ರ ಇತ್ಯರ್ಥ ಮಾಡುವ ಸಲುವಾಗಿ ರೆವಿನ್ಯೂ ಅಧಿಕಾರಿಗಳಿಗೆ ಕೆಲವು ಅಧಿಕಾರ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದೆಲ್ಲಾ ಚುನಾವಣಾ ಸ್ಟಂಟ್ ಎಂದು ಹೇಳದೆ ಬೇರೆ ವಿಧಿ ಇಲ್ಲ. 1972ರ ಚುನಾವಣೆಗೋಸ್ಕರ ಇದನ್ನೆಲ್ಲಾ ಈಗಲಿಂದಲೇ ಹೇಳುತ್ತಿದ್ದಾರೆ. ಇನ್ನು ಎರಡು ವರ್ಷಗಳಲ್ಲಿ ಇದನ್ನೆಲ್ಲಾ ಮಾಡುವುದಕ್ಕೆ ಈ ಅದಕ್ಷ ಸರ್ಕಾರಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತೇನೆ. ಹೆಚ್ಚುವರಿ ಸರ್ಕಾರೀ ಜಮೀನನ್ನು ಭೂರಹಿತರಿಗೆ ಹಂಚಲು ಒಂದು ಸಮಿತಿಯನ್ನು ನೇಮಕ ಮಾಡುತ್ತೇವೆಂದು ಹೇಳಿದ್ದರು. ಆದರೆ ಇನ್ನೂ ಸಮಿತಿಯನ್ನೇ ನೇಮಕ ಮಾಡಿಲ್ಲ. ಭೂಮಾಲೀಕರಿಂದ ಹೆಚ್ಚುವರಿ ಜಮೀನನ್ನು ಪಡೆದುಕೊಂಡು ಅವರಿಗೆ ಪರಿಹಾರ ಕೊಡುವ ಸಲುವಾಗಿ 40 ಕೋಟಿ ರೂಪಾಯಿಗಳನ್ನು ಕಮರ್ಶಿಯಲ್ ಬ್ಯಾಂಕ್‌ಗಳಿಂದ ಪಡೆಯುವುದಕ್ಕೆ ಏರ್ಪಾಡು ಮಾಡಿದ್ದೇವೆ. ಎಂದು ಹೇಳಿದ್ದರೆ ಬ್ಯಾಂಕಿನವರು ಕೊಟ್ಟನಂತರವೇ ತಾನೆ ಸರ್ಕಾರದವರು ಈ ಕೆಲಸ ಮಾಡುವುದು. ಇದನ್ನು ಬಿಟ್ಟು ಬೇರೆ ಮಾರ್ಗ ಇಲ್ಲವಾಗಿದೆ. ಕಮರ್ಶಿಯಲ್ ಬ್ಯಾಂಕ್‌ನವರು ಹಣ ಕೊಟ್ಟರೆ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆ ಎನ್ನುವ ಸರ್ಕಾರದ ಮಾತನ್ನು ಹೇಗೆ ನಂಬುವುದು? ಒಟ್ಟಿನಲ್ಲಿ ಭೂಸುಧಾರಣೆಯನ್ನು ಜಾರಿಗೆ ತರುವುದರಲ್ಲಿ ಇವರಿಗೆ ಕೊಂಚ ನಿಷ್ಠೆಯೂ ಇಲ್ಲ ಎಂದು ಗೊತ್ತಾಗುತ್ತದೆ. ಇದು ನಾಚಿಕೆಪಡುವ ವಿಚಾರವಾಗಿದೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಕ್ಕರೆ ಉದ್ಯಮದ ಬಗ್ಗೆ ಹೇಳುತ್ತಾ, ಈಗಾಗಲೇ ರಾಜ್ಯದಲ್ಲಿ ಸಕ್ಕರೆ ತಯಾರಿಸುತ್ತಿರುವ 10 ಸಕ್ಕರೆ ಕಾರ್ಖಾನೆಗಳ ಜೊತೆಗೆ ಇನ್ನೂ 3 ಕಾರ್ಖಾನೆಗಳು ನಿರ್ಮಾಣದ ಬೇರೆಬೇರೆ ಹಂತಗಳಲ್ಲಿವೆ ಎಂದು ಹೇಳಿದ್ದಾರೆ. ನಮ್ಮ ರಾಜ್ಯ ರೈತರ ರಾಜ್ಯವಾಗಿದೆ. ವ್ಯವಸಾಯವೇ ಇವರ ಮುಖ್ಯ ಕಸಬಾಗಿದೆ. ವ್ಯವಸಾಯನಿರತ ರೈತರಿಗೆ ಏನು ಸಹಾಯ ಮಾಡಿದೆ? ಮತ್ತು ಕೃಷೀ ಕ್ಷೇತ್ರದಲ್ಲಿ ಈ ಸರ್ಕಾರ ಸಾಧಿಸಿರುವುದಾದರೂ ಏನು? ಎಂದು ಕೇಳುತ್ತೇನೆ. ಹೆಚ್ಚು ಇಳುವರಿ ಬತ್ತವನ್ನು ಬಹುರೈತರು ಬೆಳೆಯುತ್ತಿದ್ದಾರೆ ಎಂದು ಸರಕಾರ ಹೇಳುತ್ತಿದೆ ಆದರೆ ಶೇಕಡ 37 ಜನ ರೈತರು ಮಾತ್ರ ಈ ಹೈಯೀಲ್ಡಿಂಗ್ ವೆರೈಟಿಯನ್ನು ಇಷ್ಟಪಡುತ್ತಾರೆ. ನಮ್ಮ ರಾಜ್ಯದಲ್ಲಿ 79 ಸಾವಿರ ಹೆಕ್ಟಾರ್ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಇಡೀ ಭಾರತದಲ್ಲಿಯೇ ನಮ್ಮ ರಾಜ್ಯ ಎರಡನೆಯ ಸ್ಥಾನವನ್ನು ಕಬ್ಬು ಬೆಳೆಯುವುದರಲ್ಲಿ ಪಡೆದಿದೆ. ಮೊದಲನೆಯದು ಮಹಾರಾಷ್ಟ್ರ. ಹೆಚ್ಚಿನ ಇಳುವರಿ ಕೊಡುವ ಕಬ್ಬು ಬಿತ್ತನೆಯನ್ನು ನಮ್ಮ ರಾಜ್ಯದಲ್ಲಿ ಬೆಳೆಯಲಾಗುತ್ತಿದೆಯೆ? ಇಷ್ಟಾದರೂ ಕೂಡ ಒಂದು ಸುಸಜ್ಜಿತ ಬ್ರೀಡಿಂಗ್ ಸ್ಟೇಷನ್ ನಮ್ಮ ರಾಜ್ಯದಲ್ಲಿ ಇಲ್ಲದೆ ಈ ಸಂಬಂಧದ ಪ್ರತಿಯೊಂದು ವಿಷಯಕ್ಕೂ ಕೊಯಮತ್ತೂರು ಕಡೆ ನೋಡಬೇಕಾಗಿದೆ. ಹೆಬ್ಬಾಳ್‌ನಲ್ಲಿ ಮೊದಲು ಬ್ರೀಡಿಂಗ್ ಕಾರ್ಯ ಇತ್ತು. ಈಗ ಅಲ್ಲಿ ಬ್ರೀಡಿಂಗ್ ಕಾರ್ಯವನ್ನು ನಿಲ್ಲಿಸಿದ್ದಾರೆ. ನಮ್ಮ ಸರ್ಕಾರದವರು ಹೆಚ್ಚು ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಹೊರಟಿದ್ದಾರೆ. ಎರಡೂವರೆ ಲಕ್ಷ ಟನ್‌ನಿಂದ ನಾಲ್ಕೂವರೆ ಲಕ್ಷ ಟನ್‌ವರೆಗೆ ಸಕ್ಕರೆಯನ್ನು ಉತ್ಪಾದಿಸುವುದಕ್ಕೆ ನಿರ್ಧಾರ ಮಾಡಿದ್ದಾರೆ. ಅದಕ್ಕೆ ಪೂರಕವಾದ ಒಂದು ಬ್ರೀಡಿಂಗ್ ಕೇಂದ್ರವನ್ನು ಸ್ಥಾಪನೆ ಮಾಡದೆ ಕಬ್ಬು ವ್ಯವಸಾಯ ಕ್ಷೇತ್ರಕ್ಕೆ ಈ ಸರ್ಕಾರ ಮತ್ತೆ ಏನು ಸಹಾಯ ಮಾಡುತ್ತದೆ ಎಂದು ಕೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ವ್ಯವಸಾಯ ಕ್ಷೇತ್ರದಲ್ಲಿ ಇರುವ ನಿರುದ್ಯೋಗದ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ. ವ್ಯವಸಾಯಕ್ಕೆ ಪೂರಕವಾದಂಥ ಉದ್ಯೋಗಗಳು ಇಲ್ಲವಾಗಿದೆ. ರೂರಲ್ ಇಂಡಸ್ಟ್ರಿಯಲ್ ಎಸ್ಟೇಟ್‌ಗಳು ಇವೆಯೇ ಹೊರತು ಸಪ್ಲಿಮೆಂಟರಿ ಇಂಡಸ್ಟ್ರಿಗಳು ಇಲ್ಲವಾಗಿದೆ. ಕಾಂಗ್ರೆಸ್‌ನವರು ತಮ್ಮ ಪಕ್ಷದ ಸದಸ್ಯರಿಗೆ ಜೀವನೋಪಾಯ ಕಲ್ಪಿಸಲು ಈ ಆರ್. ಐ. ಸಿ. ಎಸ್. ಗಳನ್ನು ರಚಿಸಿಕೊಂಡಿದ್ದಾರೆ. ಆರ್. ಐ. ಸಿ. ಎಸ್. ಗಳಲ್ಲಿ ಮೆಂಬರುಗಳನ್ನು ತೆಗೆದುಕೊಳ್ಳುವುದಕ್ಕೂ ಕೂಡ ರಾಜಕೀಯ. ಅಧ್ಯಕ್ಷರ ಚುನಾವಣೆಗೂ ರಾಜಕೀಯ.

(ಶ್ರೀ ಎನ್. ಎ. ಚನ್ನೇಗೌಡ)

ರಾಜಕೀಯ ಇಲ್ಲದೆ ಯಾವ ಕೆಲಸವನ್ನೂ ನಡೆಯುವುದಿಲ್ಲ. ಇವನ್ನು ಪಕ್ಷದ ಜನರಿಗೋಸ್ಕರ ನಡೆಸುತ್ತಿದ್ದಾರೆಯೇ ವಿನಹ ಗ್ರಾಮೀಣ ಜನತೆಯ ಕ್ಷೇಮಕ್ಕೋಸ್ಕರ ಅಲ್ಲ.

ಸಾರಿಗೆ ರಾಷ್ಟ್ರೀಕರಣದಿಂದ ಗ್ರಾಮೀಣರಿಗೆ ದೊಡ್ಡ ಕುತ್ತು ಬಂದಿದೆ. ಸಾರಿಗೆ ರಾಷ್ಟ್ರೀಕರಣ ಬಗ್ಗೆ ನನಗೆ ಪೂರ್ಣನಂಬಿಕೆ ಇದೆ. ಅದೇ ನಮ್ಮ ಸರಕಾರ ಮಾಡಿರುವ ರೀತಿಯಲ್ಲಿ ಇಲ್ಲ. ಮೈಸೂರು ರಾಜ್ಯದಲ್ಲಿ ಸುಮಾರು 2,900 ಸರ್ಕಾರಿ ಬಸ್ಸುಗಳು ಓಡಾಡುತ್ತಿವೆ. ಅಂದರೆ ಸುಮಾರು 12,500 ಜನರಿಗೆ ಒಂದು ಬಸ್ಸಿನಂತೆ ಸಾರಿಗೆ ರಾಷ್ಟ್ರೀಕರಣವಾದ ಮೇಲೆ ಸರ್ಕಾರ ಒದಗಿಸಿದ್ದಾರೆ. ಸಾರಿಗೆ ವ್ಯವಸ್ಥೆ ಜನತೆಯ ಬೇಡಿಕೆಗೆ ಅನುಗುಣವಾಗಿ ಆಗಿವೆಯೆ ಎನ್ನುವುದನ್ನು ವಿಮರ್ಶೆಮಾಡ ಬೇಕು ಸರಕಾರ ಹಳ್ಳಿಗರ ಸಾರಿಗೆ ಬೇಡಿಕೆ ಬಗ್ಗೆ ಉದಾಶೀನಭಾವನೆಯಿಂದ ಇದೆ. ನಗರಗಳಲ್ಲಿ ಬಸ್ಸುಗಳನ್ನು ಕೇಳಿದ ಹಾಗೆ ಕೊಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಏನೂ ಮಾಡುತ್ತಾಇಲ್ಲ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಹೊಸದಾಗಿ ಕೆಲವು ಲಕ್ಸುರಿ ಮತ್ತು ನೈಟ್ ಸರ್ವಿಸ್ ಬಸ್ಸುಗಳನ್ನು ಸಾರಿಗೆ ಸಂಸ್ಥೆಯವರು ಹೊರಡಿಸುತ್ತಿದ್ದಾರೆಂದು. ಸ್ವಾಮಿ, ಇದು ಹೇಗಿದೆ ಎಂದರೆ ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು ಎನ್ನುವಹಾಗೆ ಆಗಿದೆ. ಗ್ರಾಮಾಂತರ ರಸ್ತೆಗಳಲ್ಲಿ ಬೆಳಗಿನಿಂದ ಬಸ್ಸಿಗೆ ಕಾದು ನಿಂತುಕೊಂಡರೆ ಮಧ್ಯಾಹ್ನ 2-3 ಗಂಟೆ ಆದರೂ ಬಸ್ಸು ಸಿಕ್ಕುವುದಿಲ್ಲ. ಜೊತೆಗೆ ಸರಕಾರದವರು ಸಾರಿಗೆ ಆಡಳಿತ ನಡೆಸುವ ವೈಖರಿಯನ್ನು ನೋಡಿದರೆ ತಲೆ ತಗ್ಗಿಸಬೇಕು. ಬಸ್ಸುಗಳಲ್ಲಿ ಸಿಟ್ಟಿಂಗ್ ಸೀಟು, ಸ್ಟ್ಯಾಂಡಿಂಗ್ ಸೀಟು ಮತ್ತು ಹ್ಯಾಂಗಿಂಗ್ ಸೀಟು ಹೀಗೆ ಮೂರು ತರಹ ಸೀಟುಗಳಿವೆ. ಬಸ್ಸುಗಳಲ್ಲಿ ಜನರನ್ನು ದನಗಳಂತೆ ತುಂಬಿರುತ್ತಾರೆ. ಆದರೆ ಸರಕಾರಕ್ಕೆ ತಲುಪುವ ವರಮಾನ ಬಹಳ ಕಡಿಮೆ. ಈಗತಾನೇ ಅನ್ಯುಯಲ್ ರಿಪೋರ್ಟ್ ಬಂದಿದೆ. ಕೇವಲ 17 ಲಕ್ಷ ರೂಪಾಯಿ ಹೆಚ್ಚು ವರಮಾನ ಬಂದಿದೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ವರಮಾನದ ಬಹುಭಾಗ ಬೇರೆ ಕಡೆ ಹೋಗುತ್ತಿದೆ ಎಂದು ಗೊತ್ತಾಗುತ್ತದೆ. ಸರಕಾರಕ್ಕೆ ಬರಬೇಕಾಗಿದ್ದ ವರಮಾನವನ್ನು ಇಲಾಖೆಯ ಡ್ರೈವರುಗಳು ಕಂಡಕ್ಟರುಗಳು ಮತ್ತು ಇತರೇ ಅಧಿಕಾರಿಗಳಲ್ಲಿ ಅನಧಿಕೃತವಾಗಿ ಹಂಚಿ ಒಂದು ರೀತಿಯ ಸಮಾಜವಾದವನ್ನು ಜಾರಿಯಲ್ಲಿ ತರುತ್ತಿರುವಂತೆ ಕಾಣುತ್ತದೆ ಅಲ್ಲವೆ? ಕಂಡಕ್ಟರುಗಳು, ಡ್ರೈವರುಗಳು ಮತ್ತು ಇತರೇ ಅಧಿಕಾರಿಗಳು ಹಣ ಸಂಪಾದನ ಮಾಡಿ ಆ ವರ್ಗದ ಜನರಿಗೆ ಹಣ ಹೋಗಲಿ ಎಂದು ಕಣ್ಣು ಮುಚ್ಚಿಕೊಂಡು ಕೂತಿರುವ ಹಾಗೆ ಭಾಸವಾಗುತ್ತದೆ. ಅಲ್ಲಿರುವ ಅವ್ಯವಸ್ಥೆಯನ್ನು ಹೇಳಲು ಆದಿಶೇಷನಿಗೂ ಸಾಧ್ಯ ಆಗುವುದಿಲ್ಲ. ಸಾರಿಗೆ ವ್ಯವಸ್ಥೆ ವಿಚಾರವಾಗಿ ಎಷ್ಟು ಅರ್ಜಿಗಳನ್ನು ಬರೆದರೂ ಕೂಡ ಅದಕ್ಕೆ ಉತ್ತರ ಬರುವುದಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಒಂದು ಸರಕಾರಿ ಬಸ್ಸು ಮಂಡ್ಯಕ್ಕೆ ಪ್ರತಿರಾತ್ರಿ ಬಂದು ನಿಂತುಕೊಳ್ಳುತ್ತದೆ. ಅದನ್ನು ಪಾಂಡವಪುರದವರೆಗೆ ಎಕ್ಸ್‌ಟೆಂಡ್ ಮಾಡಿ ಎಂದು ಹೇಳಿದರೆ ಆ ರಸ್ತೆಯಲ್ಲಿ ತಮಗೆ ಬೇಕಾದವರ ಖಾಸಗೀ ಬಸ್ಸು ಒಂದು ಓಡಾಡುತ್ತಲ್ಲ ಅದಕ್ಕೆ ತೊಂದರೆ ಆಗುತ್ತದೆ ಎನ್ನುವ ಉದ್ದೇಶದಿಂದ ಆ ಬಸ್ಸನ್ನು ಅಲ್ಲಿಗೆ ಓಡಿಸುವುದಕ್ಕೆ ಆಗುವುದಿಲ್ಲ ಎಂದು ಉತ್ತರ ಬರೆದಿದ್ದಾರೆ. ನಾನು ಹೇಳಿದ ರೂಟಿನಲ್ಲಿ ಪೂರ್ತ ಅವರು ಹೇಳಿದಂತೆ ಖಾಸಗಿ ಬಸ್ಸು ಓಡುತ್ತಾ ಇಲ್ಲ. ಕೇವಲ ಎರಡು ಮೈಲಿ ದೂರ ಓಡಾಡುತ್ತದೆ. ಮಿಕ್ಕಿದ್ದು ಬೇರೆ ರೂಟು ಆಗುತ್ತದೆ. ಒಂದು ಉಪವಿಭಾಗದ ಜನಗಳ ಹಿತದೃಷ್ಟಿಯಿಂದ ಕೇವಲ ಒಂದು ಬಸ್ಸು ಓಡಿಸುವ ಕ್ರಮವನ್ನು ಸರಕಾರದವರು ಕೈಕೊಂಡಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಗ್ರಾಮೀಣರು ಗಂಟೆಗಟ್ಟಲೆ ಕಾದು ಅಕಸ್ಮಾತ್ತಾಗಿ ಬಸ್ಸಿನಲ್ಲಿ ಸೀಟು ಸಿಕ್ಕಿದರೆ ಹಣಕೊಟ್ಟು ಟಿಕೇಟು ಕೇಳದೆ ಕೂತುಕೊಂಡು ಹೋಗಬೇಕು. ಒಂದು ವೇಳೆ ಟಿಕೆಟ್ ಕೇಳಿದರೆ ನಾಳೆ ದಿವಸ ಆ ಬಸ್ಸು ಅಲ್ಲಿ ನಿಲ್ಲುವುದಿಲ್ಲ ಮತ್ತು ಸೀಟು ಇಲ್ಲ ಎಂದು ಹೇಳುತ್ತಾರೆ. ಅಂತಹ ಸಮಯದಲ್ಲಿ ಈ ಗ್ರಾಮೀಣರು ಎಲ್ಲಿಗೆ ಹೋಗಬೇಕು? ಪ್ರೈವೇಟ್ ಬಸ್ಸುಗಳು ಅಲ್ಲಿ ಓಡದೆ ಇರುವಾಗ ಯಾವ ಬಸ್ಸಿನಲ್ಲಿ ಪ್ರಯಾಣಿಕರು ಡೆಸ್ಟಿನೇಷನ್ ತಲುಪಬೇಕು ಎಂದು ಅರ್ಥವಾಗುವುದಿಲ್ಲ. ಸಾರಿಗೆ ಮಂತ್ರಿಗಳು ಗಮನಕೊಟ್ಟು ಈ ಅವ್ಯವಸ್ಥೆಯನ್ನು ತಪ್ಪಿಸಿದರೆ ಜನರಿಗೆ ಅನುಕೂಲವಾಗುತ್ತದೆ.

ಸ್ವಾಮಿ, ರಾಜ್ಯಪಾಲರ ಭಾಷಣ ಎಲ್ಲವನ್ನೂ ಓದಿದ್ದೇನೆ. ಆದರೆ ಕಾವೇರಿ ಬೇಸಿನ್ ನೀರಾವರಿ ಕಾಮಗಾರಿಗಳ ಬಗ್ಗೆ ಒಂದು ಮಾತೂ ಅದರಲ್ಲಿ ಇಲ್ಲ. 1974 ರಲ್ಲಿ ಅದಕ್ಕೆ ಸಂಬಂಧಪಟ್ಟ ಮೈಸೂರು-ಮದರಾಸು ಒಪ್ಪಂದ ಮುಕ್ತಾಯವಾಗುತ್ತದೆ. ಆ ವೇಳೆವರೆವಿಗೆ ಸರಕಾರ ಏನು ನಿಲುವನ್ನು ತಾಳಿದೆ? ಕಾವೇರಿ ಬೇಸಿನ್‌ನಲ್ಲಿ ನೀರಾವರಿ ಕಾಮಗಾರಿಗಳನ್ನು ತ್ವರಿತವಾಗಿ ಕೈಕೊಳ್ಳುವುದಕ್ಕೆ ಎಷ್ಟು ಹಣವನ್ನು ಒದಗಿಸಿದೆ? ಎನ್ನುವ ವಿಚಾರದಲ್ಲಿ ಒಂದು ಶಬ್ದವನ್ನೂ ಕೂಡ ಈ ಭಾಷಣದಲ್ಲಿ ಸೂಚಿಸಿಲ್ಲ.

ಕೈಗಾರಿಕೆ ವಿಚಾರದಲ್ಲಿ ಬಹಳವಾಗಿ ಹೇಳಿದ್ದಾರೆ. ನಾನಾದರೂ ಒಂದು ಪ್ರಶ್ನೆ ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಕೆಲವು ಒಳ್ಳೆಯ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿದ್ದವು. ಉದಾಹರಣೆಗಾಗಿ ಸಾಬೂನು ಕಾರ್ಖಾನೆ, ಭದ್ರಾವತಿ ಕಬ್ಬಿಣ ಕೈಗಾರಿಕೆ. ಆದರೆ ಈಗ ನಷ್ಟವನ್ನು ಅನುಭವಿಸುತ್ತಿವೆ. ಕಾರಣ ಮಾರಾಟ ಪದ್ಧತಿ. ಈ ಕಬ್ಬಿಣದ ಕಾರ್ಖಾನೆಯು ನಮ್ಮ ಹಿರಿಯ ಆಡಳಿತಗಾರರಾದ ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಲ್ಲಿ ಬಂತು. ಕಾರ್ಖಾನೆಯ ಉತ್ಪನ್ನಗಳನ್ನು ಮಾರಲು ಸೋಲ್ ಸೆಲ್ಲಿಂಗ್ ಏಜೆನ್ಸೀ ನೇಮಕ ಮಾಡುವ ಪರಿಪಾಟವಿದೆ. ಎಲ್ಲಿ ಮಾರಾಟ ವಸ್ತುಗಳಿಗೆ ಪೈಪೋಟಿ ಇರುತ್ತದೆಯೋ ಅಂತಹ ಕಡೆ ಸೆಲ್ಲಿಂಗ್ ಏಜೆನ್ಸಿಯನ್ನು ನೇಮಕ ಮಾಡಿ ಮಾರಾಟ ಮಾಡಬಹುದು. ನಮಗೆ ಮನಾಪಲಿ ಇರತಕ್ಕಂಥ ಕೆಲವು ವಸ್ತುಗಳಿಗೆ ಸೆಲ್ಲಿಂಗ್ ಏಜೆನ್ಸಿ ಬೇಕಾಗಿಲ್ಲ. ನಾನಾದರೂ ಒಂದು ಸಮಾಚಾರ ಕೇಳಿದೆ, ಒಬ್ಬ ಮಂತ್ರಿಗಳ ಸಂಬಂಧಿ ಒಬ್ಬರನ್ನು ಕಬ್ಬಿಣ ಕಾರ್ಖಾನೆಯ ಸೋಲ್ ಸೆಲ್ಲಿಂಗ್ ಏಜೆಂಟ್ ಆಗಿ ನೇಮಕ ಮಾಡಿದ್ದಾರೆ. ಇದರಿಂದ ಅವರ ವಾರ್ಷಿಕ ವರಮಾನ ಮೂರು ಲಕ್ಷ ರೂಪಾಯಿಗಳು. ಅವರು ಈ ವ್ಯವಹಾರದಲ್ಲಿ ಎಷ್ಟು ಹಣವನ್ನು ಇನ್‌ವೆಸ್ಟ್ ಮಾಡಿದ್ದಾರೆ, ಏನು ವ್ಯವಹಾರ ನಡೆಸುತ್ತಿದ್ದಾರೆ, ಯಾವ ಕರೆಸ್‌ಪಾಂಡೆನ್ಸ್ ನಡೆಸುತ್ತಿದ್ದಾರೆ ಎನ್ನುವುದಾದರೂ ಈ ಸಭೆಗೆ ತಿಳಿಸುತ್ತಾರೆಯೇ? ತಮ್ಮ ಸ್ವಜನರಿಗೆ ಅನುಕೂಲವಾಗಿಲ್ಲ ಎನ್ನುವ ಉದ್ದೇಶದಿಂದ ಮಾತ್ರ ಸೋಲ್ ಸೆಲ್ಲಿಂಗ್ ಏಜನ್ಸಿ ಕೊಟ್ಟು ದೇಶದ ಅಪಾರವಾದ ಹಣವನ್ನು ದುರ್ವ್ಯಯ ಮಾಡುತ್ತಿದ್ದಾರೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಹೀಗೆ ಸಾರ್ವಜನಿಕ ಹಣ ಮತ್ತು ಸ್ವತ್ತುಗಳನ್ನು ಸರಕಾರದವರು ಸ್ವಜನ ಸ್ವಪಕ್ಷಗಳ ಅನುಕೂಲಕ್ಕೆ ಅನಾವಶ್ಯಕವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಇನ್ನೊಂದು ಸಣ್ಣ ಉದಾಹರಣೆ ಕೊಡುತ್ತೇನೆ. ಮೈಸೂರು ಸಿಟಿ ರೈಲ್ವೇ ಸ್ಟೇಷನ್ನಿನ ಪಕ್ಕದಲ್ಲಿ ಒಂದು ಟ್ರಸ್ಟ್ ಬೋರ್ಡಿಗೆ ಸೇರಿದ ಜಮೀನು ಇದೆ. ಅದನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟಿತ್ತು. ಕೋರ್ಟು ವ್ಯವಹಾರ ನಡೆಸಿ ಅದನ್ನು ವಾಪಸ್ ತೆಗೆದುಕೊಂಡು ಪುನಃ ಅದನ್ನು 99 ವರ್ಷಗಳ ಅವಧಿ ಕರಾರಿನ ಮೇಲೆ ಸಿಟಿ ಕಾಂಗ್ರೆಸ್ ಆಫೀಸ್ ಕಟ್ಟುವುದಕ್ಕೆ ಕೇವಲ ವರ್ಷಕ್ಕೆ 5 ರೂಪಾಯಿಯ ಬಾಡಿಗೆ ಮೇಲೆ ಕೊಟ್ಟಿದ್ದಾರೆ. ಇದಕ್ಕೆ ಟೆಂಡರ್ ಕರೆದಿದ್ದಾರೆಯೇ? ಸಾರ್ವಜನಿಕ ಜನಗಳಿಗೆ ಈ ವಿಚಾರ ಗೊತ್ತುಪಡಿಸಿದ್ದಾರೆಯೇ? ತಮ್ಮ ಪಕ್ಷವನ್ನು ಬೆಳೆಸುವುದಕ್ಕೆ ಸಾರ್ವಜನಿಕ ಸ್ವತ್ತನ್ನು ಈ ರೀತಿ ದುರ್ವಿನಿಯೋಗ ಮಾಡಬಹುದೇ ಎಂದು ತಮ್ಮನ್ನು ಕೇಳುತ್ತೇನೆ.

ಸ್ವಾಮಿ, ಕೊನೆಯದಾಗಿ ಶಾಸನ ಸುವ್ಯವಸ್ಥೆ ಬಗ್ಗೆ ರಾಜ್ಯಪಾಲರು ಬಹಳ ದೊಡ್ಡದಾಗಿ ಹೇಳಿದ್ದಾರೆ. ನನಗಾದರೂ ಒಂದೊಂದು ಸಾರಿ ಅನ್ನಿಸುತ್ತದೆ, ರಾಜ್ಯದಲ್ಲಿ ಲಾ ಮತ್ತು ಆರ್ಡರ್ ಅನ್ನುವ ವ್ಯವಸ್ಥೆ ಇದೆಯೇ ಎಂದು. ಲಾನೂ ಇಲ್ಲ ಆರ್ಡರೂ ಇಲ್ಲ. ಯಾರು ಯಾರಿಗೆ ಏನೇನು ಬೇಕೋ ಅದು ನಡೆಯುತ್ತಿದೆ. 1946 ಹಿಂದೆ ಬ್ಯೂರೋಕ್ರಸಿ ಇದ್ದು ಖಾಕಿ ರಾಜ್ಯಭಾರ ನಡೆಯಿತು. 1946 ರಿಂದ 19 6 ತನಕ ಖಾದಿ ಟೋಪಿ ರಾಜ್ಯಭಾರ ನಡೆಯಿತು. ಅದೆಲ್ಲ ಸಭೆಯ ಸದಸ್ಯರಿಗೆ ಗೊತ್ತಿದೆ. 1956ರಿಂದ ಈಚೆಗೆ ಕಾವಿಧಾರಿಗಳ ಆಡಳಿತ ನಡೆಯುತ್ತಿದೆ ಎಂದು ಹೇಳ ಬಯಸುತ್ತೇನೆ. ಯಾವ ಪ್ರತಿಯೊಂದು ಸಣ್ಣ ಕೆಲಸವಾಗಬೇಕಾದರೂ, ಕೊನೆಗೆ ಟ್ರಾನ್ಸ್‌ಫರ್ ಕೂಡ ಕಾವಿಧಾರಿಗಳ ಹೇಳಿಕೆ ಮೇಲೆ ಆಗಬೇಕು. ಯಾವ ಕ್ಷೇತ್ರದಲ್ಲಿಯೇ ಆಗಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಆಗಲಿ, ಏಕೆ ಕೊನೆಗೆ ಪೋಲೀಸು ದಫೇದಾರನೋ ಅಥವಾ ಕಾನ್ಸ್‌ಟೇಬಲ್ ಅವರ ಬದಲಾವಣೆ ಮಾಡುವುದಕ್ಕೂ ಅವರೇ ಬರುತ್ತಾರೆ. ಅವರ ಅಪ್ಪಣೆ ಇಲ್ಲದೆ ಯಾವ ಕೆಲಸವೂ ಆಗುವುದಿಲ್ಲ ಎಂದು ಅನಿಸುತ್ತದೆ. ವಿಧಾನ ಸೌಧದ ಆಫೀಸುಗಳಲ್ಲೆಲ್ಲಾ ಕಾವಿಧಾರಿಗಳ ದರ್ಶನ ಬಹಳವಾಗಿದೆ. ಈ ಕಾವಿಧಾರಿಗಳ ಅವಾಂತರ ತಪ್ಪಿಸದಿದ್ದರೆ ಖಂಡಿತವಾಗಿ ರಾಜ್ಯದಲ್ಲಿ ಒಳ್ಳೆಯ ಆಡಳಿತ ನಡೆಯುವುದಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿದೆ. ರಾಜ್ಯಾಂಗ ಹಲವು ಮೂಲಭೂತವಾದ ಹಕ್ಕುಗಳನ್ನು ಜನತೆಗೆ ಕೊಟ್ಟಿದೆ. ಅದರಲ್ಲಿ ಅಭಿಪ್ರಾಯ ಸ್ವಾತಂತ್ರ್ಯವೂ ಒಂದು. ಸ್ವಂತ ಅಭಿಪ್ರಾಯವನ್ನು ಯಾರು ಎಲ್ಲಿ ಬೇಕಾದರೂ ಹೇಳುವುದಕ್ಕೆ ಎಲ್ಲರಿಗೂ ಅವಕಾಶವಿದೆ. ಆದರೆ ಈ ರಾಜ್ಯದಲ್ಲಿ ಅಭಿಪ್ರಾಯ ಸ್ವಾತಂತ್ರ್ಯ ಕೂಡ ಕಿತ್ತುಕೊಳ್ಳುವ ಪರಿಸ್ಥಿತಿ ಬಂದಿದೆ. ಮೊನ್ನೆ ತಾನೆ ಮಂಡ್ಯದಲ್ಲಿ ಒಂದು ಘಟನೆ ನಡೆಯಿತು. ಅಲ್ಲಿನ ಪೌರಸಭೆ ಚುನಾವಣೆ ನಡೆಯುತ್ತಿತ್ತು. ಅಲ್ಲಿ ಸಂಯುಕ್ತರಂಗದವರು ಪಕ್ಷದ ಅಭಿಪ್ರಾಯವನ್ನು ಮತದಾರರ ಮುಂದಿಡಲು ಒಂದು ಸಭೆ ಏರ್ಪಡಿಸಿದ್ದರು. ಆ ಸಭೆ ಪ್ರಾರಂಭದ ಸಭೆಯಲ್ಲಿ ಕೆಲವರು ಗಲಾಟೆ ಎಬ್ಬಿಸಿ ಅವಾಚ್ಯ ಶಬ್ದಗಳನ್ನು ಉಪಯೋಗಿಸಿ, ಕಲ್ಲು ಎಸೆದು, ಚಪ್ಪರವನ್ನು ಕೂಡ ಕಿತ್ತು ಹಾಕಿದರು. ಎಲ್ಲರೂ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಮನ್ನಣೆ ಕೊಡಬೇಕಾಗಿತ್ತು. ಗಲಾಟೆ ಆದ ಆ ಸಮಯದಲ್ಲಿ ಪೋಲೀಸಿನವರು ಏನು ಮಾಡುತ್ತಿದ್ದರು? ಗೊಂಬೆಗಳಂತೆ ಸಮವಸ್ತ್ರ ಧರಿಸಿ ನಿಂತಿದ್ದರೆ; ಲಾ ಅಂಡ್ ಆರ್ಡರ್ ಈ ರಾಜ್ಯದಲ್ಲಿ ಇದೆಯೇ?

(ಶ್ರೀ ಎನ್. ಎ. ಚನ್ನೇಗೌಡ)

ಎಲ್ಲಾ ಜನರಿಗೂ ರಕ್ಷಣೆ ಬೇಡವೇ, ಓಟು ಕೊಡುವುದು ಮತದಾರರ ಇಷ್ಟ ಒಂದು ಪಕ್ಷ ಸಂಯುಕ್ತರಂಗದವರು ಗಲಾಟೆ ಮಾಡಿದ್ದರೆ ಅದಕ್ಕೆ ಪ್ರತಿಯಾಗಿ ಗಲಾಟೆ ಮಾಡಲಿ. ಆದರೆ ಸಭೆ ಪ್ರಾರಂಭವಾಗುವುದಕ್ಕೆ ಮೊದಲೇ ಚಪ್ಪರವನ್ನು ಕಿತ್ತುಹಾಕಿದರು ಎಂದರೆ ಇದು ನಾಜಿಜಂ ಇರುವ ರಾಜ್ಯವೇ? ಹೋಂ ಪೋರ್ಟ್ ಫೋಲಿಯೋ ಮುಖ್ಯಮಂತ್ರಿಗಳ ಕೈಯಲ್ಲಿ ಇದೆ. ಅದು ಬೇರೆ ಯವರ ಕೈಯಲ್ಲಿ ಇದ್ದಿದ್ದರೆ ಈ ಅವ್ಯವಸ್ಥೆ ಆಗುತ್ತಾ ಇರಲಿಲ್ಲ ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ ಇಂಡಿಕೇಟ್ ಮತ್ತು ಸಿಂಡಿಕೇಟ್ ಆಗಿ ಕಾಂಗ್ರೆಸ್ ಒಡೆದು ಹೋದಮೇಲೆ ಮಾನ್ಯ ಮುಖ್ಯಮಂತ್ರಿಯವರು ಹೋಂ ಪೋರ್ಟ್‌ಫೋಲಿಯೋವನ್ನು ಬಹಳ ಜಬರ್‌ದಸ್ತಾಗಿ ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಈ ದಿನ ವ್ಯಕ್ತಿ ಸ್ವಾತಂತ್ರ್ಯ ಬಹಳ ಮುಖ್ಯವಾದುದು. ಹೀಗಾದಲ್ಲಿ ರಾಜ್ಯದಲ್ಲಿ ಇಂದು ಪ್ರಜಾಪ್ರಭುತ್ವ ಉಳಿಯುತ್ತದೆಯೇ ಎಂದು ನನಗೆ ಅನುಮಾನ ಬರುತ್ತದೆ.

ಕೊನೆಯದಾಗಿ ರಾಜ್ಯಪಾಲರು ಪ್ರಜಾಪ್ರಭುತ್ವ ವಿಷಮ ಕಾಲದಲ್ಲಿದೆ ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಆ ಪ್ಯಾರಾವನ್ನು ಬಿಟ್ಟುಬಿಡಬಹುದಾಗಿತ್ತು. ಈ ಸಭೆಯವರಿಗೆ ಏನೂ ವಿಷಮಕಾಲ ಬಂದಿಲ್ಲ. ಅದು ಒಂದು ಪಕ್ಷದಲ್ಲಿ ಬಂದಿರತಕ್ಕಂತಹ ಅಂದೋಳನ. ಆ ಒಡಕಿನಿಂದ ದೇಶವೆಲ್ಲಾ ಮುಳುಗಿ ಹೋಗುತ್ತದೆ ಎಂದು ಹೇಳುವುದು ಸರಿಯಲ್ಲ. ಅವರಲ್ಲಿ ಕೆಲವರು ಅಧಿಕಾರ ದಲ್ಲಿದ್ದವರು ಅಧಿಕಾರ ಬಿಡುವಂತಾಯಿತು. ಮತ್ತೆ ಕೆಲವರು ಅಧಿಕಾರ ಆಸೆಯಿಂದ ಪಕ್ಷಾಂತರ ಗೊಂಡರು. ಇದನ್ನೆಲ್ಲಾ ರಾಜ್ಯಪಾಲರವರ ಬಾಯಲ್ಲಿ ಸರಕಾರ ಹೇಳಿಸಿರುವುದು ನಮ್ಮ ದುರದೃಷ್ಟಕರವೆಂದು ಹೇಳಬೇಕಾಗಿದೆ. ಇಷ್ಟು ಹೇಳಿ ಅಧ್ಯಕ್ಷರನ್ನು ವಂಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6–30 P. M.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ರಾಜ್ಯಪಾಲರವರು ಮಾಡಿದ ಭಾಷಣದ ಮೇಲೆ ವಂದನಾರ್ಪಣೆಯ ನಿರ್ಣಯದಲ್ಲಿ ಒಂದೆರಡು ಮಾತುಗಳನ್ನು ಅಡ ಬಯಸುತ್ತೇನೆ. ರಾಜ್ಯಪಾಲರವರು ಸರ್ಕಾರದವರ ಕಾರ್ಯಗಳ ರೂಪರೇಷೆಗಳನ್ನು ಮತ್ತು ಮುಂದಿನ ಕಾರ್ಯಕಲಾಪಗಳ ವಿಷಯದಲ್ಲಿ ಸರ್ಕಾರದ ನೀತಿ ನಿಯಮವನ್ನು ಕುರಿತು ಉಭಯ ಸದನಗಳಿಗೂ ಒಂದು ಸಂದೇಶವನ್ನು ಕೊಟ್ಟಿದ್ದಾರೆ. ರಾಜ್ಯಪಾಲರವರ ಭಾಷಣದಲ್ಲಿ 32 ವಿಚಾರಗಳು ಒಳಗಾಗಿತ್ತು. ಒಂದು ರೂಪದಲ್ಲಿ ಈ ಆಯವ್ಯಯ ಪಟ್ಟಿಯನ್ನು ಸರ್ಕಾರದ ಮುಂದಿಡುವಾಗ ಎಷ್ಟೋ ಇಲಾಖೆಗಳನ್ನು ಕುರಿತು, ಆಡಳಿತದ ಕುರಿತು ಅವುಗಳ ವಿಷಯವನ್ನು ಹೇಳುತ್ತಾರೋ ಆ ರೀತಿಯಲ್ಲಿ ಇದನ್ನು ಸೂಕ್ಷ್ಮವಾಗಿ ಮಾಡಿದ್ದಾರೆ. ಇದರಲ್ಲಿ ಮುಂದಿನ ಕಾರ್ಯಕ್ರಮದ ವಿಷಯ ಅಲ್ಲಲ್ಲಿ ಸೂಚಿಸಿದ್ದಾರೆ. ಆದರೆ 20 ವರ್ಷಗಳಲ್ಲಿ ಸ್ವರಾಜ್ಯ ಬಂದಮೇಲೆ ದೇಶವನ್ನು ಯಾವ ಕಡೆಯ ಸರ್ಕಾರ ತೆಗೆದುಕೊಂಡು ಹೋಗುತ್ತದೆ ಎನ್ನುವ ವಿಚಾರದಲ್ಲಿ ಮೂಲಭೂತವಾದ ತತ್ವಗಳನ್ನು ಅಷ್ಟಾಗಿ ನಿರೂಪಣೆ ಮಾಡಿಲ್ಲ. ನ್ನತಕ್ಕಂತಹ ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಕೆಲವು ಸದಸ್ಯರು ದೇಶದ ರಾಜಕೀಯದ ಪರಿಸ್ಥಿತಿಯ ಬಗ್ಗೆ ಬಹಳವಾಗಿ ಮಾತನಾಡಿದ್ದಾರೆ. ರಾಜ್ಯಭಾರ ಯಾರ ಕೈಯಲ್ಲಿ ಇದ್ದರೂ, ವ್ಯಕ್ತಿಗಳ ಮನೋಗತಗಳು ಸೇರಿ ಹೋರಾಟ ಮಾಡುತ್ತಿದೆ. ಅವು ಮುಂದುವರಿಯುವ ಮಾರ್ಗದ ಕಡೆ ನೋಡುವ ರೀತಿಯಲ್ಲದೆ. ಈ ಸಂಕೋಲೆಗಳು 20 ವರ್ಷವಾದರೂ ಉಳಿದುಕೊಳ್ಳುವುದಕ್ಕೆ ಕಾರಣವೇನು ಎನ್ನುವುದು ಎಲ್ಲರ ಮನಸ್ಸನ್ನೂ ಭಾದಿಸುವುದು. ಪ್ರಜಾಪ್ರಭುತ್ವ ತತ್ವವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಇಷ್ಟು ಒಂದು ಪ್ರಗತಿಪಥದ ಕಾರ್ಯರೂಪವನ್ನು ನೋಡಿದರೆ ನಾವು ಸಂತೋಷಪಡುವ ಹಾಗೆ ಇಲ್ಲ. ಸರ್ಕಾರದ ಈ ಮಿಷನರಿಯನ್ನು ಮೂರು ವಿಧವಾಗಿ ಹೇಳಬಹುದು. ನೀತಿನಿಯಮ ಇಟ್ಟುಕೊಂಡಿರ ತಕ್ಕ ಮಂತ್ರಿಮಂಡಲ. ಅದರ ಕೆಳಗಡೆ ಇರತಕ್ಕವರೆಂದರೆ, ಗೋಡೆಗಳ ಮಧ್ಯ ಇರುವ ಕಾರ್ಯ ದರ್ಶಿಗಳ ತಂಡ. ಮತ್ತು ಇದರ ಆಜ್ಞೆಯನ್ನು ಪಾಲನೆ ಮಾಡತಕ್ಕ ಚಿಕ್ಕಪುಟ್ಟ ನೌಕರಿವರ್ಗ. ಇವರಿಂದೆಲ್ಲ ಜನರಿಗೂ ಹೆಚ್ಚಿನ ಉಪಕಾರವಾಗಿಲ್ಲವೆಂಬುದನ್ನು ಎಲ್ಲರೂ ಒಪ್ಪತಕ್ಕ ವಿಚಾರ. ನಾವು ಏನು ಮಾತನಾಡುತ್ತೇವೆ ಅದನ್ನು ಕಾರ್ಯರೂಪಕ್ಕೆ ಒಂದು ನಿಷ್ಠೆಯಿಂದ ಎಲ್ಲಾ ಹಂತದಲ್ಲೂ ತರಬೇಕು. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಮೆರಿಕ ಎಂಬ ದೊಡ್ಡ ದೇಶದಲ್ಲಿ ಒಬ್ಬ ನೀಗ್ರೋ ಹುಡುಗನಿಗೆ ಯಾವುದೋ ವಿಶ್ವವಿದ್ಯಾನಿಲಯದವರು ಸೇರಿಸುವುದಿಲ್ಲ ಎಂದು ಹೇಳಿದರಂತೆ. ಆದರೆ ಆಗ ಇದ್ದಂತಹ ಅಧ್ಯಕ್ಷರು "In the eye of law every citizen has got every right." ಎಂದು ಹೇಳಿ ಅವರನ್ನು ಸೇರಿಸುವಂತೆ

ಮಾಡಿದರು. ನಮ್ಮಲ್ಲಿ ಈ ನೀತಿ ಇದೆಯೇ? ಸ್ವರಾಜ್ಯ ಏನೋ ಬಂತು. 20 ವರ್ಷಗಳಲ್ಲಿ ಅನೇಕ ಕಾನೂನುಗಳನ್ನು ನಾವು ಮಾಡಿದ್ದೇವೆ. ಆದರೆ ಇಡೀ ಭಾರತದಲ್ಲಿ ಅವುಗಳು ಜಾರಿಗೆ ಏಕೆ ಬಂದಿಲ್ಲ? ನಾವು ಇದರ ಬಗ್ಗೆ ಒಂದು ಸಿಂಹಾವಲೋಕನವನ್ನು ಮಾಡುವುದಾದರೆ ಎಲ್ಲಾ ನೋಡ ಬಹುದು. ರಾಜ್ಯಾಂಗದ 17ನೆಯ ವಿಧಿಯ ಪ್ರಕಾರ ಒಂದು ಟರ್ಮ್ ಇದೆ. ಉದ್ಧಾರ ಅಥವಾ ಸಂಘಟನೆ, ಅಥವಾ ನಮ್ಮ ಅಸ್ಪೃಶ್ಯತಾ ನಿವಾರಣೆ—ಅದು ಕಾರ್ಯರೂಪಕ್ಕೆ ಬರುವಾಗ ಲಾಳ ಕಟ್ಟಿದ ಕುದುರೆ ಕುಂಟಿ ನಡೆಯುವ ಹಾಗೆ ನಡೆಯುತ್ತದೆ. ಇಂಥ ಕಾನೂನುಗಳನ್ನು ಮಾಡಿ ದ್ದೇವೆಂದು ಎಲ್ಲಾ ಹೇಳುತ್ತಾರೆ; ಆದರೆ ಕಾರ್ಯರೂಪಕ್ಕೆ ಬರುವುದಿಲ್ಲವೆಂದು ಕೂಡ ಹೇಳ ಬೇಕಾಗಿದೆ. ನಾನು ಯಾರೋ ಒಬ್ಬ ಪ್ರತಿಷ್ಠಾ ವ್ಯಕ್ತಿಯ ಕುರಿತು ಮಾತನಾಡುವುದಿಲ್ಲ. ನಾವೆಲ್ಲಾ ಸರಿಯಾಗಿ ಒಪ್ಪುತ್ತೇವೆ, ಆದರೆ ನಮ್ಮ ಅಜ್ಜಿ ಒಪ್ಪುಪದಿಲ್ಲ, ಎಂದು ಹೇಳುವ ಪರಿಸ್ಥಿತಿ ಬಂದಿದೆ. ಪಾಪ, ಇಲ್ಲಿ ಅಜ್ಜಿಯನ್ನು ಯಾಕೆ ಎಳೆದುಕೊಂಡು ಬರುತ್ತೀರಿ? ಸಮಾಜ ನಿರೂಪಣೆ ಮಾಡುವವರು ಯಾರು? ಇದಕ್ಕೆಲ್ಲಾ ಕಾರಣರು ಯಾರು ಎಂದು ನೋಡಿದರೆ, ಮಂತ್ರಿಯವರು ಸರಿಯಾಗಿದ್ದರೆ ಅಧಿಕಾರಿಗಳೂ ಸರಿಯಾಗಿ ಇದ್ದರೊ, ಅಧಿಕಾರಿಗಳು ಸರಿಯಾಗಿದ್ದರೆ, ಪ್ರಜೆಗಳ ಮನಸ್ಸು ಬದಲಾಗಲಿಲ್ಲ ಎಂದು ಗೊಂದಲವನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ನಮ್ಮ ಮನಸ್ಸಿನಲ್ಲಿ ಖಚಿತವಾದಂತಹ ನಿರೂಪಣೆಯ ಅಭಿಪ್ರಾಯವಿಲ್ಲ. ಮೊನ್ನೆ ತಾನೇ ಡಿಸೆಂಬರಿನಲ್ಲಿ ನಡೆ ದಂತಹ ಎರಡು ಕಾಂಗ್ರೆಸ್ ವಿಪ್ಲವಗಳನ್ನು ನೋಡುವುದಾದರೆ, ಅಹಮದಾಬಾದಿನಲ್ಲಿ ಒಂದು, ಮುಂಬಾಯಿಯಲ್ಲಿ ಇನ್ನೊಂದು ನಡೆಯಿತು. ನಾವು ನಿಮಗಿಂತ ಮಿಗಿಲು ಉಗ್ರಗಾಮಿಗಳು ಎಂದು ಒಬ್ಬರು, ನಿಮಗಿಂತ ನಾವು ಮೇಲು ಎಂದು ಇನ್ನೊಬ್ಬರು; ಹೀಗೆ ಅವರ ಪ್ರೋಗ್ರಾಂಗಳು. ಸ್ವಲ್ಪ ಆಶಾದಾಯಕ ಸ್ಥಿತಿ ಯಾವ ಕಡೆ ಇದೆಯೆಂದರೆ, ಬೊಂಬಾಯಿ ಕಡೆ ಇದೆ. ಕಾರಣ ಏನೆಂದರೆ;......

ಶ್ರೀ ಎಸ್. ಗೋಪಾಲಗೌಡ.—ಮಾನ್ಯಸದಸ್ಯರು ಬೊಂಬಾಯಿಯಲ್ಲಿ ಸ್ವಲ್ಪಮಟ್ಟಿಗೆ ಆಶಾ ಭಾವನೆ ಇದೆಯೆಂದು ಹೇಳುತ್ತಾರೆ. ಅವರು ಯಾವ ಪಾರ್ಟಿಗೆ ಸೇರಿದವರು, ರೂಲಿಂಗ್ ಪಾರ್ಟಿಯೇ ಯಾವ ಕಡೆ, ಅವರ ಸ್ಥಾನ ಎಲ್ಲಿ ಎಂಬುದನ್ನೆಲ್ಲಾ ಸ್ವಲ್ಪ ನಮಗೆ ಹೇಳಬೇಕು. ಅವರ ಆಶಾಭಾವನೆ ಎಲ್ಲದೆ ಎಂಬುದನ್ನು ತಿಳಿಯಲು ಇಷ್ಟಪಡುತ್ತೇನೆ. ಸದನದ ಕಾನೂನು ಪ್ರಕಾರ ಸದಸ್ಯರಿಗೆ ಎಲ್ಲೆಲ್ಲಿ ಜಾಗ ಕೊಡಬೇಕು, ಯಾವ ಸ್ಥಳದಿಂದ ಮಾತನಾಡಬೇಕು ಎಂಬುದೆಲ್ಲಾ ಇದೆ. ಅದ್ದರಿಂದ ಅದನ್ನು ಎಲ್ಲಾ ನನಗೆ ತಿಳಿಸಬೇಕು. ಅದೆಲ್ಲಾ ಸ್ವವೇದಿತ.

ನನಗೆ ಒಂದು ಅನುಮಾನ. ಈಗ ಇಲ್ಲಿ ಇಬ್ಭಾಗವಾಯಿತು ಎನ್ನುವಾಗ, ಅವರೆಲ್ಲರೂ ಈ ಸಭೆಯಲ್ಲಿ ಕೂತುಕೊಳ್ಳುವ ಸಂದರ್ಭದಲ್ಲಿ ಎಲ್ಲರೂ ಒಂದಾದರೆ ಏನು ಮಾಡುವುದು?

ಶ್ರೀ ಕೆ. ಪ್ರಭಾಕರ್.—ಮಾನ್ಯ ಶ್ರೀ ಗೋಪಾಲಗೌಡರು ಬಹಳ ಬುದ್ಧಿವಂತಿಕೆಯಿಂದ ಅವರವರ ಸ್ಥಾನಗಳನ್ನು ವಿಂಗಡಿಸಿ ಈಗಾಗಲೇ ಯಾವರೀತಿ ಕೊಡಬೇಕೆಂಬ ಅರಿವನ್ನು ಕೊಟ್ಟಿದ್ದಾರೆ. ರಾಜ್ಯ ಪಾಲರ ಭಾಷಣದಲ್ಲಿಯೂ ಅದರ ಬಗ್ಗೆ ಪುಷ್ಟೀಕರಿಸಿ ಮಾತನಾಡುತ್ತಾ ಪ್ರಜಾಪ್ರಭುತ್ವದ ಸೋಲು ಮತ್ತು ಗೆಲುವು ಬದಲಾವಣೆ ಯಾವಕಡೆಗೆ ಆಗಿದೆ ಎಂಬ ಬಗ್ಗೆ ಸರ್ಕಾರ ಯಾವ ರೀತಿಯಲ್ಲಿ ನಡೆದು ಕೊಂಡು ಹೋಗಬೇಕು ಎಂಬುದಾಗಿ ರಾಜ್ಯಪಾಲರು ಹೇಳಿದ್ದಾರೆ. ಬಜೆಟ್ಟಿನಲ್ಲಿ ಎಷ್ಟೆಷ್ಟು ವಿಷಯ ಗಳನ್ನು ಇಡಬಹುದೋ ಆ ರೀತಿ ರಾಜ್ಯಪಾಲರು ಅವರ ಭಾಷಣದಲ್ಲಿ ಇಟ್ಟಿದ್ದಾರೆ. ಇದನ್ನು ಇನ್ ಡೈರೆಕ್ಟಾಗಿ ಬಜೆಟ್ ಭಾಷಣವೆಂದು ಹೇಳಿದರೆ ಏನೂ ತಪ್ಪಾಗಲಾರದು. ಅದನ್ನು ಬೇರೆ ರೂಪ ದಲ್ಲಿ ಹೇಳುವುದಕ್ಕೆ ಇವರಿಗೆ ಸಾಧ್ಯವಿಲ್ಲ. ಈ ಸಭೆಯ ಹಿತದೃಷ್ಟಿಯಿಂದ 32 ವಿಷಯಗಳಲ್ಲಿ ಕೇವಲ ನಾಲ್ಕಾರು ವಿಷಯಗಳನ್ನು ತೆಗೆದುಕೊಂಡು ನಾನು ಇಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಪಡು ತ್ತೇನೆ.

ಮೊಟ್ಟಮೊದಲನೆಯದಾಗಿ, ಭೂಕಂದಾಯದ ವಿಚಾರವಾಗಿ ಪ್ರಸ್ತಾಪಮಾಡುವಾಗ ಮೂಲ ಭೂತವಾಗಿ ಇದನ್ನು ವಸೂಲು ಮಾಡುವ ಏಜೆಂಟುಗಳಾಗಿ ಪಂಚಾಯತಿಗಳಿಗೆ ಕೊಡತಕ್ಕದ್ದರಿಂದ ದೇಶದಲ್ಲಿ ಇದರಿಂದ ಕೃಷಿಕರಿಗೆ ಹೆಚ್ಚು ತೆರಿಗೆ ಬೀಳುತ್ತಾ ಇದೆಯೆಂದು ಶಾಸನ ಮಂತ್ರಿಗಳು ಹೇಳಿ ದರು. ಇದನ್ನು ವಸೂಲು ಮಾಡುವ ಏಜನ್ಸಿಯನ್ನು ಏರ್ಪಾಡುಮಾಡುವುದು ಸರ್ಕಾರದವರು. ಹಿಂದೆ ಈ ಭೂಕಂದಾಯವನ್ನು ರದ್ದುಮಾಡುತ್ತೇವೆ, ರೈತರಿಗಿರತಕ್ಕ ತೊಂದರೆಗಳನ್ನು ತಪ್ಪಿಸು ತ್ತೇವೆ, ನವೀನ ಕಂದಾಯ ಜಾರಿಗೆ ಬರುತ್ತದೆ, ಪ್ರೊಹಿಬಿಷನ್ ತೆಗೆದುಹಾಕಿ ಕಂದಾಯವನ್ನು ಬೇರೆ ರೂಪದಲ್ಲಿ ವಸೂಲು ಮಾಡುತ್ತೇವೆಂಬುದಾಗಿ ಹೇಳಿದ್ದರು. ಇಷ್ಟಾದರೂ ಕಂದಾಯ ವಸೂಲು ಮಾಡುವುದಕ್ಕೆ ಖರ್ಚು ಜಾಸ್ತಿಯಾಗುತ್ತಲೇ ಇದೆ. ಇದು ಎಡಗೈಯಲ್ಲ, "ಪೂರ್ಣಗೈ" ಎಂದು ಹೇಳಿ, ರೈತರ ಮುಖವನ್ನು ಹೊಡೆಯುವುದು ಬೇಡವೆಂದು ನಾನು ಹೇಳುತ್ತೇನೆ. ಅದು ಒಂದು ರೀತಿ ಸುಳ್ಳೋಲೆ ಮಾಡಿದಂತಾಗುತ್ತದೆ. ಬೇರೆ ರೂಪದಲ್ಲಿ ಕಂದಾಯದ ಹಣವನ್ನು ಪಂಚಾಯಿತಿಗೆ ಕೊಡಬೇಕು. ಮುಂದೆ ಬೇರೆ ಸರ್ಕಾರ ಬರಬಹುದು, ಈ ಸರ್ಕಾರ ಹೋಗಬಹುದು, ನೀತಿ ಉಳಿ

(ಶ್ರೀ ಕೆ. ಪ್ರಭಾಕರ್)

ಯಾರೇ ಬೇಕು. ಒಂದು ಸಾರಿ ಮಾಡಿದಂಥ ಸರ್ಕಾರದ ಯಾವ ಕೆಲಸಕ್ಕೆ ಆಗಲಿ 3 ಸಾವಿರ ರೂಪಾಯಿಗಳು ಖರ್ಚಾದರೆ, ಅದನ್ನು ಅಳಿಸುವುದಕ್ಕೋಸ್ಕರ 6 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬಾರದು. ಮೂಲ ಉದ್ದೇಶಕ್ಕೆ ಧಕ್ಕೆ ಬರಬಾರದು. ಭೂ ಕಂದಾಯಗಳನ್ನು ಇದ್ದಹಾಗೆ ಮಾಡಿ ನೀರಾವರಿ ಕಂದಾಯಗಳನ್ನು ಜಾಸ್ತಿಮಾಡಿ ಬೇಸಾಯಗಾರರಿಗೆ ಹೆಚ್ಚಿನ ಭಾರವನ್ನು ಮಾಡಿದ್ದೀರೆಂದು ಹೇಳಿದರೆ ತಪ್ಪಾಗಲಾರದು. ಈ ರೀತಿಯಾಗಿ ಅವರಿಗೆ ಭಾರ ಆಯಿತೆಂದು ಹೇಳುವಾಗ ಮದ್ರಾಸ್‌ನಲ್ಲಿ ಇನ್ನೂ ಜಾಸ್ತಿ ಕೊಡುತ್ತಿದ್ದಾರೆಂದು ಹೇಳಿದರೆ ಅದು ಸರಿಯಲ್ಲ. ಕ್ರಿಮಿನಲ್ ಕೇಸುಗಳು ಬೇರೆ ಸ್ಟೇಟ್‌ಗಳಲ್ಲಿ ಬಹಳ ಜಾಸ್ತಿ ಇದೆ. ಬೇರೆಯವರು ಭುಜ ತಟ್ಟಿಕೊಳ್ಳುತ್ತಾರೆ. ಬೇರೆಯವರಿಗಿಂತ ನಾವು ಅವುಗಳಲ್ಲಿ ಎಷ್ಟೋ ಕಡಿಮೆ ಇದ್ದೇವೆ. ಇವರಲ್ಲಿ ಪ್ರಗತಿದಾಯಕ ಮನೋಭಾವ ಇಲ್ಲ. ಈಗ ಭೂ ಸುಧಾರಣೆ ಎಂದು ಹೊಸದಾಗಿ ಏನೇನೋ ಮಾಡಿದ್ದೇವೆಂದು ನಮ್ಮ ಸರ್ಕಾರದವರು ಅಲ್ಲಿ ಏನು ಹೇಳಿದರೂ ನಾನು ಒಪ್ಪುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಹೇಳುತ್ತಾರೆ. ಆದರೂ ಮೈಸೂರಿನಲ್ಲಿ ಭೂಸುಧಾರಣೆ ಕುಂಟಿಕೊಂಡು ಹೋಗುತ್ತಿದೆ. ಇದರ ಬಗ್ಗೆ ಸುತ್ತೋಲೆಗಳು ಕೇಂದ್ರ ಸರ್ಕಾರದಿಂದ ಬರುತ್ತಿರುವಾಗ, ದೇಶದಲ್ಲೆಲ್ಲಾ ಒಂದೇ ದಾರಿ ಹಾಕಬೇಕು, ಊರೆಲ್ಲಾ ಹೋದಮೇಲೆ ಊರ ಬಾಗಿಲು ಹಾಕಿದರು ಎಂದು ಹೇಳುವ ಹಾಗೆ ನಾವೇ ಇರುವ ಭೂಮಿಯನ್ನೆಲ್ಲಾ ಹಂಚಿಕೊಂಡು ಬಡವರಿಗೆ ಏನೂ ಸಿಗದೇ ಇರುವಹಾಗೆ ಮಾಡುತ್ತಿದ್ದಾರೆ. ಈಚಲು ಜಮೀನು ಮತ್ತು ಬಂಜರು ಜಮೀನುಗಳಲ್ಲಿ ಅರಣ್ಯ ಇಲಾಖೆಯವರು ಬೆಳೆಯುವ ಹುಲ್ಲು ಹಾಗೆಯೇ ಇರಬೇಕೆಂದು ಹೇಳಿದರೆ, ಇರತಕ್ಕ ಜಮೀನುಗಳನ್ನು ಹಾಗೆಯೇ ಹಂಚಿಕೊಳ್ಳಿ ಎಂಬುದಾಗಿ ಹೇಳಿದರೆ ಅದರಿಂದ ಭೂಸುಧಾರಣೆಯಾಗುವುದಿಲ್ಲ. ಒಂದುವೇಳೆ ಭೂಮಿಯನ್ನು ಹಾಗೆಯೇ ಕೊಡಬೇಕೆಂದು ಹೇಳಿದರೆ ಅದು ಆಗುತ್ತದೆ. ಇದಕ್ಕೆ ಲೋಕಲ್ ಕಮಿಟಿ ಮಾಡುತ್ತೇವೆಂದು ಹೇಳಿದರೆ ಎಲ್ಲರಿಗೂ ಭೂಮಿ ಕೊಡುವುದಕ್ಕಾಗುವುದಿಲ್ಲ. ಈಗ ಒಂದು ಪಾಲಿಸಿ ಹಾಕಿದ್ದೀರಿ. ಇರುವ ಜಮೀನನ್ನು ಹಂಚಿಕೊಳ್ಳಿ ಎಂದು ಹೇಳುವಾಗ ಅದನ್ನು ತಡೆಮಾಡದಂತೆ ಕೊಡಬೇಕು. ಉಳುವವನೇ ಭೂಮಿಯ ಒಡೆಯ ಎಂದು ಹೇಳುತ್ತಿರುವಾಗ ಸರ್ಕಾರದವರು ಇದನ್ನು ಹಂತಹಂತವಾಗಿ ಕೊಟ್ಟರೆ ಭೂಮಿ ಇಲ್ಲದೇ ಇರುವವರಿಗೆ ಏನೂ ತೊಂದರೆಯಾಗುತ್ತದೆ ಎನ್ನುವ ವಿವೇಚನೆ ಬೇಕು. ದುಡ್ಡು ಇರುವವರು ಮಾತ್ರ ಆರೀತಿ ತೆಗೆದುಕೊಳ್ಳುವುದಕ್ಕಾಗುತ್ತದೆ. ನಿಜವಾಗಿ ಬಡವನು ಜಮೀನನ್ನು ತೆಗೆದುಕೊಳ್ಳುತ್ತಾನೆಯೇ? ಆಗ ಎಲ್ಲವೂ ಒಂದೇ ಸ್ಥಳದಲ್ಲಿ ಹರಾಜು ಆಗುತ್ತದೆ. ಇದನ್ನು ಸರ್ಕಾರ ಮಾಡುವುದಕ್ಕೆ ಏನು ತೊಂದರೆಯಾಗುತ್ತದೆಂದು ನನ್ನ ಮನಸ್ಸಿನಲ್ಲಿ ಶಂಕೆ ಇದೆ. ಆ ರೀತಿ ಮಾಡಬಾರದು.

ಇನ್ನು ವಿದ್ಯಾಭ್ಯಾಸ ವಿಚಾರದಲ್ಲಿ ತೊಡಕುಗಳು ಬಹಳ ಜಾಸ್ತಿ ಇವೆ. ಈಗ ಪ್ರೈವೇಟಾಗಿ ಏಡೆಡ್ ಇನ್‌ಸ್ಟಿಟ್ಯೂಷನ್ನುಗಳಿಗೆ ಜಾಸ್ತಿಯಾಗಿ ಎಜುಕೇಷನ್‌ಗೆ ಸಹಾಯ ಕೊಟ್ಟಿದ್ದೀರಿ. ಇದರಿಂದ ಬಡಬಗ್ಗರ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ಇತ್ತೀಚೆಗೆ ಹೆಚ್ಚುಹೆಚ್ಚಾಗಿ ಖಾಸಗೀ ಏಡೆಡ್ ಸಂಸ್ಥೆಗಳು ಬಹಳ ಜಾಸ್ತಿಯಾಗುತ್ತಿವೆ. ಇನ್ನು ಫೀಜಿನ ವಿಷಯ ತೆಗೆದುಕೊಂಡು ನೋಡಿದರೆ ಅದೂ ಕೂಡ ಬಡವರ ಮಕ್ಕಳಮೇಲೆ ಹೊರೆ ಜಾಸ್ತಿಯಾಗುತ್ತಿದೆ. ವಿದ್ಯಾಮಂತ್ರಿಗಳು ಒಂದು ಕಡೆ ಭಾಷಣ ಮಾಡುತ್ತಾ ಪಾಠಪ್ರವಚನಗಳ ಕಾಲದಲ್ಲಿ ನೈತಿಕ ವಿಚಾರಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಿ ಸೆಕ್ಯುಲರಿಜಂ ಮತ್ತು ಡೆಮಾಕ್ರಸಿ ಎಂದು ಎರಡು ಇವೆ. ಸೆಕ್ಯುಲರಿಜಂ ಎಂದು ಹೇಳಿದರೆ ಒಂದು ಕೈಲಿ ನೀತಿ ನಿಯಮವೆಂದು ಹೇಳುವುದು, ಇನ್ನೊಂದು ಕೈಯಲ್ಲಿ ಜಾತೀಯತೆ ತರುವುದು, ಇದು ಆಗಬಾರದು ಎಂದು ನಾನು ಹೇಳುತ್ತೇನೆ. ಸ್ವಲ್ಪ ದೂರ ಮುಂದಕ್ಕೆ ಹೋಗಿ ನೋಡಿದರೆ ಈ ವಿಚಾರದಲ್ಲಿ ಮುಂದೆ ಹೋಗಲು ದಾರಿಯಿಲ್ಲ, ಇರಲಿಕ್ಕೆ ನೆರಳಿಲ್ಲವೆಂದು ಹೇಳುವಹಾಗೆ ಆಗಿದೆ. ನೈತಿಕ ವಿಚಾರಗಳನ್ನು ತಿಳಿಸಿದರೆ ಬಹಳ ಒಳ್ಳೆಯದು. ಇದರಲ್ಲಿ ಸರ್ಕಾರಕ್ಕೆ ಖಚಿತವಾದ ನೀತಿ ಏನೂ ಸಿಗಲಿಲ್ಲವೋ ಏನೋ ಎಂದು ನನ್ನ ಮನಸ್ಸಿಗನ್ನಿಸುತ್ತದೆ. ಸುಮ್ಮನೆ ಪಾಠಪ್ರವಚನಗಳನ್ನು ಬರೆಯಿರಿ ಎಂದು ಉಪಾಧ್ಯಾಯರಿಗೆ ಶಾಲೆಗಳಲ್ಲಿ ಕಾಲಹರಣ ಮಾಡಿಸಬೇಡಿ. ಯಾವುದನ್ನು ಹೇಳಬೇಕಾಗಿದೆಯೋ ಅದನ್ನು ಅವರು ಹೇಳಬೇಕು. ರಾಮಾಯಣ, ಮಹಾಭಾರತ, ಭಾಗವತ ಇತ್ಯಾದಿಗಳನ್ನು ಹೇಳಿದರೆ ಒಳ್ಳೆಯದು ಗೋವಿನ ಹಾಡು ಹೇಳಿಸಿದರೆ ಒಳ್ಳೆಯದು. ಏಕೆಂದರೆ ಅದರಲ್ಲಿ ಕವಿಯಾಗಿರುವವರು ಕರ್ಣಾಟಕ ಜನತೆಗೆ ಇರಬೇಕಾದಂಥ ಸತ್ಯ ಸ್ವಭಾವ ಏನೆಂಬುದನ್ನು ಗೋವಿನ ಬಾಯಿಯಲ್ಲಿ ಹೇಳಿಸಿದ್ದಾನೆ. ಆದ್ದರಿಂದ ಇದರ ಉದ್ದ ಅಗಲ ಸರ್ಕಾರಕ್ಕೆ ಇನ್ನೂ ಸಿಗಲಿಲ್ಲವೋ ಏನೋ ಗೊತ್ತಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಸರ್ಕಾರದವರು ಈ ವಿಚಾರಗಳನ್ನು ತಜ್ಞರಿಂದ ತಿಳಿದುಕೊಂಡು ಆ ರೀತಿ ಮಾಡಿಕೊಂಡು ಹೋಗ

ಬೇಕೆಂದು ನಾನು ಹೇಳುತ್ತೇನೆ. ಹಿಂದೆ ವಿದ್ಯಾಭ್ಯಾಸವನ್ನು ಸ್ವಾವಲಂಬನೆ ಮಾಡಬೇಕೆಂದು ಭೂದಾನ ಮತ್ತು ವಿದ್ಯಾದಾನಕ್ಕೋಸ್ಕರ ಸುಮಾರು 37 ಸಾವಿರ ಎಕರೆಗಳಷ್ಟು ಜಮೀನು ದಾನ ವಾಗಿ ದೊರಕಿತ್ತು.

ಅದನ್ನು ಈಗಲಾದರೂ ಒಂದು ಸ್ಟೆಬಿಲೈಜ್ ಸ್ಕೀಮ್ ಮಾಡಿದ್ದಾರೆಯೇ ? ಅಂಥಾ ಒಂದು ನೀತಿ ಎಲ್ಲಿ ಹೋಯಿತು ? ಹೀಗೆ ಪಾಲಿಸಿಯನ್ನು ಹಾಕಿಕೊಂಡಾಗ ಅದನ್ನು ಕಾರ್ಯಗತ ಮಾಡು ವುದರಲ್ಲಿ ಯಾವುದೋ ಒಂದು ಒತ್ತಡಕ್ಕೆ ಸಿಕ್ಕಿ ಅದನ್ನು ಬಿಟ್ಟು ಬಿಡುತ್ತಾರೆಯೇ ? ಈ ರೀತಿ ಮಾಡು ವುದಾದರೆ ಮೈಸೂರಿನ ಕೀರ್ತಿ ಉಳಿಯುತ್ತದೆಯೇ ? ಕೆಲವು ಶಾಸಕರು ಕಾಂಗ್ರೆಸ್ ಸರ್ಕಾರ ಬಹಳ ಚೆನ್ನಾಗಿ ನಡೆಯುತ್ತದೆ ಎನ್ನುವ ಅಶೋತ್ತರಗಳನ್ನು ತೋರಿಸಿದ್ದಾರೆ. ಹರಿಜನೋದ್ಧಾ ರದ ವಿಷಯದಲ್ಲಿ ಬಹಳ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಸ್ವರಾಜ್ಯ ಬರುವುದಕ್ಕಿಂತ ಹಿಂದಿನಿಂದಲೂ ಹರಿಜನೋದ್ಧಾರ ಕಾರ್ಯ ನಡೆದುಕೊಂಡು ಬಂದಿದೆ. ನಮಗೆ ಸ್ವರಾಜ್ಯ ಬಂದಮೇಲೆ ಎಷ್ಟೋ ರೂಪದಲ್ಲಿ ಅದನ್ನು ಬದಲಾವಣೆ ಮಾಡಿ ಇಲಾಖೆಯಲ್ಲಿ ಅಂಕಿ ಅಂಶಗಳನ್ನು ನೋಡಿ ಯೋಜನೆ ಹಾಕಿಕೊಂಡಿದ್ದಾರೆ. ಅದು ನಿಜ ಇರಬಹುದು. ಆದರೆ ಹರಿಜನೋದ್ಧಾರ ಕಾರ್ಯ ಎಷ್ಟು ಚೆನ್ನಾಗಿ ನಡೆಯಬೇಕಾಗಿತ್ತೋ ಅಷ್ಟು ಚೆನ್ನಾಗಿ ನಡೆದಿಲ್ಲ. ಈ ಹರಿಜನೋದ್ಧಾ ರಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದರಲ್ಲಿ ಏನು ನ್ಯೂನತೆಗಳಿದ್ದರೂ ಕೂಡ ಇತ್ತೀಚೆಗೆ ಸರ್ಕಾರದವರು ನೇಮಿಸಿರತಕ್ಕ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ನವರ ವೆಲ್‌ಫೇರಿಗೋಸ್ಕರ ನೇಮಿಸಿರುವ ಸಮಿತಿಯವರು ಜವಾಬ್ದಾರಿಯಿಂದ ಚಾಕಚಕ್ಯತೆಯಿಂದ ಕೆಲಸ ಮಾಡುತ್ತಾರೆ ಎಂದು ಹೇಳಿದ್ದಾರೆ. ಇಷ್ಟೇಸಾಕೇ ? ಹರಿಜನರು ಸ್ವಾವಲಂಬಿಗಳಾಗಿ ಬದುಕುವ ಹಾಗೂ ಅವರ ಉದ್ಧಾರದ ವಿಚಾರವನ್ನು ಕುರಿತು ಮಾಡುವ ಕಾರ್ಯಗಳ ಸಲಹೆಗಾಗಿ ಆ ಸಮಿತಿಯವರ ತಲೆಯಮೇಲೆ ಭಾರವನ್ನು ಹೊರಿಸಿದ್ದಾರೆ. ಆ ಸಮಿತಿಯವರು ರಿಪೋರ್ಟ್ ಕೊಡುವುದು ಯಾವಾಗ ಅದನ್ನು ಕಾರ್ಯಗತ ಮಾಡುವುದು ಯಾವಾಗ, ಆಗ ಈ ಸರ್ಕಾರ ಇರು ತ್ತದೆಯೋ ಇಲ್ಲವೋ, ಆಗ ಈ ಮುಖ್ಯ ಮಂತ್ರಿಗಳು ಇರುತ್ತಾರೆಯೋ ಏನೋ ಇದು ಯೋಚನೆ ಮಾಡತಕ್ಕ ವಿಚಾರ. ಹಿಂದೆ ನಮ್ಮ ಹರಿಜನ ಕೋಮಿಗೆ ಸೇರಿದವರು ಒಬ್ಬರು ಮಂತ್ರಿಗಳು ಇದ್ದರು. ಈಗ ಇಬ್ಬರು ಹರಿಜನ ಮಂತ್ರಿಗಳು ಇದ್ದಾರೆ. ಒಬ್ಬರು ಡೆಪ್ಯುಟಿ ಸ್ಪೀಕರ್ ಇದ್ದಾರೆ. ಮಂತ್ರಿ ಮಂಡಲದಲ್ಲಿ ಪ್ರಾತಿನಿಧ್ಯ ಹೆಚ್ಚಿದರೂ ಕೂಡ ಹರಿಜನರ ಪ್ರಗತಿ ಸಾಧನೆ ಸರಿಯಾಗಿ ಆಗಿಲ್ಲ. ಇವರೆಲ್ಲರೂ ಒಟ್ಟಿಗೆ ಕಲೆತು ಒಳ್ಳೊಳ್ಳೆಯ ಪಾಲಿಸಿಯನ್ನು ಹಾಕಿಕೊಂಡು ಅದನ್ನು ಕಾರ್ಯಗತ ಮಾಡುವ ಯೋಚನೆ ಮಾಡಬೇಕು. ಹರಿಜನರಿಗೆ ಕ್ಲಾಸ್ 1 ಮತ್ತು ಕ್ಲಾಸ್ 4 ಹುದ್ದೆಗಳಲ್ಲಿ ಸಂವಿ ಧಾನ ಹಾಗೂ ಕಾನೂನು ಪ್ರಕಾರ ಅಪಾಯಿಂಟ್‌ಮೆಂಟ್‌ಗಳು ಸಿಕ್ಕದೇ ಇದ್ದುದರಿಂದ ಅದನ್ನು ಸರಿ ಮಾಡುತ್ತೇವೆಂದು ಒಂದು ಕ್ಯಾಬಿನೆಟ್ ಸಬ್ ಕಮಿಟಿಮಾಡಿ ಅವರ ಅಭಿಪ್ರಾಯದ ಪ್ರಕಾರ ಈ ಹರಿಜನ ಗಿರಿಜನ ವರ್ಗಕ್ಕೆ ಸೇರಿದ ಉಮೇದುವಾರರ ನೇಮಕಕ್ಕೆ ಹೆಚ್ಚಿನ ಸಹಾಯವನ್ನು ದೊರಕಿ ಸುವ ದೃಷ್ಟಿಯಿಂದ 33ರ ಚಕ್ರಾನುಸಾರವಾಗಿ ರಿಕ್ತಸ್ಥಾನಗಳನ್ನು ವರ್ಗೀಕರಿಸಬೇಕೆಂದು ಮಾಡಿ ದ್ದಾರೆ. ಒಟ್ಟಿನಲ್ಲಿ ಹರಿಜನೋದ್ಧಾರ ಎಷ್ಟರಮಟ್ಟಿಗೆ ಆಗಬೇಕೆಂದು ನಾವು ನಿರೀಕ್ಷಣೆ ಮಾಡಿದ್ದೆವೋ ಅದು ಆಗಿಲ್ಲ ಎಂದು ಹೇಳಬಹುದು. ನಮ್ಮ ಮಿತ್ರರೊಬ್ಬರು ಹೇಳಿದಹಾಗೆ ರಿಮ್ಯಾಂಡ್ ಹೋಂನಲ್ಲಿ ಒಬ್ಬ ಹುಡುಗನಿಗೆ ಒಂದು ತಿಂಗಳಿಗೆ 45-60 ರೂಪಾಯಿಗಳವರೆಗೂ ಖರ್ಚು ಮಾಡುತ್ತಾರೆ. ಆದರೆ ಹರಿಜನ ಹಾಸ್ಟಲಿನಲ್ಲಿ ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ 30 ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಒಂದು ದಿವಸಕ್ಕೆ ಒಂದು ರೂಪಾಯಿ ಆಯಿತು ಒಂದು ಊಟಕ್ಕೆ 8 ಆಣೆ ಆಯಿತು. 8 ಆಣೆಗೆ ಏನು ಬರುತ್ತದೆ. ಒಂದು ವಡೆ ಒಂದು ಕಾಫಿ ಬರುತ್ತದೆ. ಇದರಿಂದ ಮಕ್ಕಳ ಬುದ್ಧಿ ಯಾವರೀತಿ ಬೆಳೆಯುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಹರಿಜನರ ಮಕ್ಕಳಿಗೆ ಸರ್ಕಾರ ದವರು ಯಾವರೀತಿ ಸಹಾಯ ಮಾಡುತ್ತಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಇತ್ತೀಚೆಗೆ ಸರ್ಕಾರದವರು ಒಂದು ಕಾನೂನು ಮಾಡಿದ್ದಾರೆ ಅದು ಏನೆಂದರೆ ಸ್ಥಳೀಯ ಸಂಸ್ಥೆಗಳು ಮತ್ತು ಅಭಿವೃದ್ಧಿ ಮಂಡಲಿಗಳು ಏರ್ಪಡಿಸುವ ಮನೆ ನಿವೇಶನಗಳ ಪೈಕಿ ಸೇಕಡಾ 10 ನಿವೇಶನಗಳು ಹರಿಜನ ಗಿರಿಜನರಿಗೆ ಮೀಸಲಾಗಿರುತ್ತವೆ, ಗ್ರಾಮಗಳಲ್ಲಿ ರಾಜಸ್ವ ಇಲಾಖೆಯಿಂದ ಹಂಚಿಕೆಗೆ ದೊರೆಯುವ ಕಟ್ಟಡದ ನಿವೇಶಗಳ ಪೈಕಿ ಸೇಕಡಾ 18 ನಿವೇಶನಗಳನ್ನು ಹರಿಜನ ಗಿರಿಜನರಿಗೆ ಕೊಡಲಾಗುವುದು ಎಂದು ಹೇಳಿದ್ದಾರೆ. ಇದು ನಿಜವಾಗಿಯು ಒಂದು ಕುರುಡು ಪಾಠ ಇದ್ದಹಾಗೆ ಇದೆ. 18 ಪರ್ಸೆಂಟ್ ನಿವೇಶನಗಳನ್ನು ಎಲ್ಲಿ ಯಾರು ಕೊಟ್ಟಿದ್ದಾರೆ. ಇದು ಸಿಕ್ಕುತ್ತದೆಯೇ, ಇದು ಅರ್ಥವಿಲ್ಲದ ಮಾತು, ಹರಿಜನರ ನಿವೇಶನಕ್ಕೆ ಸರ್ಕಾರಿ ಭೂಮಿ ಮೀಸಲು ಎಂದರೆ ತಿಪ್ಪೇ ಗುಂಡಿಗಳೇ ? ಇದನ್ನು ಆಳವಾದ ತಿಪ್ಪೇ ಗುಂಡಿಗಳಿಗೆ ಹಾಕಬೇಕೆಂದು ನಿರ್ಣಯ ಮಾಡಿದ್ದಾರೋ ಏನೋ ಗೊತ್ತಿಲ್ಲ. ನ್ಯಾಯವಾಗಿ ಹರಿಜನ ಗಿರಿಜನರಿಗೆ ಎಷ್ಟೆಷ್ಟು ಸೈಟುಗಳನ್ನು ಕೊಡ

(ಶ್ರೀ ಕೆ. ಪ್ರಭಾಕರ್)

ಬೇಕೋ ಅಷ್ಟು ಕೊಡುತ್ತಿಲ್ಲ. ಸಾಮಾನ್ಯವಾಗಿ ಇವರಿಗೆ ಊರಿನ ಹೊರಗಡೆ ಹಾಕುವುದು ಸ್ವಾಭಾವಿಕ. ಇವರ ಮೆಚ್ಚಿಗೆಗೆ ಕಾನೂನನ್ನೇನೋ ಮಾಡುತ್ತಾರೆ. ಆದರೆ ಅವು ನಿರೀಕ್ಷಿಸಿದ ಮಟ್ಟದಲ್ಲಿ ಕಾರ್ಯಗತವಾಗುವುದಿಲ್ಲ. ಆದ್ದರಿಂದ ಇಂಥಾ ಕಾನೂನು ಮಾಡುವಾಗ ಬುದ್ಧಿವಂತರು ಮೆಚ್ಚುವ ಕಾನೂನು ಮಾಡಬೇಕು ಎಂದು ನಾನು ಹೇಳುತ್ತೇನೆ.

ಅಖಿಲಭಾರತ ಕಾಂಗ್ರೆಸ್ಸಿನವರು 7 ವರ್ಷಗಳಲ್ಲಿ ಪಾನನಿರೋಧವನ್ನು ಹಂತ ಹಂತವಾಗಿ ಜಾರಿಗೆ ತರುತ್ತೇವೆಂಬುದನ್ನು ಒಪ್ಪಿದ್ದಾರೆ. ಮೈಸೂರು ಸರ್ಕಾರದವರು ಇದನ್ನು ಒಪ್ಪಿ ಕೊಂಡಿದ್ದಾರೆಂದು ಕಾಣುತ್ತದೆ. ಇದರ ವಿಷಯದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹಾಕಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರನ್ನು ಟೆಂಪರೆನ್ಸ್ ಕಮಿಟಿಯ ಚೇರ್ಮನ್ ಆಗಿ ನೇಮಕ ಮಾಡುತ್ತಾರೆಂದು ಪತ್ರಿಕೆಯಲ್ಲಿ ಬಂದಿತ್ತು. ಅದು ಏನಾಯಿತು ಎಂಬುದನ್ನು ಸ್ವಲ್ಪ ತಿಳಿಸಬೇಕು.

ಶ್ರೀ ಕೆ. ಪ್ರಭಾಕರ್.—ನಾನು ಸಹ ಪತ್ರಿಕೆಯಲ್ಲಿ ಆ ವಿಚಾರವನ್ನು ಓದಿದೆ. ಮತ್ತೆ ಅದರ ಪ್ರಸ್ತಾಪ ಬರಲಿಲ್ಲ. ಪಾನನಿರೋಧದ ವಿಷಯದಲ್ಲಿ ಮೈಸೂರು ಸರ್ಕಾರ ನೀರಸಭಾವದಿಂದ ಇದೆ. ಇದರಿಂದ ಏನಾಗಿದೆ ಎಂದರೆ ಮೈಸೂರು ಸರ್ಕಾರ ಅಖಿಲಭಾರತ ಕಾಂಗ್ರೆಸ್ ತತ್ವಕ್ಕೆ ಒಳಪಟ್ಟು ನಡೆಯುತ್ತದೆಯೋ ಇಲ್ಲವೋ ಎನ್ನುವ ಸಂಶಯ ಬರುತ್ತದೆ. ಈ ವಿಚಾರದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳದೇ ಇರುವುದು ತುಂಬಾ ಶೋಚನೀಯವಾದುದು. ಪಾನನಿರೋಧ ತತ್ವದಲ್ಲಿ ದೃಢ ನಂಬಿಕೆ ಇರುವವರಿಗೆ ತುಂಬಾ ನೋವನ್ನುಂಟುಮಾಡಿದೆ ಎಂದು ನಾನು ಹೇಳಬಯಸು ತ್ತೇನೆ.

ಲಾಟರಿ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಏನೂ ಪ್ರಸ್ತಾಪ ಮಾಡಿಲ್ಲ. ವಿಧಾನ ಸೌಧದ ಮೇಲೆ ಒಂದು ಗ್ಲೋಬ್ ಓಡಾಡುತ್ತಿದೆ. ಅದರ ಮೇಲೆ ಮೈಸೂರು ಲಾಟರಿ ಅಂತ ಬರೆ ದಿದ್ದಾರೆ. ಅಂದ್ರೆ ಮೈಸೂರೇ ಲಾಟ್ರಿನಾ. ಅದರಲ್ಲಿ ಮೈಸೂರು ಲಾಟರಿ ಸ್ಕೀಂ ಅಂತ ಸೇರಿಸಿ ಅಂತಾ ಹೇಳಿ. ಲಾ ಡಿಪಾರ್ಟ್‌ಮೆಂಟ್ ಇರುವುದು ಏತಕ್ಕೆ? ಪಬ್ಲಿಸಿಟಿ ಇಲಾಖೆ ಇರುವುದು ಏತಕ್ಕೆ ಅವರೆಲ್ಲರೂ ಇದನ್ನು ನೋಡುವುದು ಬೇಡವೇ? ಹರಿಜನರಿಗಾಗಿ ತಿಪ್ಪೆಗುಂಡಿಯನ್ನು ಕೊಡತಕ್ಕ ಒಂದು ಯೋಜನೆಯನ್ನು ಮಾಡಿದ್ದಾರೆ. ಲಾಟರಿ ಸ್ಕೀಂ ಒಂದನ್ನು ಮಾಡಿದ್ದಾರೆ. ಮತ್ತೊಂದು ಯೋಜನೆ ಎಂದರೆ ಮತ್ಸ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದ್ದಾರೆ. ಇಡೀ ಭಾರತದಲ್ಲೇ ಪ್ರಪ್ರಥಮವಾಗಿ ಇದನ್ನು ಸ್ಥಾಪನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇಂಥಾ ದೊಡ್ಡದಾದ ಯೋಜನೆಗಳನ್ನು ಸರ್ಕಾರದವರು ಮಾಡಿದ್ದಾರೆ. ಸರ್ಕಾರದವರು ಸರಿಯಾದಂತಹ ಒಂದು ನೀತಿ ನಿಯಮವನ್ನು ಹಾಕಿಕೊಂಡು ಆಡಳಿತವನ್ನು ನಡೆಸಬೇಕು. ಈಗ ಸರ್ಕಾರ ದವರು ತಿಳೀದೆ ಇರೋವ್ರಿಗೆ ಓಟು ಹಕ್ಕು ಕೊಟ್ರು. ಪಾನನಿರೋಧ ತೆಗೆದು ಬಾಟ್ಲಿ ಕೊಟ್ರು ಈಗ ಕೊಟ್ರು ಲಾಟ್ರಿ. ಈ ಗತಿಗೆ ತಂದುಬಿಟ್ರು. ನಮ್ಮ ದೇಶವನ್ನು ಈಗ ಸರ್ಕಾರದವರು ಅನುಸರಿಸ ತಕ್ಕ ನೀತಿ ಏನಿದೆ ಇದು ನೀರಸವಾದ ನೀತಿ. ಸರಿಯಾದಂತಹ ಒಂದು ನೀತಿ ನಿಯಮವನ್ನು ಅನುಸರಿಸಿವೆ, ಸರ್ಕಾರಕ್ಕೆ ಮನಸ್ಸಿಲ್ಲದೆ ಯಾವ ಯೋಜನೆಯನ್ನು ಮಾಡಿದರೂ ಅದರಿಂದ ಪ್ರಯೋಜನವಾಗುವುದಿಲ್ಲ ಎಂದು ನಾನು ಹೇಳುತ್ತೇನೆ.

Mr. DEPUTY SPEAKER.—Now the House stands adjourned and will meet tomorrow at 1-00 P.M.

The House adjourned at Seven of the Clock to meet again at One of the Clock on Friday, the 23rd January 1970.